ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 8 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 231 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಭೀಕರ ಬರಗಾಲಕ್ಕೆ ತುತ್ತಾಗಿರುವ
ರೈತರ ಕಾಪಾಡಿ...ಕಾಪಾಡಿ...

ಸಾಲ ಮರುಪಾವತಿಗೆ ಅವಧಿ ವಿಸ್ತರಿಸಿ; ಒಂದು ವರ್ಷದ ಬಡ್ಡಿಯ ಸರ್ಕಾರವೇ ಪಾವತಿಸಲಿ

● ವಿಧಾನಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರ ಆಗ್ರಹ ● ರೈತರ ಸಾಲ ಮರುಪಾವತಿಗೆ 2025ರವರೆಗೆ ಕಾಲಾವಕಾಶ ನೀಡಿ ● ಬಡ್ಡಿ ರಹಿತ ಸಾಲದ ಮಿತಿ 5 ಲಕ್ಷಕ್ಕೆ ಏರಿಸಿದರೂ ಸಾಲಮಾತ್ರ ನೀಡಿಲ್ಲ ● ರೈತರಿಗೆ ನೀಡುವ ರಾಜ್ಯದ 4 ಸಾವಿರ ನೆರವು ಸ್ಥಗಿತಗೊಂಡಿದೆ ● ರಾಜ್ಯದಲ್ಲಿ ಕರೆಂಟ್ ಕಣ್ಣಾಮುಚ್ಚಾಲೆ ಮುಂದುವರೆದಿದೆ ● ರೈತರು ಕೃಷಿ ಪಂಪ್‌ಸೆಟ್ ಸಂಪರ್ಕ ಪಡೆಯಲು ಸಾಧ್ಯವೇ ಇಲ್ಲದಂತೆ ಮಾಡಿದ್ದೀರಿ ● ವಾಸ್ತವವಾಗಿ ರೈತರಿಗೆ ಎಟಿಎಂ ಆಗಬೇಕಾದ ಸರ್ಕಾರ ಬಿಜೆಪಿಯವರು ಹೇಳಿದಂತೆ 'ಹೈಕಮಾಂಡ್‌ಗೆ ಎಟಿಎಂ' ಆಗಿದೆ



ಬೆಳಗಾವಿ, ಡಿ.7–ಭೀಕರ ಬರಗಾಲದ ಹಿನ್ನೆಲೆಯಲ್ಲಿ ರೈತರ ಸಾಲ ಮರುಪಾವತಿಗೆ ಅವಧಿ ವಿಸ್ತರಿಸುವುದರ ಜೊತೆಗೆ ಒಂದು ವರ್ಷದ ಬಡ್ಡಿ ಮೊತ್ತವನ್ನು ಸರ್ಕಾರವೇ ಭರಿಸುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಭೀಕರ ಬರಗಾಲದಿಂದ ಬೆಳೆಗಳೆಲ್ಲಾ ಸಂಪೂರ್ಣ ಹಾಳಾಗಿ, ರೈತರು ಸಂಕಷ್ಟದಲ್ಲಿದ್ದಾರೆ. ಈ ಸಂದರ್ಭದಲ್ಲಿ ಸಾಲ ಮರುಪಾವತಿ ಅಸಾಧ್ಯ. ಆದರೆ ಸಕಾಲಕ್ಕೆ ಸಾಲ ಮರುಪಾವತಿ ಮಾಡದಿದ್ದರೆ ಆ ವರ್ಷದ ಪೂರ್ಣ ಬಡ್ಡಿಯನ್ನು ಕಟ್ಟಬೇಕಾಗುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತರು ಒತ್ತಡಕ್ಕೆ ಸಿಲುಕುವ ಸಾಧ್ಯತೆ ಇರುತ್ತದೆ. ರೈತರ ಹಿತದೃಷ್ಟಿಯಿಂದ ಸಾಲ ಮನ್ನಾ ಮಾಡಬೇಕು. ಸಾಧ್ಯವಾಗದಿದ್ದರೆ ರೈತರ ಸಾಲದ ಮೇಲಿನ ಒಂದು ವರ್ಷದ ಬಡ್ಡಿಯನ್ನಾದರೂ ಸರ್ಕಾರ ಪಾವತಿಸಬೇಕು. ಜೊತೆಗೆ ಸಾಲ ಮರುಪಾವತಿಗೆ 2025ರ ಜನವರಿವರೆಗೆ ಕಾಲಾವಕಾಶ ನೀಡಬೇಕು ಎಂದು ಆಗ್ರಹಿಸಿದರು. ಜೂನ್ ಕೊನೆ ವಾರದಲ್ಲಿ ಸ್ವಲ್ಪ ಮಳೆ ಬಂದಿದ್ದರಿಂದ ಉತ್ತರ ಕರ್ನಾಟಕ ಭಾಗದ ರೈತರು ತೊಗರಿ, ಹೆಸರು, ಉದ್ದು, ಹಲಸಂದೆ ಬಿತ್ತನೆ ಮಾಡಿದರು. ಆ ಸಂದರ್ಭದಲ್ಲಿ ಬಿತ್ತನೆ ಬೀಜ, ಗೊಬ್ಬರವನ್ನು ಸರ್ಕಾರ ಸಮರ್ಪಕವಾಗಿ ಒದಗಿಸಲಿಲ್ಲ. ಸ್ವಲ್ಪ ತಡವಾಗಿಯಾದರೂ ರೈತರು ಬಿತ್ತನೆ ಮಾಡಿದರು. ಆದರೆ ಮಳೆ ಕೈಕೊಟ್ಟಿದ್ದ ರಿಂದ ಮೊಳಕೆ ಹಂತದಲ್ಲೇ ಎಲ್ಲಾ ಬೆಳೆಗಳು ಸಂಪೂರ್ಣ ನಾಶವಾಯಿತು. ಸರ್ಕಾರದ ಯಾವ ಸಚಿವರು ಕೂಡ ಜಮೀನುಗಳಿಗೆ ಹೋಗಿ ರೈತರ ಕಷ್ಟ ಕೇಳಲಿಲ್ಲ. ಎಷ್ಟು ಬೆಳೆ ನಾಶವಾಗಿದೆ ಎಂದು ವಿಚಾರಿಸಿ ಅವರಿಗೆ ಆತ್ಮಸ್ಥೈರ್ಯ ತುಂಬಲಿಲ್ಲ. ನಿಮ್ಮ ಗಮನ ಏನಿದ್ದರೂ ಐದು ಗ್ಯಾರಂಟಿಗಳಿಗೆ ಹಣ ಹೊಂದಿಸುವುದು ಮತ್ತು ಪಂಚ ರಾಜ್ಯ ಚುನಾವಣೆಯತ್ತ ಮಾತ್ರ ಇತ್ತು. ಬರ ನಿರ್ವಹಣೆಯಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ನೀಡುವ ಸಾಲದ ಮಿತಿಯನ್ನು 3ರಿಂದ 5 ಲಕ್ಷಕ್ಕೆ ಏರಿಸಿ, ಆದೇಶ ಹೊರಡಿಸಿದ್ದೀರಿ. ಆದರೆ ಇದುವರೆಗೂ ಅದು ಜಾರಿಗೆ ಬಂದಿಲ್ಲ ಎಂದು ತರಾಟೆ ತೆಗೆದುಕೊಂಡರು. ರೈತರಿಗೆ ಕಿಸಾನ್ ಸಮ್ಮಾನ್ ಯೋಜನೆಯಡಿ ಕೇಂದ್ರ ಸರ್ಕಾರದಿಂದ 6 ಸಾವಿರ ರೂ. ನೆರವು ನೀಡಲಾಗುತ್ತಿದೆ. ಯಡಿಯೂರಪ್ಪ ನವರು ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯ ಸರ್ಕಾರದಿಂದ 4 ಸಾವಿರ ರೂ. ಸೇರಿಸಿ ಒಟ್ಟು 10 ಸಾವಿರ ರೂ.ಗಳನ್ನು ರೈತರಿಗೆ ನೀಡುತ್ತಿದ್ದರು. ಆದರೆ ಕಾಂಗ್ರೆಸ್ ಸರ್ಕಾರ ಬಂದ ನಂತರ 4 ಸಾವಿರ ನೆರವನ್ನು ಸ್ಥಗಿತಗೊಳಿಸಿದ್ದೀರಿ. ಹಿಂದಿನ ಸರ್ಕಾರಗಳು ಬರ

▶ 9ನೇ ಪುಟಕ್ಕೆ

ಮೈಸೂರು ಪಾಲಿಕೆ ವಲಯ ಕಚೇರಿಯಲ್ಲಿ ಸಿಗರೇಟ್ ಸೇದುವುದನ್ನು ಪ್ರಶ್ನಿಸಿದ್ದಕ್ಕೆ ರೆವಿನ್ಯೂ ಇನ್ಸ್‌ಪೆಕ್ಟರ್ ಮೇಲೆ
ಯುವಕನಿಂದ ತೀವ್ರ ಹಲ್ಲೆ

● ಮೈಸೂರಲ್ಲಿ ಪುಂಡರ ಹಾವಳಿಗೆ ಬ್ರೇಕ್ ಹಾಕದ ಪೊಲೀಸರು ● ಜನ ಭಯ–ಭೀತಿಯಿಂದ ಜೀವನ ನಡೆಸಬೇಕಾದ ಪರಿಸ್ಥಿತಿ ● ಪಾಲಿಕೆ ನೌಕರರು ಪ್ರತಿಭಟನೆ ಎಚ್ಚರಿಕೆ ನೀಡಿದ ನಂತರ ಆರೋಪಿ ಬಂಧಿಸಿದ ಪೊಲೀಸರು



ಮೈಸೂರು, ಡಿ.7(ಬಿಎಲ್‌ಯು)– ಮೈಸೂರು ನಗರ ಪಾಲಿಕೆಯ ವಲಯ ಕಚೇರಿಯಲ್ಲಿ ಸಿಗರೇಟ್ ಸೇದುವುದನ್ನು ಪ್ರಶ್ನಿಸಿದ ರೆವಿನ್ಯೂ ಇನ್ಸ್‌ಪೆಕ್ಟರ್ (ಕಂದಾಯ ನಿರೀಕ್ಷಕ) ಮೇಲೆ ಯುವಕ ಏಕಾಏಕಿ ಹಲ್ಲೆ ನಡೆಸಿದ ಘಟನೆ ಮೈಸೂರಿನ ಹೆಬ್ಬಾಳಿನಲ್ಲಿ ನಡೆದಿದೆ.

ಹೆಬ್ಬಾಳಿನ ನಗರಪಾಲಿಕೆ ವಲಯ ಕಚೇರಿ 5ರಲ್ಲಿ ಈ ಘಟನೆ ನಡೆದಿದ್ದು, ರೆವಿನ್ಯೂ ಇನ್ಸ್‌ಪೆಕ್ಟರ್ ನಂದಕುಮಾರ್ ಹಲ್ಲೆಗೊಳಗಾಗಿದ್ದಾರೆ. ವಲಯ ಕಚೇರಿ ಬಾಗಿಲಲ್ಲಿ ನಿಂತು ಕುಂಬಾರಕೊಪ್ಪಲಿನ ಧನುಷ್ ಎಂಬಾತ ಸಿಗರೇಟ್ ಸೇದುತ್ತಿದ್ದ. ಇದು ಸರ್ಕಾರಿ ಕಚೇರಿಯಾಗಿದ್ದು, ಇಲ್ಲಿ ಸಿಗರೇಟ್ ಸೇದಬಾರದು ಎಂದು ನಂದಕುಮಾರ್ ತಿಳಿಹೇಳಿ,

▶ 9ನೇ ಪುಟಕ್ಕೆ

ಓದುಗರ ಪತ್ರದ ದೂರಿನಂತೆ ಕ್ರಮ

ಕಾನೂನು ಸುವ್ಯವಸ್ಥೆ ಸಂಬಂಧ ಸಾರ್ವಜನಿಕರು ದಿನಪತ್ರಿಕೆಗಳ ಓದುಗರ ಪತ್ರದಲ್ಲಿ ಬರೆಯುವಂತಹ ದೂರು–ದುಮ್ಮಾನ, ಸಮಸ್ಯೆ ಆಧರಿಸಿ ಕ್ರಮ ಕೈಗೊಳ್ಳುತ್ತಿದ್ದೇವೆ. ಓದುಗರ ಪತ್ರಗಳನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸುತ್ತಿದೆ. ಆಯಾ ದಿನ ಓದುಗರ ಪತ್ರದಲ್ಲಿ ಜನರ ದೂರಿನ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ. – ಮುತ್ತುರಾಜ್, ಉಪ ಪೊಲೀಸ್ ಆಯುಕ್ತ.

ಏಕಾಏಕಿ ವ್ಯಕ್ತಿ ಮೇಲೆ ಹಲ್ಲೆ: ಅಟ್ಟಹಾಸ ಮೆರೆದ ಪುಂಡರ ವಿರುದ್ಧ ಇನ್ನು ಕ್ರಮ ಕೈಗೊಂಡಿಲ್ಲ

ಮೈಸೂರು ಹೆಬ್ಬಾಳಿನ ಅಭಿಷೇಕ್ ಸರ್ಕಲ್ ಬಳಿ ಬೈಕ್‌ನಲ್ಲಿ ತಮ್ಮಷ್ಟಕ್ಕೆ ತಾವು ಹೋಗುತ್ತಿದ್ದ ವ್ಯಕ್ತಿ ಮೇಲೆ ಏಕಾಏಕಿ ಹಲ್ಲೆ ನಡೆಸಿದ ಘಟನೆ ನಡೆದು 10 ದಿನಗಳಾದರೂ ಪೊಲೀಸರು ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ.

ಅಭಿಷೇಕ್ ಸರ್ಕಲ್ ಬಳಿ ಸ್ಕೂಟರ್ ಸವಾರರಿಬ್ಬರು, ಬೈಕ್‌ನಲ್ಲಿ ಹೋಗುತ್ತಿದ್ದ ವ್ಯಕ್ತಿ ತಡೆದು, ಏಕಾಏಕಿ ಹಿಗ್ಗಾಮುಗ್ಗಾ ಥಳಿಸಿ, ತಲೆಗೆ ಡಿಚ್ಚಿ ಹೊಡೆದಿದ್ದರು. ಪಕ್ಕದಲ್ಲಿ ಬಸ್ ನಿಲ್ದಾಣವಿದ್ದು, ಬಸ್ಸಿಗಾಗಿ ಕಾಯುತ್ತಿದ್ದವರು ಭಯಭೀತರಾಗಿದ್ದರು. ಕಾರಣವಿಲ್ಲದೆ ಹಲ್ಲೆ ನಡೆಸಿ ಪುಂಡರು ಪರಾರಿಯಾಗಿದ್ದರು. ಈ ಸಂಬಂಧ 'ಮೈಸೂರು ಮಿತ್ರ'ನ ನವೆಂಬರ್ 26ರ ಸಂಚಿಕೆಯ ಓದುಗರ ಪತ್ರದ ವಿಭಾಗದಲ್ಲಿ 'ಸ್ಕೂಟರ್‌ನಲ್ಲಿ ಬಂದರು, ಹಿಗ್ಗಾಮುಗ್ಗಾ ಹೊಡೆದರು, ಪರಾರಿಯಾದರು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಬರೆದಿದ್ದರು. ಓದುಗರ ಪತ್ರದಲ್ಲಿ ಪ್ರಕಟವಾಗುವ ಸಾರ್ವಜನಿಕರ ದೂರು ದುಮ್ಮಾನಗಳನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ಕ್ರಮ ಕೈಗೊಳ್ಳುತ್ತೇವೆ ಎಂದು ಡಿಸಿಪಿ ಮುತ್ತುರಾಜ್ ಹೇಳುತ್ತಾರೆ. ಆದರೆ ಈ ಪ್ರಕರಣದಲ್ಲಿ ಇನ್ನು ಯಾಕೆ ಕ್ರಮ ಕೈಗೊಂಡಿಲ್ಲ ಎಂಬುದು

▶ 9ನೇ ಪುಟಕ್ಕೆ

ಮೈಸೂರು ಎಂಜಿ ರಸ್ತೆ ತರಕಾರಿ ಮಾರುಕಟ್ಟೆ ಜಾಗ ಖಾಸಗಿ ವ್ಯಕ್ತಿ ವಶಕ್ಕೆ

● ಇಲ್ಲಿರುವ ತರಕಾರಿ ವ್ಯಾಪಾರಿಗಳು ಅತಂತ್ರ ● ರಾಜ ಮನೆತನದವರಿಂದ ತೆರಿಗೆ ಬಾಕಿಗಾಗಿ ಆದಾಯ ತೆರಿಗೆ ಇಲಾಖೆ ಇದನ್ನು ಜಪ್ತಿ ಮಾಡಿತ್ತು; ಐಟಿ ಹರಾಜಿನಲ್ಲಿ ಬೆಂಗಳೂರಿನ ವಿಜಯ ಕುಮಾರ್ ಖರೀದಿಸಿದ್ದರು ● ಆದರೆ ವಸ್ತುಪ್ರದರ್ಶನ ಪ್ರಾಧಿಕಾರ ತನಗೆ ಸೇರಿದ ಜಾಗವೆಂದು ಕೋರ್ಟ್ ಮೆಟ್ಟಿಲೇರಿತ್ತು

ಮೈಸೂರು, ಡಿ.7–ಮೈಸೂರಿನ ಎಂ.ಜಿ. ರಸ್ತೆಯಲ್ಲಿ ಪ್ರಸ್ತುತ ತರಕಾರಿ ಮಾರುಕಟ್ಟೆ ಇರುವ ಎರಡು ಎಕರೆ ಭೂಮಿ ಖಾಸಗಿ ವ್ಯಕ್ತಿಗೆ ಸೇರಿದ್ದು ಎಂದು ಮೈಸೂರು ಜಿಲ್ಲಾ ಪ್ರಧಾನ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಜಿ.ಎನ್. ಸಂಗ್ರೇಶಿ (ಹಾಲಿ ಕಾನೂನು ಕಾರ್ಯದರ್ಶಿ) ಅವರು ತೀರ್ಪು ನೀಡಿದ್ದಾರೆ.

ಈ ಭೂಮಿಯ ಹಕ್ಕುಬಾಧ್ಯತೆ ಬೆಂಗಳೂರಿನ ದೊಮ್ಮಲೂರು ನಿವಾಸಿ ಎನ್. ವಿಜಯಕುಮಾರ್ ಅವರಿಗೆ ಸೇರಿದ್ದಾಗಿದ್ದು, ಅವರ ಹಕ್ಕುಬಾಧ್ಯತೆಯನ್ನು ರಾಜ್ಯ

ಮೈಸೂರು ಜಿಲ್ಲಾ ಪ್ರಧಾನ ಸೆಷನ್ಸ್ ಕೋರ್ಟ್ ತೀರ್ಪು

ಸರ್ಕಾರವಾಗಲೀ ಅಥವಾ ಯಾವುದೇ ಸಂಸ್ಥೆಯಾಗಲೀ ಪ್ರಶ್ನಿಸುವಂತಿಲ್ಲ ಎಂದು ಅವರು ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ. ಇದೀಗ ಇಲ್ಲಿನ ತರಕಾರಿ ಮಾರುಕಟ್ಟೆಯನ್ನು ಅನಿವಾರ್ಯವಾಗಿ ಬೇರೆಡೆಗೆ ಸ್ಥಳಾಂತರಿಸಬೇಕಾದ ಪರಿಸ್ಥಿತಿ ಈಗ ನಿರ್ಮಾಣವಾಗಿದೆ.

ವಿವರ: ಮೈಸೂರಿನ ಗರಿಕೆಮಾಳ ಪ್ರದೇಶದ 145 ಎಕರೆ 13 ಗುಂಟೆ ಭೂಮಿಯು ಮೈಸೂರು ರಾಜವಂಶಸ್ಥರಿಗೆ ಸೇರಿದ್ದಾ



ಗಿದ್ದು, ದಿವಂಗತ ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿದ್ದ ವೇಳೆ ಅದರ ಪೈಕಿ 80 ಎಕರೆ ಭೂಮಿಯನ್ನು ರಾಜ್ಯ ಸರ್ಕಾರ ಸ್ವಾಧೀನಪಡಿಸಿಕೊಂಡು ಜೆ.ಕೆ.ಮೈದಾನದಲ್ಲಿ ನಡೆಯುತ್ತಿದ್ದ ದಸರಾ ವಸ್ತುಪ್ರದರ್ಶನವನ್ನು ಇಲ್ಲಿಗೆ ಸ್ಥಳಾಂತರಿಸಿ 80 ಎಕರೆ ಭೂಮಿಯನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವಶಕ್ಕೆ ನೀಡಲಾಗಿತ್ತು. ರಾಜವಂಶಸ್ಥರಾದ ದಿ.ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಅವರು ಪಾವತಿಸಬೇಕಾಗಿದ್ದ ಆದಾಯ ತೆರಿಗೆ ಬಾಕಿಗಾಗಿ ಅವರ ಒಪ್ಪಿಗೆಯಂತೆ ಈಗಿನ ತರಕಾರಿ ಮಾರುಕಟ್ಟೆಯ 2 ಎಕರೆ ಭೂಮಿಯನ್ನು ಆದಾಯ ತೆರಿಗೆ ಇಲಾಖೆ ಹರಾಜು ಮಾಡಿದ್ದು, ಬೆಂಗಳೂರಿನ ದೊಮ್ಮಲೂರು ನಿವಾಸಿ ಎನ್.ವಿಜಯ ಕುಮಾರ್ ಅವರು 1994ರ ಮೇ 27ರಂದು 92,800 ರೂ.ಗಳಿಗೆ ಹರಾಜು ಮೂಲಕ ಈ ಭೂಮಿಯನ್ನು ಆದಾಯ ತೆರಿಗೆ ಇಲಾಖೆಯಿಂದ ಖರೀದಿಸಿದ್ದರು. ಅವರಿಗೆ 1994ರ ಅ.28ರಂದು ಸೇಲ್ಸ್ ಸರ್ಟಿಫಿಕೇಟ್ ನೀಡಲಾಗಿತ್ತು. ಆದರೆ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರವು ಗರಿಕೆ ಮಾಳದ ಸಂಪೂರ್ಣ 145.13 ಎಕರೆ ಭೂಮಿಯೂ

▶ 9ನೇ ಪುಟಕ್ಕೆ

ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಬೈಸಿಕಲ್ ವಿತರಣೆ: ಶೀಘ್ರ ನಿರ್ಧಾರ

● ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭರವಸೆ ● ಮಕ್ಕಳಿಗೆ ಅಗತ್ಯವಿರುವ ಸೌಕರ್ಯ ಕಲ್ಪಿಸಲು ಎಲ್ಲಾ ಸಿದ್ಧತೆ



ಬೆಂಗಳೂರು, ಡಿ.7(ಕೆಎಂಶಿ)– ಸರಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣೆ ಕಾರ್ಯಕ್ರಮ ಮುಂದುವರೆಸುವ ಬಗ್ಗೆ ಶೀಘ್ರವೇ ತೀರ್ಮಾನ ಕೈಗೊಳ್ಳುವುದಾಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಪ್ರದೀಪ್ ಈಶ್ವರ್ ಪ್ರಸ್ತಾವಕ್ಕೆ



ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಈ ಹಿಂದೆ 2019–20ನೇ ಸಾಲಿನಲ್ಲಿ ಉಚಿತ ಬೈಸಿಕಲ್ ವಿತರಣೆ ಮಾಡಲಾಗಿತ್ತು. ಪ್ರಸ್ತುತ ಸಾಲಿನಲ್ಲಿ ಸರಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಬೈಸಿಕಲ್ ವಿತರಿಸಲಾಗುತ್ತಿಲ್ಲ. ಆದರೆ, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಶಾಲೆಗೆ ನಿರಂತರವಾಗಿ ಹಾಜರಾಗಲು ಅನುಕೂಲವಾಗುವಂತೆ ಸರಕಾರಿ ಬಸ್‌ಗಳಲ್ಲಿ ಪ್ರಯಾಣಿಸಲು ಉಚಿತವಾಗಿ ಬಸ್ ಪಾಸ್ ವಿತರಿಸುತ್ತಿದೆ.

ಸಾರಿಗೆ ಭತ್ಯೆ: ಸರ್ಕಾರಿ ಶಾಲೆಗಳ

▶ 9ನೇ ಪುಟಕ್ಕೆ

ದೊಡ್ಡ ಗಡಿಯಾರ ನವೀಕರಣ ಕಾಮಗಾರಿ ಶೀಘ್ರ ಆರಂಭ



ಪುರಭವನದ ಎದುರಿನ ಸಿಲ್ವರ್ ಜುಬಿಲಿ ಕ್ಲಾಕ್ ಟವರ್

ಮೈಸೂರು, ಡಿ.7(ಆರ್‌ಕೆ)–ಮೈಸೂರಿನ ಹೃದಯ ಭಾಗದಲ್ಲಿರುವ ರಂಗಾಚಾರ್ಲು ಪುರಭವನದ ಎದುರಿನ ದೊಡ್ಡ ಗಡಿಯಾರ (Silver Jubilee Clock Tower)ದ ನವೀಕರಣ ಕಾಮಗಾರಿಯನ್ನು ಶೀಘ್ರ ಆರಂಭಿಸಲಾಗುವುದು.

ಪ್ರಾಚ್ಯವಸ್ತು ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆಯು 42 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ದೊಡ್ಡ ಗಡಿಯಾರದ ಪಾರಂಪರಿಕ ಸ್ಮಾರಕವನ್ನು ಸಂರಕ್ಷಿಸಲು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದ್ದು, ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದ ಬಳಿಕ ಕಾಮಗಾರಿ ಆರಂಭಿಸಲಾಗುವುದು ಎಂದು ಪಾರಂಪರಿಕ ಇಲಾಖೆ ಉಪ ನಿರ್ದೇಶಕಿ ಮಂಜುಳಾ ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯು ಅನುದಾನ ಮಂಜೂರು ಮಾಡಿದ್ದು, ಈಗಾಗಲೇ ಮೊದಲ ಹಂತದ ಹಣ ಬಿಡುಗಡೆ ಮಾಡಿರುವುದರಿಂದ ಟೆಂಡರ್‌ದಾರ ಸಂಸ್ಥೆಯು ಅತೀ ಶೀಘ್ರ ಪಾರಂಪರಿಕ ದೊಡ್ಡ ಗಡಿಯಾರ ಸ್ಮಾರಕವನ್ನು ಪಾರಂಪರಿಕ ಶೈಲಿಯಲ್ಲಿ ನವೀಕರಿಸಲಿದೆ ಎಂದು ಅವರು ತಿಳಿಸಿದರು.

ಮೈಸೂರು ಸಂಸ್ಥಾನ ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಡಳಿತದ 25ನೇ ವರ್ಷ ಪೂರೈಸಿದ್ದ ಸವಿನೆನಪಿಗಾಗಿ 1927ರಲ್ಲಿ 96 ವರ್ಷಗಳ ಹಿಂದೆ ನಿರ್ಮಿಸಿದ್ದ ದೊಡ್ಡ ಗಡಿಯಾರವು ಶಿಥಿಲಗೊಂಡು ತೀವ್ರ ಅಧೋಗತಿಗೆ ತಲುಪಿತ್ತು. ಈ ಪಾರಂಪರಿಕ ಕಟ್ಟಡವನ್ನು ದುರಸ್ತಿಗೊಳಿಸಿ ಸಂರಕ್ಷಿಸಲು ಮೈಸೂರು ಮಹಾನಗರ ಪಾಲಿಕೆಯು ಮುಂದಾಗಿ ಅನುದಾನ ಹಂಚಿಕೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ಹಿಂದೆ ಪಾರಂಪರಿಕ ಇಲಾಖೆ ಆಯುಕ್ತ ಎ.ದೇವರಾಜ್, ಉಪ ನಿರ್ದೇಶಕಿ ಮಂಜುಳಾ, ಮೇಯರ್ ಶಿವಕುಮಾರ್, ಹಿಂದಿನ ನಗರಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಇತಿಹಾಸ–ಪಾರಂಪರಿಕ ತಜ್ಞ ಪ್ರೊ. ಎನ್.ಎಸ್.ರಂಗರಾಜು ಅವರು ಹಲವು ಬಾರಿ ದೊಡ್ಡ ಗಡಿಯಾರಕ್ಕೆ ಭೇಟಿ ನೀಡಿ ಪರಿಶೀಲಿಸಿ, ತಕ್ಷಣ ದುರಸ್ತಿ ಮಾಡದಿದ್ದಲ್ಲಿ ಪಾರಂಪರಿಕ ನಿರ್ಮಾಣ ಶಿಥಿಲಗೊಳ್ಳುತ್ತದೆ ಎಂದು ಮನದಟ್ಟು ಮಾಡಿಕೊಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು.

ಸರ್ಕಾರದ ಸೌಲಭ್ಯಗಳ ಮಾಹಿತಿಯನ್ನು ಜನರಿಗೆ ತಲುಪಿಸುವಲ್ಲಿ ಮಾಧ್ಯಮಗಳ ಪಾತ್ರ ಬಹಳ ಪ್ರಮುಖವಾದುದು

ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅಭಿಮತ



ಮೈಸೂರು, ಡಿ.7(ಆರ್‌ಕೆ)–ಸರ್ಕಾರದ ಯೋಜನೆ, ಸೌಲಭ್ಯಗಳ ಮಾಹಿತಿಯನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಮಾಧ್ಯಮಗಳ ಪಾತ್ರ ಪ್ರಮುಖವಾದುದು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅವರು ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಭಾರತ ಸರ್ಕಾರದ ವಾರ್ತಾ ಇಲಾಖೆ, ಪ್ರೆಸ್ ಇನ್‌ಫರ್ಮೇಷನ್ ಬ್ಯೂರೋ, ಕೇಂದ್ರ ಸಂವಹನ ಇಲಾಖೆ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಮೈಸೂರು ವಿಶ್ವವಿದ್ಯಾನಿಲಯದ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಸಿದ್ಧಾರ್ಥ ಹೋಟೆಲಿನಲ್ಲಿ ಇಂದು ಮಾಧ್ಯಮ ಪ್ರತಿನಿಧಿಗಳಿಗಾಗಿ ಆಯೋಜಿಸಿದ್ದ 'ವಾರ್ತಾಲಾಪ' ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಗ್ರಾಮೀಣ ಪ್ರದೇಶದ ಹಾಗೂ ದೇಶದ ಕಟ್ಟಕಡೆಯ ವ್ಯಕ್ತಿಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿ ಮಾಡುವ ಜನಪರ ಯೋಜನೆಗಳ ಮಾಹಿತಿಯನ್ನು ತಲುಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಮುದ್ರಣ, ವಿದ್ಯುನ್ಮಾನ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳ ಪಾತ್ರ ಮುಖ್ಯವಾಗಿದ್ದು, ಗ್ರಾಮ, ತಾಲೂಕು ಮಟ್ಟದಲ್ಲಿ ಪತ್ರಿಕೆಗಳು ಸಂಪರ್ಕ ಕೊಂಡಿಯಾಗಿರುವುದು ಶ್ಲಾಘನೀಯ ಎಂದರು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಭಾರತ ಸರ್ಕಾರದ ವಾರ್ತಾ ಶಾಖೆ ಹೆಚ್ಚುವರಿ ಮಹಾನಿರ್ದೇಶಕ ಎಸ್.ಜಿ. ರವೀಂದ್ರ , ಕೇಂದ್ರ ಸರ್ಕಾರದ 79 ಯೋಜನೆಗಳ ಬಗ್ಗೆ ಪ್ರಚಾರ ಮಾಡಲು ರಾಜ್ಯದಲ್ಲಿ ಇಲಾಖೆಯ 49 ವಾಹನಗಳು ಸಂಚರಿಸುತ್ತಿವೆ. ಬುಡಕಟ್ಟು ಜನಾಂಗದ ಮಕ್ಕಳ ವಿದ್ಯಾಭ್ಯಾಸಕ್ಕೆ ಏಕಲವ್ಯ ಶಾಲೆಗಳನ್ನು ತೆರೆಯಲಾಗಿದೆ ಎಂದರು.

ವಿಕಸಿತ ಭಾರತ ಸಂಕಲ್ಪ ಯಾತ್ರೆಯು ದೇಶಾದ್ಯಂತ ನಡೆಯುತ್ತಿದೆ. ಡಿಸೆಂಬರ್ 9ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕೋಲಾರ ಮತ್ತು ತುಮಕೂರು ಜಿಲ್ಲೆಗಳ ಜನರೊಂದಿಗೆ ವರ್ಚುಯಲ್ ಮೂಲಕ ಕಾರ್ಯಕ್ರಮ ಕುರಿತು ಸಂವಾದ ನಡೆಸಲಿದ್ದಾರೆ. ರಾಜ್ಯದ ಆರೋಗ್ಯ ಇಲಾಖೆ ಅಧಿಕಾರಿಗಳು ಕೇಂದ್ರ ಪುರಸ್ಕೃತ ಯೋಜನೆ ಅನುಷ್ಠಾನದಲ್ಲಿ ಅನುಕೂಲ ಪಡೆದು ಜೀವನ ವೃದ್ಧಿಯಾಗಿರುವ ಬಗ್ಗೆ ಮಾಧ್ಯಮಗಳ ಮೂಲಕ ಬೆಳಕಿಗೆ ತಂದರೆ ಇತರ ಫಲಾನುಭವಿಗಳಿಗೂ ಅನುಕೂಲವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಈ ಸಂದರ್ಭ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ.ಕುಮಾರಸ್ವಾಮಿ, ಈ ಹಿಂದೆ ಕೋವಿಡ್ ಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸಿದ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ, ಪಲ್ಸ್ ಪೋಲಿಯೋ, ಕುಷ್ಠರೋಗ, ಕ್ಷಯರೋಗಗಳ ನಿರ್ಮೂಲನೆಗೆ ಪ್ರಯತ್ನಿಸುತ್ತಿದ್ದಾರೆ. ಆರೋಗ್ಯ ಕಾರ್ಯಕರ್ತೆಯರು ಮನೆ–ಮನೆಗೆ ಇಲಾಖೆ ಸೇವೆಗಳ ಬಗ್ಗೆ ಮಾಹಿತಿ ನೀಡುತ್ತಿದ್ದು, ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಕಾರ್ಡ್‌ಗಳನ್ನು ನೀಡುತ್ತಿದ್ದಾರೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಪ್ರೊ. ಎಂ.ಎಸ್.ಸಪ್ನಾ, ಕನ್ನಡ ಪ್ರಭ ಕಾರ್ಯನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನಕುಮಾರ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಲೀಡ್ ಬ್ಯಾಂಕ್ ಮ್ಯಾನೇಜರ್ ವಿ.ಎನ್. ನಾಗೇಶ್ ಅವರು ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದರು.

ನಂತರ ನಡೆದ ಗೋಷ್ಠಿಗಳಲ್ಲಿ ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ ಯೋಜನೆ ಬಗ್ಗೆ ನೋಡಲ್ ಅಧಿಕಾರಿ ಡಾ. ಬಿ.ಬೃಂದಾ, ಪ್ರಧಾನಮಂತ್ರಿ ಉಜ್ವಲ ಯೋಜನೆ ಬಗ್ಗೆ ಪಿಓಸಿ ಅಸಿಸ್ಟೆಂಟ್ ಮ್ಯಾನೇಜರ್ ಹರ್ಷ, ಪ್ರಧಾನ ಮಂತ್ರಿ ಜನ್–ಧನ್ ಯೋಜನೆ ಬಗ್ಗೆ ಎಸ್‌ಬಿಐನ ಡಿ.ಟಿ.ವೆಂಕಟೇಶ್, ವಿಕಸಿತ ಭಾರತ ಸಂಕಲ್ಪ ಯಾತ್ರೆ ಕುರಿತು ಲೀಡ್ ಬ್ಯಾಂಕ್ ಮ್ಯಾನೇ ಜರ್ ವಿ.ಎನ್. ನಾಗೇಶ್, ಕಿಸಾನ್ ಕ್ರೆಡಿಟ್ ಕಾರ್ಡ್ ಬಗ್ಗೆ ಕೆಜಿಬಿ ಪ್ರಾದೇಶಿಕ ವ್ಯವಸ್ಥಾಪಕ ಶಂಕರನಾರಾಯಣ್, ಮುದ್ರಾ ಯೋಜನೆ ಬಗ್ಗೆ ಎಸ್‌ಬಿಐ ಚೀಫ್ ಮ್ಯಾನೇಜರ್ ಕೆ.ವೇಣುಗೋಪಾಲರಾವ್, ಸಿಕಲ್ ಸೆಲ್ ಅನೀಮಿಯಾ ಕುರಿತಂತೆ ಜಿಲ್ಲಾ ಟಿಬಿ ನಿಯಂತ್ರಣಾಧಿಕಾರಿ ಡಾ.ಮೊಹಮ್ಮದ್ ಶಿರಾಜ್ ಅಹಮದ್, ಸಾಂಕ್ರಾಮಿಕ ರೋಗ ನಿಯಂತ್ರಣ ಸಂಬಂಧ ಡಾ.ಮಹದೇವ ಪ್ರಸಾದ್ ವಿಷಯ ಮಂಡಿಸಿದರು. ಪ್ರೆಸ್ ಇನ್ಫರ್‌ಮೇಷನ್ ಬ್ಯೂರೋದ ಶೃತಿ, ಪ್ರಕಾಶ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಮಾಹಿತಿ ಅಧಿಕಾರಿ ರಮೇಶ್ ಕಾರ್ಯಕ್ರಮ ಸಂಯೋಜಿಸಿದ್ದರು.

ನಾಳೆ ಕಲಾ ಶಾರದಾ–2023 ಬಹುಮಾನ ವಿತರಣೆ

ಮೈಸೂರು, ಡಿ. 7– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಪದವಿಪೂರ್ವ ಕಾಲೇಜಿನ ವತಿಯಿಂದ ನಡೆಯುವ ಕಲಾ ಶಾರದಾ–2023 ಅಂತರ ಕಾಲೇಜು ಸಾಂಸ್ಕೃತಿಕ ಕಾರ್ಯಕ್ರಮದ ಬಹುಮಾನ ವಿತರಣಾ ಸಮಾರಂಭವನ್ನು ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಡಿ.9 ರಂದು ಬೆಳಿಗ್ಗೆ 10:30ಕ್ಕೆ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ ಭಾಗವಹಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಶಾರದಾ ವಿಲಾಸ ವಿದ್ಯಾಸಂಸ್ಥೆಗಳ ಅಧ್ಯಕ್ಷ ಡಾ.ಬಿ.ಎಂ. ಸುಬ್ರಾಯ, ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್ ಉಪಸ್ಥಿತರಿರುತ್ತಾರೆ.

9ನೇ ಅಂತಾರಾಷ್ಟ್ರೀಯ ಆಹಾರ ಸಮ್ಮೇಳನ-ಇಫ್‌ಕಾನ್ 2023ಕ್ಕೆ ಚಾಲನೆ

ರೈತರಿಗೆ ಬಾಹ್ಯಾಕಾಶ ತಂತ್ರಜ್ಞಾನದಿಂದ ಭಾರಿ ಪ್ರಯೋಜನ

ಆಹಾರ ಸಂಸ್ಕರಣೆ ಸಂಬಂಧ ದೇಶದಲ್ಲಿ ಸಣ್ಣ ಕೈಗಾರಿಕಾ ಚಟುವಟಿಕೆಗಳಿಗೆ ದೊಡ್ಡ ಮಟ್ಟದಲ್ಲಿ ಉತ್ತೇಜಿಸಬೇಕು; ಇಸ್ರೋ ಅಧ್ಯಕ್ಷ ಡಾ.ಎಸ್.ಸೋಮನಾಥ್ ಅಭಿಮತ



ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಗುರುವಾರ ನಡೆದ '9ನೇ ಅಂತಾರಾಷ್ಟ್ರೀಯ ಆಹಾರ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಇಸ್ರೋ ಅಧ್ಯಕ್ಷ ಡಾ.ಎಸ್.ಸೋಮನಾಥ್ (ಎಡದಿಂದ 3ನೇಯವರು) ಸಮ್ಮೇಳನದ ಸ್ಮರಣಿಕೆ ಬಿಡುಗಡೆ ಮಾಡಿದರು. (ಎಡದಿಂದ) ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಸುರೇಶ್ ಡಿ.ಸಖರೆ, ಸಿಎಫ್‌ಟಿಆರ್‌ಐನ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಎಎಫ್‌ಎಸ್‌ಟಿ (ಐ) ಅಧ್ಯಕ್ಷ ಡಾ.ಎನ್.ಭಾಸ್ಕರ್, ಮೈಸೂರು ರಾಜವಂಶಸ್ಥೆ ಡಾ.ಪ್ರಮೋದಾ ದೇವಿ ಒಡೆಯರ್, ಡಿಆರ್‌ಡಿಓ–ಡಿಎಫ್‌ಆರ್‌ಎಲ್ ನಿರ್ದೇಶಕ ಡಾ.ಅನಿಲ್ ದತ್ ಸೆಮ್ವಾಲ್, ಸಮ್ಮೇಳನದ ಸಂಚಾಲಕ ಡಾ.ತನಾಜಿ ಕುದ್ರೆ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಡಿ.7(ಪಿಎಂ)–ಆಹಾರ ಸಂಸ್ಕರಣೆ ಸಂಬಂಧ ಪ್ರಸ್ತುತ ದೇಶದಲ್ಲಿ ಸಣ್ಣ ಸಣ್ಣ ಕೈಗಾರಿಕಾ ಚಟುವಟಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ತೇಜಿಸುವ ಅಗತ್ಯವಿದೆ ಎಂದು ಇಸ್ರೋ ಅಧ್ಯಕ್ಷ ಡಾ.ಎಸ್. ಸೋಮನಾಥ್ ಅಭಿಪ್ರಾಯಪಟ್ಟರು.

ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಸಿಎಸ್‌ಐಆರ್–ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ), ಅಸೋಸಿಯೇಷನ್ ಆಫ್ ಫುಡ್ ಸೈಂಟಿಸ್ಟ್ ಅಂಡ್ ಟೆಕ್ನಾಲಜಿಸ್ಟ್ (ಇಂಡಿಯಾ/ಎಎಫ್‌ಎಸ್‌ಟಿ–ಐ) (ಆಹಾರ ವಿಜ್ಞಾನಿಗಳು ಮತ್ತು ತಂತ್ರಜ್ಞರ ಸಂಘ) ಜಂಟಿ ಆಶ್ರಯದಲ್ಲಿ ಹಾಗೂ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಂಡಿರುವ '9ನೇ ಅಂತಾರಾಷ್ಟ್ರೀಯ ಆಹಾರ ಸಮ್ಮೇಳನ–ಇಫ್‌ಕಾನ್ 2023'ಕ್ಕೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

ಈ ರೀತಿಯ ಉತ್ತೇಜನದಿಂದ ಹೆಚ್ಚು ಪ್ರಯೋಜನ ಪಡೆಯಲು ಸಾಧ್ಯವಾಗಲಿದ್ದು, ಹೆಚ್ಚಿನ ಜನರಿಗೆ ಉದ್ಯೋಗಗಳೂ ದೊರೆಯಲಿವೆ. ಕೈಗಾರಿಕೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಾವು ಪಾಶ್ಚಿಮಾತ್ಯ ವಿಧಾನದಂತೆ ಹೆಚ್ಚಿನ ಪ್ರಮಾಣದಲ್ಲಿ ಯಂತ್ರೋಪಕರಣಗಳ ಮೊರೆ ಹೋಗುವುದು ಸೂಕ್ತವಲ್ಲ. ಹಾಗಾಗಿ ದೇಶದ ಕೈಗಾರಿಕಾ ವಲಯವನ್ನು ನಮ್ಮ ದೇಶದ ಜೀವನ ಶೈಲಿಗೆ ಪೂರಕವಾಗಿ ಎಚ್ಚರಿಕೆಯಿಂದ ಕಟ್ಟಬೇಕು. ಬೃಹತ್ ಯಂತ್ರೋಪಕರಣಗಳಗೆ ಹೆಚ್ಚಿನ ಆದ್ಯತೆ ನೀಡಿದರೆ ನಿರುದ್ಯೋಗ ಹೆಚ್ಚಾಗಲಿದೆ ಎಂದು ಎಚ್ಚರಿಸಿದರು.

ಆಹಾರ ಸಂಸ್ಕರಣೆಗಾಗಿ ಉತ್ತಮ ಉದ್ದಿಮೆ ಪರಿಸರ ರಚಿಸಬೇಕಿದೆ. ಆಹಾರ ತಂತ್ರಜ್ಞಾನ ಉದ್ಯಮವು ಆಹಾರ ಸಂಗ್ರಹಣೆ ಮತ್ತು ಸಂಸ್ಕರಣೆಯಲ್ಲಿ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ. ಸಣ್ಣ ಸಣ್ಣ ಕೈಗಾರಿಕೆಗಳಿಗೆ ದೊಡ್ಡ ಮಟ್ಟದಲ್ಲಿ ಉತ್ತೇಜಿಸುವುದರಿಂದ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದು ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಸ್ವಾತಂತ್ರ್ಯ ನಂತರದಲ್ಲಿ ಆಹಾರ ಭದ್ರತೆಗೆ ಸಂಬಂಧಿಸಿದಂತೆ ದೊಡ್ಡ ಸಾಧನೆಯಾಗಿದೆ. ಆಹಾರ ಧಾನ್ಯ ಉತ್ಪಾದನೆ ಮತ್ತು ವಿತರಣಾ ವ್ಯವಸ್ಥೆಯಲ್ಲಿ ಸುಧಾರಣೆಯಾಗಿದೆ. ಆದಾಗ್ಯೂ ಆಹಾರ ಉತ್ಪಾದನೆ ಮತ್ತು ವಿತರಣೆಯಲ್ಲಿ ಅನೇಕ ಸಮಸ್ಯೆಗಳು ಇದ್ದು, ತಂತ್ರಜ್ಞಾನದ ಸದ್ಬಳಕೆ ಮೂಲಕ ಅವುಗಳನ್ನು ನಿವಾರಿಸಲು ಗಮನ ನೀಡಬೇಕಿದೆ. ರೈತರ ಭೂಮಿಗೆ ಹೋಗದೇ ರಿಮೋಟ್ ಸೆನ್ಸಿಂಗ್ ಮೂಲಕ ಬೆಳೆ ಹಾನಿಯನ್ನು ಅಂದಾಜಿಸಲು ಇಂದು ಸಾಧ್ಯವಾಗಿದೆ. ಬಾಹ್ಯಾಕಾಶ ತಂತ್ರಜ್ಞಾನ ಇದನ್ನು ಸಾಧ್ಯ ಮಾಡಿದೆ ಎಂದು ತಿಳಿಸಿದರು.

ಬೆಳೆಗಳಿಗೆ ತಗಲುವ ರೋಗ ರುಜಿನಗಳನ್ನು ಮುಂಗಡವಾಗಿ ಅರಿಯಲು ರಿಮೋಟ್ ಸೆನ್ಸಿಂಗ್ ಸಹಾಯಕವಾಗಿದೆ. ಕೃಷಿ ಕ್ಷೇತ್ರದ ಸುಸ್ಥಿರ ಅಭಿವೃದ್ಧಿಗೆ ಇಸ್ರೋ ನೆರವಾಗುತ್ತಿದೆ. ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನದ ಮೂಲಕ ಉಪಗ್ರಹ ಕಳುಹಿಸಿದ ದತ್ತಾಂಶದ ಆಧಾರದಲ್ಲಿ ಬೆಳೆಯ ಅವಧಿ ಮತ್ತು ಇಳುವರಿಯ ಪ್ರಮಾಣವನ್ನು ಅಂದಾಜಿಸಲಾಗುತ್ತಿದೆ. ಈಗಾಗಲೇ 7 ಬೆಳೆಗಳ ಅವಧಿ ನಿರ್ಧರಿಸಿ ಕೃಷಿ ಇಲಾಖೆಗೆ ನೆರವಾಗಲಾಗಿದೆ. ಇದನ್ನು 20ಕ್ಕೂ ಹೆಚ್ಚು ಬೆಳೆಗಳಿಗೆ ವಿಸ್ತರಿಸಲಾಗುತ್ತಿದೆ ಎಂದು ತಿಳಿಸಿದರು.

ಕೇರಳದಲ್ಲಿ ತೆಂಗು ಬೆಳೆಗೆ ರೋಗದಿಂದ ಉಂಟಾಗುವ ನಷ್ಟ ತಪ್ಪಿಸಲು ರಿಮೋಟ್ ಸೆನ್ಸಿಂಗ್ ವಿಧಾನ ಕಂಡುಕೊಳ್ಳಲಾಯಿತು. ಆ ಮೂಲಕ ಪರಿಹಾರವೂ ದೊರೆಯಿತು. ಇದೀಗ ಇದನ್ನು ಎಲ್ಲಾ ಬೆಳೆಗಳಿಗೆ ವಿಸ್ತರಿಸಲಾಗುತ್ತಿದೆ. ಆಹಾರ ಭದ್ರತೆ ಹಾಗೂ ಬೆಳೆ ಇಳುವರಿ ಹೆಚ್ಚಿಸಲೂ ಇಸ್ರೋ ನೆರವಾಗುತ್ತಿದೆ ಎಂದರು.

ಹವಾಮಾನ ಹಾಗೂ ವಾತಾವರಣ ಬದಲಾವಣೆ ಮಾಹಿತಿಯನ್ನು ಸಂಸ್ಥೆಯು ನೀಡುತ್ತಿದೆ. ಸಮುದ್ರದ ಉಷ್ಣತೆ, ನೀರಿನಲ್ಲಿರುವ ಪೋಷಕಾಂಶಗಳು, ಮೀನಿನ ಬೆಳವಣಿಗೆ ಮೊದಲಾದ ಮಾಹಿತಿಗಳನ್ನು ಉಪಗ್ರಹದ ಮೂಲಕ ಸಂಗ್ರಹಿಸಲಾಗುತ್ತಿದೆ. ಇಂದು ನಾವು ಹೊಂದಿರುವ ಆಹಾರ ಸರಪಳಿಯ ಪ್ರಮುಖ ಅಂಶವೆಂದರೆ ಮೀನು. ಸಮುದ್ರದಲ್ಲಿ ಹೆಚ್ಚು ಮೀನು ಇರುವ ಜಾಗಗಳ ಮಾಹಿತಿಯನ್ನು ಕರಾವಳಿಯ ಮೀನುಗಾರರಿಗೆ ಹೈದರಾಬಾದ್‌ನ ಕೇಂದ್ರದ ಮೂಲಕ ನೀಡಲಾಗುತ್ತಿದೆ ಎಂದರು.

ಇಸ್ರೋದ ಉಪಗ್ರಹಗಳು ದೇಶದ ಅಂತರ್ಜಲದ ಬಗ್ಗೆ ಮಾಹಿತಿ ನೀಡುತ್ತಿದ್ದು, ಇದರ ಆಧಾರದಲ್ಲಿ ಕೊರೆಯಲಾದ ಶೇ.90ರಷ್ಟು ಕೊಳವೆ ಬಾವಿಗಳಲ್ಲಿ ನೀರು ಲಭ್ಯವಾಗುವಲ್ಲಿ ಯಶಸ್ವಿಯಾಗಲಾಗಿದೆ. ಇಂದು ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನದಿಂದ ಸಾಕಷ್ಟು ಸುಧಾರಣೆಯಾಗಿದೆ. ದೇಶಾದ್ಯಂತ ಭೂಮಿಯೊಳಗಿನ ನೀರು ಹಂಚಿಕೆಯ ಅಂದಾಜನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಈ ಹಿಂದೆ ಭೂಮಿಯಲ್ಲಿ ಕೊರೆಯುತ್ತಿದ್ದ ಕೊಳವೆ ಬಾವಿಗಳಲ್ಲಿ ನೀರು ದೊರೆಯುತ್ತಿದ್ದ ಪ್ರಮಾಣ ಕಡಿಮೆ ಇತ್ತು. ತಂತ್ರಜ್ಞಾನದ ಸಹಕಾರದಿಂದ ಇಂದು ವಿವಿಧ ಭೌಗೋಳಿಕ ಚಿತ್ರಣ ಅಂದಾಜಿಸಲು ಸಾಧ್ಯವಾಗಿದೆ. ಇದು ಅತ್ಯಂತ ಪ್ರಮುಖ ಅಭಿಯಾನವಾಗಿದೆ ಎಂದು ಹೇಳಿದರು.

ಇಸ್ರೋ ಸಮಾಜಮುಖಿ ಸಂಸ್ಥೆಯಾಗಿದ್ದು, ಅಗತ್ಯವಿರುವ ಸಂದರ್ಭದಲ್ಲಿ ಆಹಾರ ವಿಜ್ಞಾನ ಸಂಸ್ಥೆಗಳೊಂದಿಗೆ ಕೆಲಸ ಮಾಡಲು ಸಿದ್ಧವಿದೆ. ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಮನ್ವಯ ಹಾಗೂ ಸಹಯೋಗದೊಂದಿಗೆ ನಾವು ಕೆಲಸ ಮಾಡಬೇಕಿದೆ ಎಂದರು. ಇದಕ್ಕೂ ಮುನ್ನ ವರ್ಚ್ಯುಯಲ್ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಿಎಸ್‌ಐಆರ್ ಮಹಾನಿರ್ದೇಶಕಿ ಡಾ.ಎನ್. ಕಲೈಸೆಲ್ವಿ, ಮೈಸೂರಿನಲ್ಲಿ ಸಿಎಫ್‌ಟಿಆರ್‌ಐ ಸ್ಥಾಪನೆಗೆ ಅಗತ್ಯ ಮೂಲ ಸೌಕರ್ಯವಾದ ಬೃಹತ್ ಕಟ್ಟಡ ಹಾಗೂ ಭೂಮಿಯನ್ನು ನೀಡಿದ ಮೈಸೂರು ರಾಜಮನೆತನಕ್ಕೆ ಧನ್ಯವಾದ ಹೇಳಿದರು.

ಇದೇ ವೇಳೆ ಸಮ್ಮೇಳನದ ಸ್ಮರಣಿಕೆಯನ್ನೂ ಬಿಡುಗಡೆ ಮಾಡಲಾಯಿತು. ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಮೈಸೂರು ರಾಜವಂಶಸ್ಥೆ ಡಾ.ಪ್ರಮೋದಾ ದೇವಿ ಒಡೆಯರ್ ಸಿಎಫ್‌ಟಿಆರ್‌ಐನಲ್ಲಿ ನಡೆಯಲಿರುವ ವಸ್ತು ಪ್ರದರ್ಶನ ಉದ್ಘಾಟಿಸಿದರು. ಇದೇ ವೇಳೆ 15ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಆಹಾರ ಕ್ಷೇತ್ರದಲ್ಲಿನ ಸಾಧನೆಗಾಗಿ ನೀಡಲಾಯಿತು.

ಡಿಆರ್‌ಡಿಓ–ಡಿಎಫ್‌ಆರ್‌ಎಲ್ ನಿರ್ದೇಶಕ ಡಾ.ಅನಿಲ್‌ದತ್ ಸೆಮ್ವಾಲ್, ಸಿಎಫ್‌ಟಿಆರ್‌ಐನ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಲಕ್ನೋದ ಸಿಎಸ್‌ಐಆರ್–ಐಐಟಿಆರ್‌ನ ನಿರ್ದೇಶಕರೂ ಆದ ಎಎಫ್‌ಎಸ್‌ಟಿ (ಐ) ಅಧ್ಯಕ್ಷ ಡಾ.ಎನ್. ಭಾಸ್ಕರ್, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಸುರೇಶ್ ಡಿ.ಸಖರೆ, ಸಮ್ಮೇಳನದ ಸಂಚಾಲಕ ಡಾ.ತನಾಜಿ ಕುದ್ರೆ ಮತ್ತಿತರರು ಹಾಜರಿದ್ದರು.

ಇದಕ್ಕೂ ಮುನ್ನ ಮಧ್ಯಾಹ್ನ ಪ್ರೊ. ಎಂ.ಎಸ್.ಸ್ವಾಮಿನಾಥನ್ ಪದ್ಮ ಪ್ರಶಸ್ತಿ ಪುರಸ್ಕೃತರ ಉಪನ್ಯಾಸ ಸರಣಿಗೆ ಪದ್ಮಶ್ರೀ ಪುರಸ್ಕೃತ ಡಾ.ಶಶಾಂಕ್ ಆರ್.ಜೋಷಿ ಅವರು ಚಾಲನೆ ನೀಡಿ, ಉಪನ್ಯಾಸ ನೀಡಿದರು. ಸಿಎಸ್‌ಐಆರ್ ಎಮೆರಿಟಸ್ ಫೆಲೋ ಹಾಗೂ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ನಾಳೆಯಿಂದ (ಡಿ.8) ಡಿ.10ರವರೆಗೆ ಸಿಎಫ್‌ಟಿಆರ್‌ಐ ಆವರಣದಲ್ಲಿ ಸಮ್ಮೇಳನದ ತಾಂತ್ರಿಕ ಗೋಷ್ಠಿ, ಉತ್ಪನ್ನಗಳ ಪ್ರದರ್ಶನ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಆಹಾರ ಉತ್ಪನ್ನ, ತಂತ್ರಜ್ಞಾನ ಪ್ರದರ್ಶನ



70ಕ್ಕೂ ಹೆಚ್ಚು ಮಳಿಗೆಗಳ ನಿರ್ಮಾಣ




ಮೈಸೂರು, ಡಿ.7(ಎಂಕೆ)– 'ಟ್ರಿಮ್ ಸೇಫ್' ವಿಷಯದಡಿ ನಡೆಯುತ್ತಿರುವ ಮೂರು ದಿನಗಳ (ಡಿ.8, 9 ಮತ್ತು 10) ಆಹಾರ ಸಮ್ಮೇಳನದಲ್ಲಿ ಆಹಾರ ಪದಾರ್ಥಗಳ ಹೊಸ ಆವಿಷ್ಕಾರ, ಸಂಸ್ಕರಣೆ, ವಿವಿಧ ಬಗೆಯ ಆಹಾರ ಉತ್ಪನ್ನಗಳು ಹಾಗೂ ತಂತ್ರಜ್ಞಾನ ಪ್ರದರ್ಶನ ಇರಲಿದೆ. ಹಾಗೆಯೇ ಆಹಾರಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಕೋರ್ಸ್‌ಗಳ ಬಗ್ಗೆಯೂ ಮಾಹಿತಿ ದೊರೆಯಲಿದೆ.

70ಕ್ಕೂ ಹೆಚ್ಚು ಮಳಿಗೆ: ಅಂತಾರಾಷ್ಟ್ರೀಯ ಆಹಾರ ಸಮ್ಮೇಳನಕ್ಕೆ ಭರ್ಜರಿ ತಯಾರಿ ನಡೆಸಲಾಗಿದ್ದು, ಸಿಎಫ್‌ಟಿಆರ್‌ಐ ವಿಶಾಲ ಆವರಣದಲ್ಲಿ 70ಕ್ಕೂ ಹೆಚ್ಚು ಮಳಿಗೆಗಳನ್ನು ನಿರ್ಮಿಸಲಾಗಿದೆ. ನಾಳೆ(ಡಿ.8)ರಿಂದ ಆರಂಭಗೊಳ್ಳುವ ಆಹಾರ ಸಮ್ಮೇಳನ ಡಿ.10ರವರೆಗೆ ನಡೆಯಲಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶ ನೀಡಲಾಗಿದೆ. ಹಾಗೆಯೇ ಸಿರಿಧಾನ್ಯ ಆಹಾರೋತ್ಪನ್ನಗಳ ವಿಶೇಷ ಪ್ರದರ್ಶನ ಏರ್ಪಡಿಸಿದ್ದು, 12 ಮಳಿಗೆಗಳನ್ನು ಮೀಸಲಿಡಲಾಗಿದೆ. ಜೊತೆಗೆ ಸಿಎಫ್‌ಟಿಆರ್‌ಐನ 4 ಮಳಿಗೆಗಳು ಸೇರಿದಂತೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳ ಮಳಿಗೆಗಳು ಗಮನ ಸೆಳೆಯಲಿವೆ.

ಸಾವಿರಾರು ಮಂದಿ ಭಾಗಿ: ಆಹಾರ ಸಮ್ಮೇಳನದಲ್ಲಿ ವಿದ್ಯಾರ್ಥಿಗಳು ಸೇರಿದಂತೆ ಸಾವಿರಾರು ಮಂದಿ ಭಾಗವಹಿಸಲಿದ್ದಾರೆ. ಈಗಾಗಲೇ 2,600ಕ್ಕೂ ಮಂದಿ ನೋಂದಣಿ ಮಾಡಿಕೊಂಡಿದ್ದು, ಈ ಪೈಕಿ ಶೇ.50ರಷ್ಟು ವಿದ್ಯಾರ್ಥಿಗಳಾಗಿದ್ದಾರೆ. ಆಹಾರ ವಲಯದ ವೃತ್ತಿಪರರು, ಅಧ್ಯಾಪಕರು ಹಾಗೂ ರೈತ ಬಾಂಧವರು ಸಮ್ಮೇಳನಕ್ಕೆ ಭೇಟಿ ನೀಡಿ ಇಲ್ಲಿನ ಚಟುವಟಿಕೆಗಳನ್ನು ವೀಕ್ಷಣೆ ಮಾಡಲು ಅವಕಾಶವಿದೆ.

ಡಿ.10ರಂದು ವಾಕಥಾನ್: ಸಮ್ಮೇಳನದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ ಡಿ.10ರಂದು ವಾಕಥಾನ್ ಹಮ್ಮಿಕೊಳ್ಳಲಾಗಿದ್ದು, ಅಂದು ಬೆಳಗ್ಗೆ 8ಕ್ಕೆ ಸಿಎಫ್‌ಟಿಆರ್‌ಐ ಸಂಸ್ಥೆ ಆವರಣದಿಂದ ವಾಕಥಾನ್ ಪ್ರಾರಂಭವಾಗಲಿದೆ. ಅಲ್ಲದೆ, ವಿದ್ಯಾರ್ಥಿಗಳಿಗೆ ಉದ್ಯೋಗ ಮೇಳ ಆಯೋಜಿಸಲಾಗುತ್ತಿದೆ. ಆ ಮೂಲಕ ಸಮ್ಮೇಳನದಲ್ಲಿ ಭಾಗವಹಿಸುವ ಸಂಸ್ಥೆಗಳಲ್ಲಿರುವ ಉದ್ಯೋಗಾವಕಾಶದ ಬಗ್ಗೆ ಮಾಹಿತಿ ಪಡೆಯಲು ಅವಕಾಶ ನೀಡಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.12.2023 ಶುಕ್ರವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2023ರಿಂದ 15.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ,
ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ತೀವ್ರ ತಲೆನೋವು, ಮೈಗ್ರೇನ್ ತಲೆನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ, ಆಲನಹಳ್ಳಿ, ಬೆಳಗ್ಗೆ 9 ರಿಂದ.


■ **ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ:** ವಾರ್ಷಿಕ ಕ್ರೀಡಾಕೂಟ, ಉದ್ಘಾಟನೆ: ರಾಷ್ಟ್ರ ಮಟ್ಟದ ಖೋ ಖೋ ಆಟಗಾರ್ತಿ ಕು.ಎಂ.ವೀಣಾ, ಹಿರಿಯ ಪತ್ರಕರ್ತೆ ರಶ್ಮಿ ಕೋಟಿ, ಅಧ್ಯಕ್ಷತೆ : ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ ಅಧ್ಯಕ್ಷ ರಾಮಪ್ಪ, ಸ್ಥಳ: ದೀಪಾ ಶಾಲೆ ಕ್ರೀಡಾಂಗಣ, ರೂಪಾನಗರ, ಬೆಳಗ್ಗೆ 9.30ಕ್ಕೆ

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ:** ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಸ್ಮಾರಕ ಪುರುಷರ ಮತ್ತು ಮಹಿಳೆಯರ ಥ್ರೋಬಾಲ್ ಪಂದ್ಯಾವಳಿ, ಮುಖ್ಯ ಅತಿಥಿಗಳು: ಏಷಿಯನ್ ಥ್ರೋಬಾಲ್ ಫೆಡರೇಷನ್ ಸದಸ್ಯ ಎನ್.ಎಸ್.ಸುಬ್ರಾಯ, ಅಧ್ಯಕ್ಷತೆ: ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಉಪಕುಲಪತಿ ಡಾ.ಸಂತೋಷ್‌ಕುಮಾರ್, ಉಪಸ್ಥಿತರು: ಪ್ರಿನ್ಸಿಪಾಲ್ ಡಾ.ನಟರಾಜು, ಕುಲಸಚಿವ ಪ್ರೊ.ಧನರಾಜ್, ಸ್ಥಳ: ಸುವರ್ಣ ಮಹೋತ್ಸವ ಭವನದ ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎನ್.ಉಷಾರಾಣಿ ಅವರಿಂದ ಭಾರತದ ಸಂವಿಧಾನ ಮತ್ತು ಪತ್ರಿಕಾ ಸ್ವಾತಂತ್ರ್ಯ ಕುರಿತು ಉಪನ್ಯಾಸ, ಅಧ್ಯಕ್ಷತೆ: ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ.ಎಂ.ಎಸ್.ಸಪ್ನ, ಸ್ಥಳ: ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ – ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ, 6.50 ರೈತರಿಗೆ ಸಲಹೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಎನ್.ಆರ್. ಪ್ರಶಾಂತ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಪ್ರಥಮ್ ಭಟ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಪಿ.ರಮಾ –ಹಾಡುಗಾರಿಕೆ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ–ಸುಸ್ಥಿರ ಕೃಷಿಯ ಪ್ರಾಮುಖ್ಯತೆ ಕುರಿತು ಪ್ರೇಮೇಶ್ ಅವರೊಂದಿಗೆ ಸಂದರ್ಶನ, 8.00ಕನ್ನಡ ಭಾರತಿ "ಕಾವ್ಯ ಕೌಶಲ" ಕವಯಿತ್ರಿ ಲಾವಣ್ಯ ಪ್ರಭಾ ಅವರೊಡನೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 9.30ಆರ್.ಎಸ್. ರಮಾಕಾಂತ್–ಹಾಡುಗಾರಿಕೆ, 10.00 ತತ್ವ ಸಂಚಾರ–ತತ್ವಪದ ಗಾಯಕರ ಹಾಡುಪಾಡು, ಪ್ರಸ್ತುತಿ–ಡಾ. ಮೈಸೂರು ಉಮೇಶ್, 10.30 ಸವಿನೆನಪು

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ :** ಕ್ವಾಲಿಟಿ ಅಷೂರೆನ್ಸ್ ಥ್ರೂ ಅಕ್ರೆಡಿಟೇಷನ್ ಇನ್ ಹೈಯರ್ ಎಜುಕೇಷನ್ ಫಾರ್ ಡೆವಲಪಿಂಗ್ ಕಂಟ್ರೀಸ್ ಕುರಿತು ಅಂತಾರಾಷ್ಟ್ರೀಯ ಕಾರ್ಯಾಗಾರ, ಮುಖ್ಯ ಅತಿಥಿಗಳು : ಎನ್‌ಐಟಿಟಿಟಿಆರ್ ಚೆನ್ನೈನ ಪ್ರಾಧ್ಯಾಪಕ ಡಾ. ಕೆ.ಎಸ್.ಎ. ದಿನೇಶ್ ಕುಮಾರ್, ಅಧ್ಯಕ್ಷತೆ : ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಉಪಕುಲಪತಿ ಡಾ. ಎ.ಎನ್. ಸಂತೋಷ್ ಕುಮಾರ್, ಸ್ಥಳ: ಸುವರ್ಣ ಮಹೋತ್ಸವ ಭವನದ ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ.

■ **ಅಭಿಯಂತರರು :** ಸಂಜೆ 6.30ಕ್ಕೆ 30ನೇ ವಾರ್ಷಿಕೋತ್ಸವ ರಂಗ ಸಂಭ್ರಮ, ಉದ್ಘಾಟನೆ : ಸಾಹಿತಿ ಹಾಗೂ ಜಾನಪದ ವಿದ್ವಾಂಸ ಪ್ರೊ. ಕಾಳೇಗೌಡ ನಾಗವಾರ, ಸ್ಮರಣ ಸಂಚಿಕೆ ಬಿಡುಗಡೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು : ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ರಂಗ ನಿರ್ದೇಶಕ ರಾಜೇಂದ್ರ ಕಾರಂತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಸಂಜೆ 7ಕ್ಕೆ ಸೂಳೇ ಸನ್ಯಾಸಿ ನಾಟಕ ಪ್ರದರ್ಶನ, ರಚನೆ : ಕೆ.ವಿ.ಸುಬ್ಬಣ್ಣ, ನಿರ್ದೇಶನ: ಮಂಜುನಾಥ್ ಬಡಿಗೇರ, ಸ್ಥಳ: ಕಿರುರಂಗ ಮಂದಿರ.

■ **ಮಾಲಿನಿ ನೃತ್ಯಶಾಲೆ ಮತ್ತು ಸಾಂಸ್ಕೃತಿಕ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ :** ಆರ್. ಗುರುರಾಜುಲುನಾಯ್ಡು ಅವರ ಶಿಷ್ಯೆ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಮಾಲಿನಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ಇವರ ವೃಂದದವರಿಂದ ಕೀರ್ತನೋತ್ಸವ ಹರಿಕಥೆ, ಮುಖ್ಯ ಅತಿಥಿಗಳು : ಮಣಿ ದೀಕ್ಷಿತ್, ಸ್ಥಳ: ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಸಭಾಂಗಣ, ಇಟ್ಟಿಗೆಗೂಡು, ಸಂಜೆ 6ಕ್ಕೆ.

ಮೈಸೂರಿನಿಂದ ರಾಮೇಶ್ವರಂ ಸಾಪ್ತಾಹಿಕ ರೈಲು ಆರಂಭಕ್ಕೆ ಆಗ್ರಹ

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್‌ಗೆ ಪ್ರತಾಪ್ ಸಿಂಹ ಮನವಿ



ಮೈಸೂರು, ಡಿ.7 (ಬಿಎಲ್‌ಯು)– ಮೈಸೂರಿನಿಂದ ರಾಮೇಶ್ವರಂಗೆ ಸಾಪ್ತಾಹಿಕ ರೈಲು ಪ್ರಾರಂಭಿಸುವಂತೆ ಮೈಸೂರು–ಕೊಡಗು ಲೋಕಸಭಾ ಸದಸ್ಯ ಪ್ರತಾಪ್ ಸಿಂಹ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ನವದೆಹಲಿಯಲ್ಲಿ ಮನವಿ ಮಾಡಿದ್ದಾರೆ.

ಮೈಸೂರಿನಿಂದ ರಾಮೇಶ್ವರಂ ಸಾಪ್ತಾಹಿಕ ರೈಲು ಪ್ರಾರಂಭಿಸುವುದರ ಜೊತೆಗೆ ಬಾರ್ಮೆರ್–ಯಶವಂತಪುರ ರೈಲನ್ನು ಮೈಸೂರು ತನಕ ವಿಸ್ತರಿಸುವಂತೆ ಕೂಡ ಈ ವೇಳೆ ಪ್ರತಾಪ್ ಸಿಂಹ ಮನವಿ ಮಾಡಿದರು. ಅವರ ಮನವಿಗೆ ಅಶ್ವಿನಿ ವೈಷ್ಣವ್ ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ.

ರೈಲ್ವೆ ಹಾಗೂ ಟೆಲಿಕಾಂ ಸಚಿವಾಲಯದ ವ್ಯಾಪ್ತಿಗೆ ಒಳಪಟ್ಟಂತೆ ಮೈಸೂರು ನಗರದಲ್ಲಿ ಹಲವು ಯೋಜನೆಗಳ ಕಾಮಗಾರಿ ಪೂರ್ಣಗೊಂಡಿದೆ. ಈ ಹಿನ್ನೆಲೆಯಲ್ಲಿ ಉದ್ಘಾಟನೆಗೆ ಆಗಮಿಸುವಂತೆಯೂ ಪ್ರತಾಪ್ ಸಿಂಹ ಇದೇ ವೇಳೆ ಅಶ್ವಿನಿ ವೈಷ್ಣವ್ ಅವರಿಗೆ ಆಹ್ವಾನ ನೀಡಿದರು.

ಕಡಕೊಳ ಬಳಿ 55 ಎಕರೆ ಪ್ರದೇಶದಲ್ಲಿ ಕಂಟೈನರ್ ಕಾರ್ಪೊರೇಷನ್ ಆಫ್ ಇಂಡಿಯಾ ವತಿಯಿಂದ 102 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ರೈಲ್ವೆ ಗೂಡ್ಸ್ ಟರ್ಮಿನಲ್, ಅಶೋಕಪುರಂ ರೈಲ್ವೆ ನಿಲ್ದಾಣದಲ್ಲಿ 30 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ರೈಲ್ವೆ ಯಾರ್ಡ್, ಫುಟ್ ಓವರ್ ಬ್ರಿಡ್ಜ್, ಪ್ಲಾಟ್‌ಫಾರಂ, ಸ್ಟೇಬಲಿಂಗ್ ಲೈನ್ ಹಾಗೂ ಪಾರ್ಕಿಂಗ್ ವ್ಯವಸ್ಥೆ, ಹೆಬ್ಬಾಳು ಕೈಗಾರಿಕಾ ಪ್ರದೇಶದ ಇನ್ಫೋಸಿಸ್ ಬಳಿ 27.64 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ ಉದ್ಘಾಟನೆ ಮಾಡುವಂತೆ ಪ್ರತಾಪ್ ಸಿಂಹ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್‌ಗೆ ಮನವಿ ಮಾಡಿದರು.

ರಜಪೂತ್ ಕರ್ಣಿ ಸೇನಾ ರಾಷ್ಟ್ರೀಯ ಅಧ್ಯಕ್ಷ ಸುಖದೇವ್ ಸಿಂಗ್ ಗೊಗಾಮೆಡಿ ಹತ್ಯೆ ಖಂಡಿಸಿ

ಮೈಸೂರಲ್ಲಿ ರಾಜಸ್ಥಾನಿ ಬಂಧುಗಳ ಪ್ರತಿಭಟನೆ



ಮೈಸೂರು,ಡಿ.7(ಎಂಕೆ)–ಜೈಪುರದಲ್ಲಿ (ರಾಜಸ್ಥಾನ) ರಾಷ್ಟ್ರೀಯ ರಜಪೂತ್ ಕರ್ಣಿ ಸೇನಾ ರಾಷ್ಟ್ರೀಯ ಅಧ್ಯಕ್ಷ ಸುಖದೇವ್ ಸಿಂಗ್ ಗೊಗಾಮೆಡಿ ಹತ್ಯೆ ಖಂಡಿಸಿ ಮೈಸೂರಿನಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಗಾಂಧಿ ವೃತ್ತದಲ್ಲಿ ಜಮಾವಣೆಗೊಂಡ ಶ್ರೀ ರಾಜಸ್ಥಾನ ವಿಷ್ಣು ಸೇವಾ ಟ್ರಸ್ಟ್ ಹಾಗೂ ರಾಜಸ್ಥಾನ್ ಬಂಧುಗಳು ರಾಷ್ಟ್ರೀಯ ರಜಪೂತ್ ಕರ್ಣಿ ಸೇನಾ ರಾಷ್ಟ್ರೀಯ ಅಧ್ಯಕ್ಷ ಸುಖದೇವ್ ಸಿಂಗ್ ಗೊಗಾಮೆಡಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ, ಮೊಂಬತ್ತಿ ಬೆಳಗಿ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು. ನಂತರ ಸುಖದೇವ್ ಸಿಂಗ್ ಗೊಗಾಮೆಡಿ ಅವರನ್ನು ಹತ್ಯೆಗೈದವರನ್ನು ಬಂಧಿಸುವಂತೆ ಒತ್ತಾಯಿಸಿ ರಾಜಸ್ಥಾನ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಮಾಜದ ಮುಖಂಡ ಹಾಗೂ ಚಾಮರಾಜ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಪಂಕಜ್ ಪಾರೀಕ್ ಮಾತನಾಡಿ, ಹಿಂದುತ್ವ ಹೋರಾಟಗಾರರಾದ ಸುಖದೇವ್ ಸಿಂಗ್ ಗೊಗಾಮೆಡಿ ಅವರನ್ನು ಗುಂಡಿಟ್ಟು ಹತ್ಯೆ ಮಾಡಿರುವುದು ಅತ್ಯಂತ ಖಂಡನೀಯ. ಈ ಬಗ್ಗೆ ರಾಜಸ್ಥಾನದ ಮುಖ್ಯಮಂತ್ರಿಗಳು ಉತ್ತರ ನೀಡಬೇಕು. ಅಲ್ಲದೆ ಹತ್ಯೆ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು. ಹಾಗೆಯೇ ಮುಂದಿನ ದಿನಗಳಲ್ಲಿ ಈ ರೀತಿಯ ದುರ್ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು ಎಂದು ಆಗ್ರಹಿಸಿದರು. ರಜಪೂತ್ ಕರ್ಣಿ ಸೇನಾ ಮುಖಂಡರಾದ ಕೃಪಾಲ್ ಸಿಂಗ್, ಭೀಮ್ ಸಿಂಗ್, ಶ್ರೀ ರಾಜಸ್ಥಾನ ವಿಷ್ಣು ಸೇವಾ ಟ್ರಸ್ಟ್ ಕಾರ್ಯದರ್ಶಿ ಪವರ್ ಸಿಂಗ್, ರಾಜಪೂತ್ ಸಮಾಜ ಅಧ್ಯಕ್ಷ ಜಬರ್ ಸಿಂಗ್, ಮುಖಂಡರಾದ ಅಮೃತ್ ಪೈಲ್ವಾನ್, ಪ್ರವೀಣ್, ಪೃಥ್ವಿ ಸಿಂಗ್, ಕೂಪಾರಾಮ್ ಬಾಬು ಲಾಲ್, ಪ್ರತಾಪ್ ಸಿಂಗ್ ಮತ್ತಿತರರು ಉಪಸ್ಥಿತರಿದ್ದರು.

ಬಾಕಿ ಸೆಮಿಸ್ಟರ್ ಪರೀಕ್ಷೆ ಬರೆಯಲು ಕೊನೆ ಅವಕಾಶ

ಮೈಸೂರು,ಡಿ.7–ಮೈಸೂರು ವಿಶ್ವವಿದ್ಯಾಲಯದ ಸೆಮಿಸ್ಟರ್ ಪದ್ಧತಿಯಲ್ಲಿದ್ದ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಎಲ್ಲಾ ಕೋರ್ಸ್‌ಗಳಿಗೆ ಅನ್ವಯವಾಗುವಂತೆ 'Double the Duration' ಅವಧಿಯಾದ ನಂತರವು ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಳೆಯ ಪಠ್ಯಕ್ರಮದ ರೀತಿಯೇ (ವಿದ್ಯಾರ್ಥಿಗಳು ಹಿಂದೆ ವ್ಯಾಸಂಗ ಮಾಡಿದ್ದ ಸ್ಕೀಂ ಹಾಗೂ ಅಭ್ಯಸಿಸಿದ್ದ ಪಠ್ಯಕ್ರಮಕ್ಕೆ ಅನುಗುಣವಾಗಿ) ಪ್ರಸ್ತುತ 2023–24ನೇ ಶೈಕ್ಷಣಿಕ ಸಾಲಿನ 2, 4, 6 ಮತ್ತು 8ನೇ ಸೆಮಿಸ್ಟರ್‌ನಲ್ಲಿ ಬಾಕಿ ಉಳಿಸಿಕೊಂಡಿದ್ದ ಪತ್ರಿಕೆಗೆ ಮತ್ತು 2024–25ನೇ ಶೈಕ್ಷಣಿಕ ಸಾಲಿನ 1, 3, 5 ಮತ್ತು 7ನೇ ಸೆಮಿಸ್ಟರ್‌ನಲ್ಲಿ ಬಾಕಿ ಉಳಿಸಿಕೊಂಡಿರುವ ಪತ್ರಿಕೆಗಳ (ಒಂದು ಪ್ರಯತ್ನವನ್ನು/ ಸೆಮಿಸ್ಟರ್‌ವಾರು) ಪರೀಕ್ಷೆ ಬರೆಯಲು ಕಟ್ಟ ಕಡೆಯ ಒಂದು ಕಾಲಾವಕಾಶ ನೀಡಲು ಅನುಮತಿ ನೀಡಲಾಗಿದೆ. ಹೆಚ್ಚಿನ ಮಾಹಿತಿ www.uni-mysore.ac.inನಲ್ಲಿ ಲಭ್ಯವಿರುತ್ತದೆ. ಪರೀಕ್ಷಾ ಶುಲ್ಕ ಪಾವತಿಸಲು ಆಯಾ ಕಾಲೇಜು/ಸಂಬಂಧಪಟ್ಟ ಅಧ್ಯಯನ ವಿಭಾಗಗಳಿಂದಲೇ ತಿಳಿಸುವಂತೆ ವಿವಿ ಕುಲಸಚಿವರು ತಿಳಿಸಿದ್ದಾರೆ.

40 ಪರ್ಸೆಂಟ್ ಕಮಿಷನ್ ಆರೋಪ: ಬಿಜೆಪಿ, ಕಾಂಗ್ರೆಸ್ ಸರ್ಕಾರದ ವಿರುದ್ಧ 6 ಸಾವಿರ ಪುಟಗಳ ದಾಖಲೆ ಸಲ್ಲಿಸಿದ ಕೆಂಪಣ್ಣ



ಬೆಂಗಳೂರು,ಡಿ.7–ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಭಾರಿ ಸದ್ದು ಮಾಡಿದ್ದ 40 ಪರ್ಸೆಂಟ್ ಕಮಿಷನ್ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರು ಗುರುವಾರ ಬಿಜೆಪಿ ಮತ್ತು ಹಾಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ 6 ಸಾವಿರ ಪುಟಗಳ ಭ್ರಷ್ಟಾಚಾರದ ದಾಖಲೆಯನ್ನು ನಿವೃತ್ತ ನ್ಯಾ. ಎಚ್.ಎನ್.ನಾಗಮೋಹನ್ ದಾಸ್ ಸಮಿತಿಗೆ ಸಲ್ಲಿದ್ದಾರೆ.

ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದ ಆಡಿಯೋ, ವಿಡಿಯೋ ಸೇರಿದಂತೆ 6 ಸಾವಿರ ಪುಟಗಳ ದಾಖಲೆಗಳನ್ನು ಕೆಂಪಣ್ಣ ಸಲ್ಲಿಸಿದರು. ಹಿಂದಿನ ಬಿಜೆಪಿ ಸರ್ಕಾರದಲ್ಲಿ ನೀರಾವರಿ, ಕೃಷಿ, ಜಲಸಂಪನ್ಮೂಲ, ಆರೋಗ್ಯ ಇಲಾಖೆ ಸೇರಿ ಇತರೆ ಇಲಾಖೆಗಳ ಭ್ರಷ್ಟಾಚಾರದ ದಾಖಲೆಗಳನ್ನು ನೀಡಲಾಗಿದೆ. ಹಿರಿತನ ಆಧಾರದಲ್ಲಿ ಬಾಕಿ ಬಿಲ್ ಪಾವತಿ ಮಾಡುತ್ತಿಲ್ಲ. ಕಮಿಷನ್ ನೀಡಿದವರಿಗೆ ಮಾತ್ರ ಬಾಕಿ ಹಣ ಪಾವತಿ ಮಾಡಲಾಗುತ್ತಿದೆ ಎಂದು ಆರೋಪಿಸಲಾಗಿತ್ತು. ದಾಖಲೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೆಂಪಣ್ಣ ಅವರು, ಸಿದ್ದರಾಮಯ್ಯ ಸರ್ಕಾರದಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ಹಿಂದಿನ ಬಿಜೆಪಿ ಸರ್ಕಾರ, ಹಾಲಿ ಸರ್ಕಾರದ ವಿರುದ್ಧ ಎಲ್ಲಾ ಇಲಾಖೆಯ ಕಾಮಗಾರಿಗೆ ಸಂಬಂಧಿಸಿದ ದಾಖಲೆ ಸಲ್ಲಿಸಿದ್ದೇನೆ. ಎಲ್ಲಾ ಜಿಲ್ಲೆಗಳ ಕಾಮಗಾರಿ ಅಕ್ರಮದ ಬಗ್ಗೆ ಮಾಹಿತಿ ನೀಡಿದ್ದೇನೆ ಎಂದರು. ಹಿಂದೆ ಬಿಜೆಪಿ ಸರ್ಕಾರದ ವಿರುದ್ಧ 40 ಪರ್ಸೆಂಟ್ ಕಮಿಷನ್ ಆರೋಪ ಮಾಡಿದ್ದ ಗುತ್ತಿದಾರರು, ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಬಾಕಿ ಇರುವ ಬಿಲ್ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿಗಳಿಗೆ ಹಲವು ಬಾರಿ ಮನವಿ ಮಾಡಿದ್ದರು. ಆದರೆ ಮನವಿಗೆ ಕಿವಿಗೊಡದ ಕಾಂಗ್ರೆಸ್ ಸರ್ಕಾರ ವಿರುದ್ಧ ಗುತ್ತಿಗೆದಾರರು ಸಂಘ ತೀವ್ರ ಆಕ್ರೋಶ ವ್ಯಕ್ತಪಡಿಸಿತ್ತು.

ಅಂತರ ಕಾಲೇಜು ಕಬಡ್ಡಿ ಪಂದ್ಯಾವಳಿಯಲ್ಲಿ ಟಿ.ನರಸೀಪುರ ಬಾಯ್ಸ್ ಜೂನಿಯರ್ ಕಾಲೇಜು ತಂಡ ಚಾಂಪಿಯನ್



ಮೈಸೂರು, ಡಿ.7(ಎಂಕೆ)– ಮೈಸೂರಿನ ಕನ್ನೇಗೌಡ ಕ್ರೀಡಾಂಗಣದಲ್ಲಿ ನಡೆದ ಅಂತರ ಕಾಲೇಜು ಕಬಡ್ಡಿ ಪಂದ್ಯಾವಳಿಯಲ್ಲಿ ಟಿ.ನರಸೀಪುರ ಬಾಯ್ಸ್ ಜೂನಿಯರ್ ಕಾಲೇಜು ತಂಡ ಚಾಂಪಿಯನ್ ಆಯಿತು.

ರತ್ನ ಶಿಕ್ಷಣ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಅಂತರ ಕಾಲೇಜು ಕಬಡ್ಡಿ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಮರಿಮಲ್ಲಪ್ಪ ಪಿಯು ಕಾಲೇಜು ತಂಡ ವಿರುದ್ಧ ಜಯಗಳಿಸಿದ ಟಿ.ನರಸೀಪುರ ಬಾಯ್ಸ್ ಜೂನಿಯರ್ ಕಾಲೇಜು ತಂಡ ಪ್ರಥಮ ಸ್ಥಾನ ಗಳಿಸಿದರೆ, ಮರಿಮಲ್ಲಪ್ಪ ಪಿಯು ಕಾಲೇಜು ತಂಡ ರನ್ನರ್ ಅಪ್ ಆಯಿತು. ವಿದ್ಯಾವರ್ಧಕ ಪಿಯು ಕಾಲೇಜು ತಂಡ ತೃತೀಯ ಸ್ಥಾನ ಪಡೆದರೆ, ರತ್ನ ಪಿಯು ಕಾಲೇಜು ತಂಡ ನಾಲ್ಕನೇ ಬಹುಮಾನ ಪಡೆಯಿತು.

ಬಳಿಕ ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ವಿಜೇತರಿಗೆ ಬಹುಮಾನ ವಿತರಿಸಿದರು. ಭಾರತ ಕಬಡ್ಡಿ ತಂಡ ಮಾಜಿ ಆಟಗಾರ ಗೋಪಾಲಪ್ಪ, ಶ್ರೀ ಯೋಗಿ ನಾರಾಯಣ ಬಲಿಜ ಸಂಘದ ಕಾರ್ಯದರ್ಶಿ ಗೋಪಾಲ ರಾವ್, ರತ್ನ ಕಾಲೇಜು ಅಧ್ಯಕ್ಷ ಆರ್.ಮಂಜುನಾಥ್, ಉಪಾಧ್ಯಕ್ಷ ಕೆ.ರಾಮು, ಖಜಾಂಚಿ ಮಮತ, ಪ್ರಾಂಶುಪಾಲರಾದ ಎಂ.ಜೆ.ದೀಪಾ, ರಾಷ್ಟ್ರೀಯ ಕಬಡ್ಡಿ ತೀರ್ಪುಗಾರ ರವಿಕುಮಾರ್ ಉಪಸ್ಥಿತರಿದ್ದರು.

ಮೋದಿ ಜಿ ಎಂದು ಕರೆಯಬೇಡಿ, ನಾನು ಕೇವಲ ಮೋದಿ ಅಷ್ಟೆ



ನವದೆಹಲಿ, ಡಿ.7– 'ನನ್ನನ್ನು ಮೋದಿ ಜಿ ಎಂದು ಕರೆಯಬೇಡಿ, ನಾನು ಮೋದಿ ಅಷ್ಟೆ' ಇದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಮ್ಮ ಪಕ್ಷದ ಸದಸ್ಯರಿಗೆ ಹೇಳಿದ ಮಾತು.

ಇತ್ತೀಚೆಗೆ ನಡೆದ ಪಂಚರಾಜ್ಯಗಳ ಚುನಾವಣೆಯಲ್ಲಿ ಪ್ರಮುಖ ಮೂರು ರಾಜ್ಯಗಳನ್ನು ಗೆದ್ದು ಬೀಗುತ್ತಿರುವ ಬಿಜೆಪಿ ಸಂಸದೀಯ ಪಕ್ಷ ಸಭೆ ಇಂದು ದೆಹಲಿಯಲ್ಲಿ ನಡೆಯಿತು. ಸಭೆಗೆ ಪ್ರಧಾನಿ ಮೋದಿ ಆಗಮಿಸುತ್ತಿದ್ದಂತೆ ಸದಸ್ಯರು ಎದ್ದುನಿಂತು ಚಪ್ಪಾಳೆ ತಟ್ಟಿ ಸ್ವಾಗತಿಸಿ ಅವರ ನಾಯಕತ್ವಕ್ಕೆ ಬಹುಪರಾಕ್ ಹೇಳಿದರು. ಹಿರಿಯ ನಾಯಕ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ ಪಿ ನಡ್ಡಾ ಮೋದಿಯವರನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮೋದಿ, ಮೂರು ರಾಜ್ಯಗಳ ಗೆಲುವು ಯಾರ ವೈಯಕ್ತಿಕ ಗೆಲುವು ಅಲ್ಲ, ಇದು ಪಕ್ಷದ ಸಾಮೂಹಿಕ ಗೆಲುವು. ಸರ್ಕಾರ ನಡೆಸಲು ಬಿಜೆಪಿ ಯೋಗ್ಯ ಪಕ್ಷ ಎಂದು ಜನ ಆರಿಸಿದ್ದಾರೆ. ಜನರ ಆಶೋತ್ತರಗಳಿಗೆ ತಕ್ಕಂತೆ ಆಡಳಿತ ನಡೆಸಬೇಕಾದದ್ದು ನಮ್ಮ ಕೆಲಸ. 'ಮೋದಿ ಜಿ, ಮೋದಿ ಜಿ' ಎಂದು ಕರೆದು ನನ್ನನ್ನು ಸಾರ್ವಜನಿಕರಿಂದ ಅಂತರದಲ್ಲಿರುವಂತೆ ಮಾಡಬೇಡಿ, ನಾನು ಮೋದಿ ಅಷ್ಟೆ ಎಂದರು.

ಮಧ್ಯಪ್ರದೇಶ, ರಾಜಸ್ತಾನ, ಛತ್ತೀಸ್‌ಗಢ ರಾಜ್ಯಗಳ ಗೆಲುವಿಗೆ ಮೋದಿಯವರ ನಾಯಕತ್ವವೇ ಪ್ರಮುಖ ಕಾರಣ ಎಂದು ಬಿಜೆಪಿ ಸದಸ್ಯರು ಸಾಮೂಹಿಕವಾಗಿಯೇ ಹೇಳುತ್ತಿದ್ದಾರೆ. ಈ ಬಗ್ಗೆ ಮಾತನಾಡಿದ ಮೋದಿ, ಕಾರ್ಯಕರ್ತರ ಕಠಿಣ ಪರಿಶ್ರಮದಿಂದ ನಾವಿಂದು 3 ರಾಜ್ಯಗಳ ಚುನಾವಣೆಯಲ್ಲಿ ಗೆದ್ದಿದ್ದೇವೆ. ಡಿ.22ರಿಂದ ಜ.25ರವರೆಗೆ ನಡೆಯುವ ವಿಕಾಸ್ ಭಾರತ್ ಸಂಕಲ್ಪ ಯಾತ್ರೆಯಲ್ಲಿ ಸಂಸದರು, ಸಚಿವರು ಭಾಗವಹಿಸಬೇಕೆಂದರು.



ಮೈಸೂರಿನ ಲಾಲ್ ಬಹದ್ದೂರ್ ಶಾಸ್ತ್ರಿನಗರ ಮತ್ತು ಶಾಂತವೇರಿ ಗೋಪಾಲಗೌಡ ನಗರದ ನಿವಾಸಿಗಳು ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣ ದಿನ ಆಚರಿಸಿದರು. ಈ ವೇಳೆ ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಸಂಘದ ಗೌರವಾಧ್ಯಕ್ಷ ಅಹಿಂದ ಜವರಪ್ಪ, ಅಧ್ಯಕ್ಷ ಬಿ.ಸಿ.ಮಾದೇವಯ್ಯ, ಕಾರ್ಯದರ್ಶಿ ಅಂಬರೀಶ್, ಖಜಾಂಚಿ ಎಂ.ಮಂಜುನಾಥ್, ನಿರ್ದೇಶಕರಾದ ರೇವಣ್ಣ, ಗಂಗಾಧರ್, ಪ್ರಕಾಶ್, ಮಹದೇವಸ್ವಾಮಿ ಉಪಸ್ಥಿತರಿದ್ದರು.

ಚೆನ್ನೈ ಪ್ರವಾಹ: ಕೇಂದ್ರದಿಂದ ತಮಿಳುನಾಡಿಗೆ 450 ಕೋಟಿ ಬಿಡುಗಡೆ, 561 ಕೋಟಿ ರೂ. ಯೋಜನೆ ಮಂಜೂರು



ಚೆನ್ನೈ: ತಮಿಳುನಾಡಿನ ಪ್ರವಾಹ ಪೀಡಿತ 4 ಜಿಲ್ಲೆಗಳಲ್ಲಿ ಪರಿಹಾರ ಕಾರ್ಯಾಚರಣೆಯಲ್ಲಿ ತೊಡಗಿರುವ ತಮಿಳುನಾಡಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಎರಡು ಪ್ರಮುಖ ಘೋಷಣೆಗಳನ್ನು ಮಾಡಿದ್ದಾರೆ.

ಈ ಮಧ್ಯೆ, ಮೈಚಾಂಗ್ ಚಂಡಮಾರುತದಿಂದ ಉಂಟಾದ ಹಾನಿಯನ್ನು ನಿರ್ಣಯಿಸಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ನಾಲ್ಕು ಜಿಲ್ಲೆಗಳಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದರು. ಅಮಿತ್ ಶಾ ಅವರು ಪರಿಹಾರ ಕಾರ್ಯಗಳಿಗಾಗಿ ರಾಜ್ಯ ವಿಪತ್ತು ಪರಿಹಾರ ನಿಧಿಯ 2ನೇ ಕಂತಿನಲ್ಲಿ ತಮಿಳುನಾಡಿಗೆ ಮುಂಗಡವಾಗಿ 450 ಕೋಟಿ ಬಿಡುಗಡೆ ಮಾಡಿದ್ದಾರೆ. ಅಲ್ಲದೆ, ರಾಷ್ಟ್ರೀಯ ವಿಪತ್ತು ತಗ್ಗಿಸುವಿಕೆ ನಿಧಿಯಡಿಯಲ್ಲಿ ಚೆನ್ನೈ ಜಲಾನಯನ ಯೋಜನೆಗಾಗಿ 561.29 ಕೋಟಿ ರೂ.ಗಳ ನಗರ ಪ್ರವಾಹ ಪರಿಹಾರ ಯೋಜನೆಯನ್ನು ಮಂಜೂರು ಮಾಡಿದ್ದಾರೆ.

ಕೇಂದ್ರ ಸರ್ಕಾರ ಈಗಾಗಲೇ ತಮಿಳುನಾಡು ಮತ್ತು ಆಂಧ್ರ ಪ್ರದೇಶ ಎರಡೂ ರಾಜ್ಯಗಳಿಗೆ ಒಂದೇ ಮೊತ್ತದ 1ನೇ ಕಂತನ್ನು ಬಿಡುಗಡೆ ಮಾಡಿದೆ. ಸಂತ್ರಸ್ತರೆಲ್ಲರ ಸುರಕ್ಷತೆ ಮತ್ತು ಯೋಗಕ್ಷೇಮಕ್ಕಾಗಿ ನಾನು ಪ್ರಾರ್ಥಿಸುತ್ತೇನೆ. ಈ ಸಂಕಷ್ಟದ ಸಮಯದಲ್ಲಿ ನಾವು ಅವರೊಂದಿಗೆ ನಿಲ್ಲುತ್ತೇವೆ ಮತ್ತು ಪರಿಸ್ಥಿತಿಯು ಆದಷ್ಟು ಬೇಗ ಸಹಜ ಸ್ಥಿತಿಗೆ ಮರಳಲಿದೆ ಎಂದು ಕೇಂದ್ರ ಗೃಹ ಸಚಿವರು ಟ್ವೀಟ್ ಮಾಡಿದ್ದಾರೆ.

ಮೈಚಾಂಗ್ ಚಂಡಮಾರುತವು ತಮಿಳುನಾಡು ಮತ್ತು ಆಂಧ್ರಪ್ರದೇಶದ ತೀವ್ರ ಮೇಲೆ ಪರಿಣಾಮ ಬೀರಿದೆ. ಹಾನಿಯ ಪ್ರಮಾಣ ವಿಭಿನ್ನವಾಗಿದ್ದರೂ, ಈ ರಾಜ್ಯಗಳ ಅನೇಕ ಪ್ರದೇಶಗಳು ಮುಳುಗಡೆಯಾಗಿವೆ. ಬೆಳೆ ನಿಂತಿರುವ ಬೆಳೆಗಳ ಮೇಲೆ ಪರಿಣಾಮ ಬೀರಿದೆ. ಸೈಕ್ಲೋನಿಕ್ ಚಂಡಮಾರುತದಿಂದ ಅಗತ್ಯವಿರುವ ಪರಿಹಾರದ ನಿರ್ವಹಣೆಯೊಂದಿಗೆ ರಾಜ್ಯ ಸರ್ಕಾರಗಳಿಗೆ ಸಹಾಯ ಮಾಡಲು, ಪ್ರಧಾನಿ ನರೇಂದ್ರ ಮೋದಿ ಅವರು ಗೃಹ ಸಚಿವಾಲಯಕ್ಕೆ 2ನೇ ಕಂತಿನಲ್ಲಿ 493.60 ಕೋಟಿ ರೂ. ಆಂಧ್ರಪ್ರದೇಶಕ್ಕೆ ಮತ್ತು ತಮಿಳುನಾಡಿಗೆ 450 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ ಎಂದು ಅಮಿತ್ ಶಾ ತಿಳಿಸಿದ್ದಾರೆ.

ಡಿಕೆಶಿ ಪ್ರಕರಣ: ಡಿ.15ಕ್ಕೆ ಯತ್ನಾಳ್ ಅರ್ಜಿ ವಿಚಾರಣೆ

ಬೆಂಗಳೂರು,ಡಿ.7–ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆದ ರಾಜ್ಯ ಸರ್ಕಾರದ ಕ್ರಮ ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಗೆ ಕರ್ನಾಟಕ ಹೈಕೋರ್ಟ್ ದಿನಾಂಕ ನಿಗದಿಪಡಿಸಿದೆ. ಕರ್ನಾಟಕ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ವಿರುದ್ಧದ ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಕ್ರಮ ಜರುಗಿಸಲು ಹಿಂದಿನ ಬಿಜೆಪಿ ರಾಜ್ಯ ಸರ್ಕಾರ ನೀಡಿದ್ದ ಅನುಮತಿ ಹಿಂಪಡೆದಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ವಿಜಯಪುರ ನಗರ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸಲ್ಲಿಸಿರುವ ರಿಟ್ ಅರ್ಜಿಯ ನಿರ್ವಹಣೆಯನ್ನು ಕರ್ನಾಟಕ ಹೈಕೋರ್ಟ್ ಡಿಸೆಂಬರ್ 15ರಂದು ವಿಚಾರಣೆ ನಡೆಸಲಿದೆ.

ನೂತನ ವಸತಿ ಶಾಲೆಗೆ ಉಚಿತ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು,ಡಿ.7– ಮೈಸೂರು ಜಿಲ್ಲೆಯಲ್ಲಿನ ತಿ.ನರಸೀಪುರ ತಾಲೂಕಿನಲ್ಲಿ ನೂತನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯು (ಆಂಗ್ಲ ಮಾಧ್ಯಮ) 2024–25ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭವಾಗುತ್ತಿದ್ದು ಅಲ್ಪಸಂಖ್ಯಾತರ ಸಮುದಾಯಗಳಿಗೆ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ) 75% ರಷ್ಟು ಹಾಗೂ ಇತರೆ ವರ್ಗಗಳಿಗೆ (ಎಸ್.ಸಿ, ಎಸ್.ಟಿ, ಹಾಗೂ ಒ.ಬಿ.ಸಿ) 25% ರಷ್ಟು ಮೀಸಲಾತಿ ಇದ್ದು ಒಟ್ಟು 6ನೇ ತರಗತಿಗೆ 60 ಸೀಟುಗಳು ಲಭ್ಯವಿದ್ದು ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ 5ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು/ ಪೋಷಕರು ತಿ.ನರಸೀಪುರ ತಾಲೂಕು ಮಾಹಿತಿ ಕೇಂದ್ರ ಹಾಗೂ ಜಿಲ್ಲಾ ಕಛೇರಿ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು– ಮೈಸೂರು ರಸ್ತೆಯಲ್ಲಿನ ದಂಡಿನಮಾರಮ್ಮನ ದೇವಸ್ಥಾನದ ಎದುರು, ಶೋಭಾ ಗಾರ್ಡನ್ ಹತ್ತಿರ, ಸಿ.ಎ:ನಂ–1, ಮೌಲಾನ ಆಜಾದ್ ಭವನ, ದೂರವಾಣಿ: 0821– 2422088, ತಿ.ನರಸೀಪುರ ತಾಲೂಕು ಮಾಹಿತಿ ಕೇಂದ್ರ: 9845210242, ನಂಜನಗೂಡು ತಾಲ್ಲೂಕು ಮಾಹಿತಿ ಕೇಂದ್ರ: 9743567567 ಅನ್ನು ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರದಪುಡಿ ಎರಚಿ ಸರ ಕದಿಯಲೆತ್ನಿಸಿ ನಿವಾಸಿಗಳಿಗೇ ಸಿಕ್ಕಿಬಿದ್ದ ಮುಸುಕುಧಾರಿ

ಕ್ರೈಂ ಬಾಕ್ಸ್

ಮೈಸೂರು, ಡಿ.7–ರೈಲ್ವೆ ಇಲಾಖೆ ಕಾರು ಚಾಲಕನಿಗೆ ಕಾರದಪುಡಿ ಎರಚಿ ಸರ ಕದಿಯಲು ಪ್ರಯತ್ನಿಸಿದ ಮುಸುಕುಧಾರಿ ಖದೀಮನನ್ನು ರೈಲ್ವೆ ಕಾಲೋನಿ ನಿವಾಸಿಗಳೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಶ್ರೀರಂಗಪಟ್ಟಣದ ಮಂಜುನಾಥ ಎಂಬಾತನೇ ಸಿಕ್ಕಿಬಿದ್ದ ಖದೀಮನಾಗಿದ್ದು, ಈತನನ್ನು ಬಂಧಿಸಿದ ವಿವಿ ಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವಿವರ: ಮೈಸೂರಿನ ರೈಲ್ವೆ ಇಲಾಖೆ ಡಿವಿಜನಲ್ ಸಿಗ್ನಲ್ ಮತ್ತು ಕಮ್ಯೂನಿಕೇಷನ್ ಇಂಜಿನಿಯರ್ ಗೌರವ್ ದಂಗೊಡೆ ಅವರ ಕಾರು ಚಾಲಕನಾಗಿರುವ ಜೆ.ಸಿ.ನಗರ ನಿವಾಸಿ ಬಿ.ಜಿ.ದೇವರಾಜ(37) ಅವರು ಡಿ.5ರಂದು ಸಂಜೆ 7.30ರ ಸುಮಾರಿನಲ್ಲಿ ಗೌರವ್ ದಂಗೊಡೆ ಅವರನ್ನು ವಾಣಿವಿಲಾಸ ವಾಟರ್ ವರ್ಕ್ಸ್ ಬಳಿ ಇರುವ ಲೋಕೋ ಕಾಲೋನಿ ರೈಲ್ವೆ ವಸತಿ ಗೃಹದಲ್ಲಿ ಬಿಟ್ಟು ಮನೆಯ ಮುಂಭಾಗದ ಕಾಂಪೌಂಡ್ ಹತ್ತಿರ ಹೋಗುತ್ತಿದ್ದಂತೆಯೇ ಮುಸುಕುಧಾರಿ ಖದೀಮ ಇವರ ಕಣ್ಣಿಗೆ ಕಾರದಪುಡಿ ಎರಚಿ ಅವರ ಕತ್ತಿನಲ್ಲಿದ್ದ ಚಿನ್ನದ ಸರ ಕೀಳಲು ಮುಂದಾದಾಗ ಗೌರವ ದಂಗೊಡೆ ಅವರು ತಮ್ಮ ಚಾಲಕನ ನೆರವಿಗೆ ಧಾವಿಸಿದ್ದಾರೆ. ಆದರೆ ಖದೀಮ ಅವರ ಕಣ್ಣಿಗೂ ಕಾರದಪುಡಿ ಎರಚಿದನಾದರೂ, ಇಬ್ಬರೂ ಸೇರಿ ಆತನನ್ನು ಬಲವಾಗಿ ಹಿಡಿದುಕೊಂಡಿದ್ದಾರೆ. ಅಷ್ಟರಲ್ಲಿ ಸ್ಥಳಕ್ಕೆ ಧಾವಿಸಿದ ಕಾಲೋನಿಯ ಇತರ ನಿವಾಸಿಗಳು ಖದೀಮ ತಪ್ಪಿಸಿಕೊಳ್ಳದಂತೆ ಹಿಡಿದುಕೊಂಡು ವಿವಿ ಪುರಂ ಠಾಣೆ ಪೊಲೀಸರ ವಶಕ್ಕೆ ನೀಡಿದ್ದಾರೆ.

ಹೆಚ್ಚಿನ ಹಣ ಸಂಪಾದನೆ ಆಸೆಗೆ ಬಿದ್ದು ವಂಚಕನ ಸಂಚಿನಿಂದ ಲಕ್ಷ–ಲಕ್ಷ ಕಳೆದುಕೊಂಡರು!

ಮೈಸೂರು, ಡಿ.7–ಕಮಿಷನ್ ಆಸೆ ತೋರಿಸಿ ಮೈಸೂರಿನ ಮೂವರಿಗೆ ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚಿಸಲಾಗಿದೆ. ಮೈಸೂರಿನ ರಾಮಕೃಷ್ಣನಗರ ಐ–ಬ್ಲಾಕ್ ನಿವಾಸಿಯಾಗಿರುವ ಗೃಹಿಣಿ ಎನ್.ಮಂಜುಳಾ(49) ಅವರ ಮೊಬೈಲ್‌ಗೆ 95171 94389 ಸಂಖ್ಯೆಯಿಂದ ಮೆಸೇಜ್ ರವಾನಿಸಿದ ವಂಚಕರು, ಗೂಗಲ್ ಮ್ಯಾಪ್‌ಗೆ ರೇಟಿಂಗ್ ನೀಡಿದರೆ ಕಮಿಷನ್ ದೊರೆಯುತ್ತದೆ ಎಂದು ನಂಬಿಸಿದ್ದಾರೆ. ಮೊದಲ ಟಾಸ್ಕ್‌ಗೆ ಮಂಜುಳಾ ಅವರ ಖಾತೆಗೆ 150 ರೂ. ಜಮೆ ಮಾಡಿ, ನಂತರ ಹಂತ ಹಂತವಾಗಿ 39.84 ಲಕ್ಷ ರೂ. ವರ್ಗಾಯಿಸಿಕೊಂಡು ವಂಚಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಹೆಬ್ಬಾಳ್‌ನ ಲಿಯೋ ಜನನಿ ಅಪಾರ್ಟ್‌ಮೆಂಟ್ ನಿವಾಸಿ ಎಲ್.ಮಂಜುನಾಥ್(22) ಅವರನ್ನು 91108 57453 ಸಂಖ್ಯೆ ಮೂಲಕ ಸಂಪರ್ಕಿಸಿದ ವಂಚಕರು ವೆಬ್‌ಸೈಟ್‌ವೊಂದರಲ್ಲಿ ಹೂಡಿಕೆ ಮಾಡಿದರೆ ಕೆಲವೇ ಸಮಯದಲ್ಲಿ ದುಪ್ಪಟ್ಟು ಹಣ ದೊರೆಯುತ್ತದೆ ಎಂದು ನಂಬಿಸಿ 22,17,170 ರೂ. ವರ್ಗಾಯಿಸಿಕೊಂಡು ವಂಚಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ಅಭಿಷೇಕ್ ಸರ್ಕಲ್‌ನ ಪಿಜಿಯೊಂದರಲ್ಲಿರುವ ಯುವತಿ ಎಂ.ಗಾಯತ್ರಿ(25) ಅವರನ್ನು 62650 37371 ಸಂಖ್ಯೆ ಮೂಲಕ ಸಂಪರ್ಕಿಸಿದ ವಂಚಕರು ತಮ್ಮನ್ನು ಐಟಿ ಕಂಪನಿಯೊಂದರ ಹೆಚ್.ಆರ್. ಎಂದು ಪರಿಚಯಿಸಿಕೊಂಡು ಟಾಸ್ಕ್ ಕಂಪ್ಲೀಟ್ ಮಾಡಿದರೆ ಹೆಚ್ಚಿನ ಕಮಿಷನ್ ದೊರೆಯುತ್ತದೆ ಎಂದು ನಂಬಿಸಿ 95 ಸಾವಿರ ರೂ. ವರ್ಗಾಯಿಸಿಕೊಂಡು ವಂಚಿಸಲಾಗಿದೆ. ಈ ಮೂರೂ ಪ್ರಕರಣಗಳೂ ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದೆ.

ತೆಲಂಗಾಣ ಸಿಎಂ ಆಗಿ ರೇವಂತ್ ರೆಡ್ಡಿ ಪ್ರಮಾಣ ವಚನ

ಹೈದರಾಬಾದ್, ಡಿ.7– ತೆಲಂಗಾಣದ ಎರಡನೇ ಮುಖ್ಯಮಂತ್ರಿಯಾಗಿ ಅನುಮಲಾ ರೇವಂತ್ ರೆಡ್ಡಿ ಅವರು ಗುರುವಾರ ಹೈದರಾಬಾದ್‌ನ ಎಲ್‌ಬಿ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಅಪಾರ ಸಂಖ್ಯೆಯ ಜನರು ಮತ್ತು ಕಾಂಗ್ರೆಸ್ ಕಾರ್ಯಕರ್ತರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ತೆಲಂಗಾಣ ರಾಜ್ಯದ ಕಾಂಗ್ರೆಸ್‌ನ ಮೊದಲ ಮುಖ್ಯಮಂತ್ರಿಯಾಗಿ ರೇವಂತ್ ರೆಡ್ಡಿ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಉಪ ಮುಖ್ಯಮಂತ್ರಿಯಾಗಿ ಭಟ್ಟಿ ವಿಕ್ರಮಾರ್ಕ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಜ್ಯಪಾಲೆ ತಮಿಳಿಸೈ ಸೌಂದರರಾಜನ್ ಅವರು ರೇವಂತ್ ರೆಡ್ಡಿ ಅವರಿಗೆ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು.

ಕಾಂಗ್ರೆಸ್‌ನ ಪ್ರಮುಖ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತಿತರರು ಉಪಸ್ಥಿತರಿದ್ದರು. ಇಡೀ ಎಲ್‌ಬಿ ಸ್ಟೇಡಿಯಂ ಮತ್ತು ಕ್ರೀಡಾಂಗಣಕ್ಕೆ ಹೋಗುವ ಎಲ್ಲಾ ರಸ್ತೆಗಳು ಕಾಂಗ್ರೆಸ್ ಕಾರ್ಯಕರ್ತರು ಮತ್ತು ರೇವಂತ್ ರೆಡ್ಡಿ ಅವರ ಅನುಯಾಯಿಗಳಿಂದ ತುಂಬಿದ್ದವು.ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರೊಂದಿಗೆ ಕಾಂಗ್ರೆಸ್ ಶಾಸಕರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಸಂಪುಟಕ್ಕೆ ಸಚಿವರ ಸೇರ್ಪಡೆ: ರೇವಂತ್ ರೆಡ್ಡಿ ಅಲ್ಲದೆ ಅವರ ಸಂಪುಟದ 11 ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು. ಕೊಂಡ ಸುರೇಖಾ, ಡಿ ಅನಸೂಯಾ ಸೀತಕ್ಕ, ತುಮ್ಮಲ ನಾಗೇಶ್ವರ ರಾವ್ ಮತ್ತು ಜೂಪಲ್ಲಿ ಕೃಷ್ಣ ರಾವ್. ಬಹುತೇಕ ಸಚಿವರು ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಆದಾಗ್ಯೂ,



ಅನಸೂಯಾ "ಪವಿತ್ರ ಹೃದಯಂ" (ಪವಿತ್ರ ಹೃದಯ) ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಈ ಮೂಲಕ 2014ರಲ್ಲಿ ಅಸ್ತಿತ್ವಕ್ಕೆ ಬಂದ ತೆಲಂಗಾಣ ರಾಜ್ಯದ ಮೊದಲ ಕಾಂಗ್ರೆಸ್ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ರೇವಂತ್ ರೆಡ್ಡಿ ಪಾತ್ರರಾಗಿದ್ದಾರೆ. ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ರೇವಂತ್ ರೆಡ್ಡಿ ಅವರು ಪ್ರಬಲ ಪ್ರತಿಸ್ಪರ್ಧಿ ಭಾರತ್ ರಾಷ್ಟ್ರ ಸಮಿತಿ (BRS)ಯನ್ನು ಮಣಿಸಿ ಕಾಂಗ್ರೆಸ್‌ನ್ನು ಗೆಲುವಿನತ್ತ ಮುನ್ನಡೆಸಿದರು. ಚುನಾವಣೆಯಲ್ಲಿ ಕಾಂಗ್ರೆಸ್ 119 ಕ್ಷೇತ್ರಗಳಲ್ಲಿ 64 ಸ್ಥಾನಗಳನ್ನು ಗೆದ್ದಿತು. ಬಿಆರ್‌ಎಸ್ 39 ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಎಲ್ಲ ಸಚಿವರು ಸೋನಿಯಾ ಗಾಂಧಿ ಅವರಿಗೆ ಧನ್ಯವಾದ ಅರ್ಪಿಸಿದರು. ಸೋನಿಯಾ ಗಾಂಧಿ ಕೂಡ ಕೊಂಡ ಸುರೇಖಾ ಅವರನ್ನು ಅಪ್ಪಿಕೊಂಡರು. ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಜೂಪಲ್ಲಿ ಕೃಷ್ಣ ಅವರು ಸೋನಿಯಾ ಗಾಂಧಿ ಅವರ ಪಾದ ಮುಟ್ಟಿ ನಮಸ್ಕರಿಸಿದರು. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸೇರಿದಂತೆ ಸಂಪುಟದ ಒಟ್ಟು ಬಲ 18. ಉಳಿದ ಆರು ಸಚಿವರನ್ನು ಸೂಕ್ತ ಸಮಯದಲ್ಲಿ ಸಂಪುಟಕ್ಕೆ ಸೇರಿಸಿಕೊಳ್ಳಲಾಗುವುದು.

ಆರು ಭರವಸೆ ಈಡೇರಿಕೆ: ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅವರು ಅಧಿಕಾರ ವಹಿಸಿಕೊಂಡ ಕೂಡಲೇ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ನೀಡಿದ್ದ ಆರು ಭರವಸೆಗಳನ್ನು ಜಾರಿಗೊಳಿಸುವ ಹೊಸ ಅಭಯ ಹಸ್ತ ಕಾಯ್ದೆಗೆ ಸಂಬಂಧಿಸಿದ ಎರಡು ಕಡತಗಳಿಗೆ ಸಹಿ ಹಾಕಿದರು ಮತ್ತು ಕುಬ್ಜ ಮಹಿಳೆ ರಜನಿ ಅವರಿಗೆ ಉದ್ಯೋಗ ಒದಗಿಸುವ ಮತ್ತೊಂದು ಕಡತಕ್ಕೂ ಸಹಿ ಹಾಕಿದರು.

ಇದೇ ವೇಳೆ ಮಾತನಾಡಿದ ರೇವಂತ್ ರೆಡ್ಡಿ, ಮಾಜಿ ಸಿಎಂ ಅಧಿಕೃತ ನಿವಾಸ ಪ್ರಗತಿ ಭವನದ ಬ್ಯಾರಿಕೇಡ್‌ಗಳನ್ನು ಇಂದು ತೆಗೆದುಹಾಕಲಾಗಿದ್ದು, ಶುಕ್ರವಾರ 10.30ಕ್ಕೆ ಪ್ರಗತಿ ಭವನದಲ್ಲಿ ಸರ್ಕಾರ ಪ್ರಜಾ ದರ್ಬಾರ್ ನಡೆಸಲಿದೆ. ಪ್ರಜಾ ದರ್ಬಾರ್‌ನಲ್ಲಿ ಪಾಲ್ಗೊಳ್ಳುವಂತೆ ಅವರು ಜನತೆಗೆ ಕರೆ ನೀಡಿದರು. ಪ್ರಗಾಹಿ ಭವನಕ್ಕೆ ಜ್ಯೋತಿರಾವ್ ಫುಲೆ ಹೆಸರಿಡಲಾಗುವುದು ಎಂದರು.

ಸ್ಪೀಕರ್ ಪ್ರಸಾದ್: ಗದ್ದಂ ಪ್ರಸಾದ್ ಕುಮಾರ್ ಅವರು ರಾಜ್ಯ ವಿಧಾನಸಭೆಯ ಸ್ಪೀಕರ್ ಆಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಸಂಚಾರ ನಿರ್ಬಂಧ ತೆರವು: ಮಾಜಿ ಸಿಎಂ ಕೆ ಚಂದ್ರಶೇಖರ್ ರಾವ್ ಅವರ ಅಧಿಕೃತ ನಿವಾಸ ಪ್ರಗತಿ ಭವನದ ಬಳಿಯ ಬ್ಯಾರಿಕೇಡ್‌ಗಳನ್ನು ನಗರ ಪೊಲೀಸರು ತೆಗೆದು ಹಾಕಿದರು. ಪ್ರಗತಿ ಭವನವನ್ನು ತಮ್ಮ ಅಧಿಕೃತ ನಿವಾಸವನ್ನಾಗಿ ಬಳಸುವುದಿಲ್ಲ ಮತ್ತು ಅದನ್ನು ಸಾರ್ವಜನಿಕರಿಗೆ ಬಳಸುವುದಾಗಿ ರೇವಂತ್ ರೆಡ್ಡಿ ಈಗಾಗಲೇ ಘೋಷಿಸಿದ್ದಾರೆ. ರೇವಂತ್ ರೆಡ್ಡಿ ಸದ್ಯಕ್ಕೆ ಜುಬಿಲಿ ಹಿಲ್ಸ್‌ನಲ್ಲಿರುವ ತಮ್ಮ ನಿವಾಸದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಿಎಂ ಕುರ್ಚಿಯಲ್ಲಿ ಕುಳಿತ ನಯನಾ ಮೋಟಮ್ಮ!



ಬೆಳಗಾವಿ: ತೆಲಂಗಾಣ ಮುಖ್ಯಮಂತ್ರಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಮುಗಿಸಿ ವಿಧಾನಸಭೆ ಕಲಾಪಕ್ಕೆ ಆಗಮಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಅಭಿನಂದಿಸಲು ಬಂದ ಶಾಸಕಿ ನಯನಾ ಮೋಟಮ್ಮ ಅವರು ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತ ಘಟನೆ ನಡೆಯಿತು. ಇದನ್ನು ಗಮನಿಸಿದ ಡಿ.ಕೆ.ಶಿವಕುಮಾರ್ ಅವರು, ನಯನಾರ ಕೈ ಹಿಡಿದೆಳೆದು ಏಳುವಂತೆ ಸೂಚಿಸಿದರು. "ಮುಖ್ಯಮಂತ್ರಿ ಕುರ್ಚಿ ಮೇಲೆ ಹಾಗೆಲ್ಲ ಕುಳಿತುಕೊಳ್ಳಬಾರದು" ಎಂದು ಶಿವಕುಮಾರ್ ಸೂಚ್ಯವಾಗಿ ತಿಳಿ ಹೇಳಿದರು. ಆದರೆ ವಿಪಕ್ಷ ಹಾಗೂ ಆಡಳಿತ ಪಕ್ಷದ ಸದಸ್ಯರು ಈ ಘಟನೆಯನ್ನು ಗಮನಿಸಿಯೂ ಗಮನಿಸದಂತೆ ಸುಮ್ಮನಿದ್ದರು.

ನಕ್ಕರೆ ಅದೇ ಸ್ವರ್ಗ

ಎಲ್‌ಕೆಜಿ ಹುಡುಗ ಪರೀಕ್ಷೆ ಬರೆಯುವಾಗ ಪೇಪರ್ ಮೇಲೆ ಸೂಸು ಮಾಡಿದ.
ಟೀಚರ್ : ಯಾಕೋ ಪೇಪರ್ ಮೆಲೆ ಸೂಸು ಮಾಡ್ದೆ ಕತ್ತೆ?
ಹುಡುಗ : ಅಮ್ಮ ಹೇಳಿದ್ರು... ಪೇಪರ್ ಕೊಟ್ಟ ಮೇಲೆ ಮೊದಲು ಯಾವುದು ಬರುತ್ತೋ ಅದನ್ನು ಮಾಡು ಅಂತ!

ಮೈಸೂರು ಮಿತ್ರ
ಶುಕ್ರವಾರ, 8 ಡಿಸೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕೇಳುವವನಿಗೆ ಮುಖ್ಯ ಎನಿಸುವಂಥದನ್ನು ಮಾತ್ರ ಹೇಳು! ನಿನಗೆ ಮುಖ್ಯ ಎನಿಸುವಂಥದನ್ನು ಮಾತ್ರ ಕೇಳು! –ಡ್ಯಾಗ್ ಹ್ಯಾಮರ್ ಸ್ಕೋಲ್ಡ್

ವೇದ ಸುಳ್ಳಾದರೂ { ಮೃದುವಾದ ಮಾತುಗಳಿರಲಿ,
ಗಾದೆ ಸುಳ್ಳಾಗದು { ಕಂಕುಳಲ್ಲಿ ದೊಣ್ಣೆಯಿರಲಿ

ನಿಮ್ಮ ಪತ್ರಗಳು

ನಾವು ನೆಮ್ಮದಿಯಾಗಿ ಬದುಕಲು ಅವಕಾಶ ಮಾಡಿಕೊಡಿ

ಮಾನ್ಯರೆ,

ನಮ್ಮ ಕೆಂಚಲಗೂಡು ಗ್ರಾಮದಲ್ಲಿ ಮುಜರಾಯಿ ಇಲಾಖೆಯ ದೇವಸ್ಥಾನಗಳಿಗೆ ದಲಿತರಿಗೆ ಪ್ರವೇಶವಿಲ್ಲ ಎಂದು ನಾವುಗಳು ಜಿಲ್ಲಾ ಹಾಗೂ ತಾಲೂಕು ಆಡಳಿತ ಕಚೇರಿಗಳಿಗೆ ಅರ್ಜಿಗಳನ್ನು ಸಲ್ಲಿಸಿದ್ದೆವು. ಆ ಅರ್ಜಿಗಳಿಗೆ ಸ್ಪಂದಿಸಿದ ತಾಲೂಕು ಆಡಳಿತ 02.12.2023 ರಂದು ಗ್ರಾಮಕ್ಕೆ ಭೇಟಿ ಕೊಟ್ಟು, ನಮ್ಮಗಳಿಗೆ ಮುಕ್ತವಾಗಿ ದೇವಸ್ಥಾನಕ್ಕೆ ಪ್ರವೇಶ ಕೊಟ್ಟರು. ಇದಾದ ಮಾರನೇ ದಿನ ಉಳಿದ ಗ್ರಾಮಸ್ಥರೆಲ್ಲಾ ಸೇರಿ, ಪಂಚಾಯಿತಿ ಮಾಡಿ ಪ್ರವೇಶ ಮಾಡಿದ ನಮ್ಮಗಳಿಗೆ ಬಹಿಷ್ಕಾರ ಹಾಕಿ, ನಮ್ಮನ್ನು ಮಾತಾಡಿಸಿದವರಿಗೆ ರೂ. 10,000 ದಂಡವನ್ನು ವಿಧಿಸಿದ್ದಾರೆ. ಅಲ್ಲದೆ ದಿನಸಿ ಅಂಗಡಿಯವರಿಗೂ ನಮಗೆ ಸಾಮಾನು ಕೊಡಬಾರದು ಎಂಬ ತೀರ್ಮಾನವನ್ನು ಮಾಡಿರುತ್ತಾರೆ. ಹಾಗೆ ದೇವಸ್ಥಾನಕ್ಕೆ ಪ್ರವೇಶ ಮಾಡಿದ್ದರಿಂದ ಮೈಲಿಗೆ ಆಯಿತೆಂದು ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿಯನ್ನು ಪಡೆಯದೆ ಹೊಸದಾಗಿ ದೇವಸ್ಥಾನವನ್ನು ನಿರ್ಮಾಣ ಮಾಡುತ್ತಿದ್ದು, ಈ ನಡವಳಿಕೆಯಿಂದ ದಲಿತರಾದ ನಮ್ಮಗಳಿಗೆ ಮತ್ತಷ್ಟು ಅವಮಾನವಾಗಿದೆ. ಈ ವಿಚಾರವನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ದೂರವಾಣಿ ಮೂಲಕ ತಿಳಿಸಿದಾಗ ನಮ್ಮ ಇಲಾಖೆಯಿಂದ ದೇವಸ್ಥಾನ ಕಟ್ಟುವುದಕ್ಕೆ ಅನುಮತಿ ಪಡೆದಿಲ್ಲ. ನಾನು ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಅಸಹಾಯಕತೆ ತೋಡಿಕೊಂಡರು. ಆದ್ದರಿಂದ ಈ ನಡವಳಿಕೆಯಿಂದ ನಮ್ಮಗಳ ಮನಸ್ಸಿಗೆ ತೀವ್ರ ನೋವಾಗಿದ್ದು, ಈ ರೀತಿ ಅಪಮಾನ ಮಾಡುತ್ತಿರುವ ಗ್ರಾಮದ ಜನಪ್ರತಿನಿಧಿಗಳು, ಮುಖಂಡರ ವಿರುದ್ಧ ಕ್ರಮಕೈಗೊಳ್ಳಬೇಕು. ಈ ನೆಲದ ಕಾನೂನಿಗೆ ಗೌರವ ಕೊಡದೆ, ಜಾತಿ ನಿಂದನೆ ಮತ್ತು ದೌರ್ಜನ್ಯ ನಡೆಸುತ್ತಿರುವ ಇವರ ವಿರುದ್ಧ ದಾವೆ ಹೂಡಿ ನೊಂದ ನಮ್ಮಗಳಿಗೆ ನೆಮ್ಮದಿಯಿಂದ ಬದುಕಲು ಅವಕಾಶ ಮಾಡಿಕೊಟ್ಟು, ನ್ಯಾಯ ದೊರಕಿಸಿಕೊಡಬೇಕಾಗಿ ವಿನಂತಿ.

– ಮುದ್ದುರಾಜು, ಪಿ. ಮರಂಕಯ್ಯ, ಜೆ. ಸ್ವಾಮಿ, ಚಲುವರಾಜು, ಶಿವಪ್ಪ, ಕೆಂಚಲಗೂಡು ಗ್ರಾಮ, ಜಂಬುಪುರ ಹೋಬಳಿ.

ಈ ಮಾರ್ಗದಲ್ಲಿ ಹೆಚ್ಚಿನ ಬಸ್ ಸೌಕರ್ಯ ಕಲ್ಪಿಸಿ



ಮಾನ್ಯರೆ,

ಮೈಸೂರು ನಗರ ಸಾರಿಗೆ ಸಂಸ್ಥೆಯ ರೂಟ್ ನಂ 80 ವಿವೇಕಾನಂದ ವೃತ್ತದಿಂದ ಹೋರಿ ಸುಬ್ಬೇಗೌಡ ಬಸ್ ನಿಲ್ದಾಣದ ಮಾರ್ಗವಾಗಿ ನಗರ ಬಸ್ ನಿಲ್ದಾಣದ ಮೂಲಕ ಸಾತಗಳ್ಳಿ ಡಿಪೋ ಸೇರುತ್ತದೆ. ಪ್ರತಿ ದಿನ ಈ ಮಾರ್ಗವಾಗಿ 8 ಟ್ರಿಪ್ ಓಡಾಡುತ್ತಿತ್ತು. ಹೋರಿ ಸುಬ್ಬೇಗೌಡ ಬಸ್ ನಿಲ್ದಾಣದ ಪಕ್ಕದಲ್ಲಿ ಹಿಂದುಳಿದ ವರ್ಗದ ಬಾಲಕಿಯರ ಹಾಸ್ಟೆಲ್ ಇದೆ. ಇಲ್ಲಿ ಸುಮಾರು 500 ಮಂದಿ ವಿದ್ಯಾರ್ಥಿನಿಯರು ವಾಸ ಮಾಡುತ್ತಿದ್ದು, ಇಲ್ಲಿಂದಲೇ ನಗರದ ವಿವಿಧ ಕಾಲೇಜುಗಳಿಗೆ ಹೋಗಿ ಬರಬೇಕು. ಆದರೆ ರೂಟ್ ನಂ.80 ಇತ್ತೀಚೆಗೆ ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ. ಈ ಬಸ್ ನಿಲ್ದಾಣ ಮೈಸೂರು ನಗರದಲ್ಲೇ ಅತ್ಯಂತ ಸ್ವಚ್ಛತೆ ಮತ್ತು ಸುಂದರ ಬಸ್ ನಿಲ್ದಾಣವೂ ಆಗಿರುತ್ತದೆ. ಈ ರೂಟ್‌ನಲ್ಲಿ ಬೆಳಗ್ಗೆ ಮತ್ತು ಸಂಜೆ ವೇಳೆ ಶಾಲಾ ಕಾಲೇಜು ಆರಂಭವಾಗುವ ಮತ್ತು ಬಿಡುವ ಅವಧಿಯಲ್ಲಿ ಒಂದೆರಡು ಬಸ್‌ಗಳನ್ನು ಹೆಚ್ಚು ಸಂಚರಿಸುವಂತೆ ಮಾಡಿ, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಕಾಂಗ್ರೆಸ್ಸಿನ ಶಕ್ತಿ ಗ್ಯಾರಂಟಿ, ಚುನಾವಣೆಯಲ್ಲಿ ಕಾಂಗ್ರೆಸ್ ಸೋತರೂ ಗೆದ್ದಂತೆ!!!

ಮಾನ್ಯರೆ,

ಪಂಚರಾಜ್ಯ ಚುನಾವಣೆ ಫಲಿತಾಂಶ ಗ್ಯಾರಂಟಿ ಸದ್ದಿಗೆ ಚುನಾವಣೆಯ ರಣರಂಗ ಕಾವೇರಿತು. ಆದರೆ ಕಾಂಗ್ರೆಸ್ ಶಕ್ತಿ ಯಾವುದು ಎಂಬ ಪ್ರಶ್ನೆ ಮೂಡಿದಾಗ ಬಿಜೆಪಿ ಹೈಕಮಾಂಡ್ ನಾಯಕರಿಗೆ ಮನವರಿಕೆಯಾಗಿದ್ದು ಗ್ಯಾರಂಟಿ ಎಂಬ ಪದ. ಈ ಪದಕ್ಕೆ ಅಷ್ಟೊಂದು ಮೌಲ್ಯ ಬಂದಿದ್ದು ಕರ್ನಾಟಕ ವಿಧಾನಸಭೆಯ ಚುನಾವಣೆಯಲ್ಲಿ ಸದ್ದು ಮಾಡಿದ್ದ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳಿಂದ. ಈ ಯೋಜನೆಗಳಿಂದ ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಪ್ರಚಂಡ ಬಹುಮತ ಬಂದು ಅಧಿಕಾರದ ಚುಕ್ಕಾಣಿ ಹಿಡಿಯಿತು. ತಕ್ಷಣ ಕಾಂಗ್ರೆಸ್ ಹೈಕಮಾಂಡ್ ಕರ್ನಾಟಕ ಮಾದರಿಯನ್ನು ಪಂಚರಾಜ್ಯಗಳ ಚುನಾವಣೆಯಲ್ಲಿ ಅಳವಡಿಸಿಕೊಳ್ಳಲು ಪ್ರಾರಂಭಿಸಿತು.

ಬಿಜೆಪಿ ಹೈಕಮಾಂಡ್ ಎಚ್ಚೆತ್ತುಕೊಂಡು ಮೋದಿ ಕಿ ಗ್ಯಾರಂಟಿ ಅನ್ವಯ ಯೋಜನೆಗಳನ್ನು ಜಾರಿಗೆ ತಂದು ಪ್ರಚಾರ ಮಾಡಲು ಪ್ರಾರಂಭಿಸಿದರು. ಇಲ್ಲಿ ಭೋಲೋ ಭೋಲೋ ಗ್ಯಾರಂಟಿ ಯೋಜನೆಗಳು ಸದ್ದು ಮಾಡಿದೆ ವಿನಃ ಪಕ್ಷದ ಹಿತಕ್ಕಾಗಿ ಬಂದ ಮತಗಳಲ್ಲ ಎಂಬ ಮಾತು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಮೊಟ್ಟ ಮೊದಲ ಬಾರಿಗೆ ಕಾಂಗ್ರೆಸ್ ಗ್ಯಾರಂಟಿ ಯೋಜನೆ ಜಾರಿಗೆ ತಂದಿರುವಾಗ ಮೋದಿ ಕಿ ಗ್ಯಾರಂಟಿ ಅನ್ವಯ ಗ್ಯಾರಂಟಿ ಪದ ಕಾಪಿ ಪೇಸ್ಟ್ ಕೃತಿಚೌರ್ಯ ಮಾಡಿದಂತಾಗಬಹುದು.

ಮೋದಿ ಕಿ ಗ್ಯಾರಂಟಿ ಪದ ಭೋಲೋ ಇದ್ರು ಗ್ಯಾರಂಟಿ ಪದ ತೆಗೆದು ಅಥವಾ ಇದರ ಬದಲಾಗಿ ಭೋಲೋ ಭೋಲೋ ಪದಗಳಲ್ಲಿ ಯೋಜನೆಗಳನ್ನು ಜಾರಿಗೆ ತರಬಹುದಿತ್ತು. ಕಾಂಗ್ರೆಸ್ ಬಳಸಿದ ಗ್ಯಾರಂಟಿ ಪದ ಚುನಾವಣೆಯಲ್ಲಿ ಕಾಂಗ್ರೆಸ್ ಸೋತರು ಗೆದ್ದಂತೆ ಎಂಬಂತೆ ಬಿಂಬಿತವಾಗಿದೆ ಎಂಬ ಮಾತು ಸಾರ್ವಜನಿಕರಿಂದ ವ್ಯಕ್ತವಾಗಿದೆ. ಏಕೆಂದರೆ ಸಾರ್ವಜನಿಕರು ಸಾಮಾನ್ಯವಾಗಿ ಮಾತನಾಡುವುದು ಗ್ಯಾರಂಟಿಯಿಂದ ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದಿದ್ದಾರಂತೆ ಎಂಬ ಮಾತು. ಪಂಚರಾಜ್ಯ ಚುನಾವಣೆ ಹಾಗೇ ಕಾಂಗ್ರೆಸ್ ಸೋತರು ಗೆದ್ದಂತೆ ಎಂಬಂತೆ ಬಿಂಬಿತವಾಗಿದೆ. ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳನ್ನು ಲೋಕಸಭಾ ಚುನಾವಣೆಯಲ್ಲಿ ಅಳವಡಿಸಿಕೊಳ್ಳಲು ಕಾಂಗ್ರೆಸ್ ಹೈಕಮಾಂಡ್ ಸಿದ್ಧತೆ ನಡೆಸುವುದು ಖಚಿತವಾಗಿದೆ. ಇದರ ನಡುವೆ ಜನಮೆಚ್ಚುಗೆಯ ಆಡಳಿತ ಬೇಕು ಎನ್ನುವುದು ಸಾರ್ವಜನಿಕರ ಆಶಯವಾಗಿದೆ.

–ವೀರೇಶ ಧೂಪದಮಠ, ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು




ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆ ಮರೆಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ಮೈಸೂರಿನ ಬಗ್ಗೆ ಪ್ರಸ್ತಾಪ ಮಾಡುವಾಗ ಕೆಲವೇ ಮಂದಿಯನ್ನು ಸಾಮಾನ್ಯವಾಗಿ ಪ್ರಸ್ತಾಪ ಮಾಡುವುದನ್ನು ನಾವು ಕಾಣುತ್ತೇವೆ. ನಿಜ, ಅವರುಗಳ ಸೇವೆ ಉತ್ಕೃಷ್ಟವಾದದ್ದು. ಆದರೆ ಅವರಂತೆಯೇ ಮೈಸೂರಿನ ಅಭಿವೃದ್ಧಿಗೆ ದುಡಿದ ಹಲವಾರು ಮಂದಿ ಇದ್ದಾರೆ. ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಶ್ರಮಿಸಿದವರಿದ್ದಾರೆ. ಮಹಾರಾಜರ ಸರ್ಕಾರದಲ್ಲಿ ಅಧಿಕಾರ ಹೊಂದಿಯೋ ಅಥವಾ ವೈಯಕ್ತಿಕವಾಗಿಯೋ ಜನರ ಏಳಿಗೆಗಾಗಿ ಶ್ರಮಿಸಿದವರಿದ್ದಾರೆ. ತಾವು ಸಿರಿವಂತರಲ್ಲದಿದ್ದರೂ, ತಮಗೆ ದೊರೆಯುತ್ತಿದ್ದ ಅಲ್ಪಸ್ವಲ್ಪ ಆದಾಯದಿಂದ, ಹಣಕಾಸಿನ ಬೆಂಬಲದಿಂದ ಸಮಾಜಕ್ಕೆ, ಸರ್ಕಾರಕ್ಕೆ ನಿಸ್ಪೃಹವಾಗಿ ಸೇವೆ ಮಾಡಿದ್ದಾರೆ.

ಅವರುಗಳು ಸೃಷ್ಟಿಸಿದ, ಇಲ್ಲವೇ ಹುಟ್ಟುಹಾಕಿದ ವ್ಯವಸ್ಥೆ ಇಂದು ಇಲ್ಲದಿರಬಹುದು. ಆದರೆ ಅದು ಅಂದಿಗೆ ಒಂದು ಮಹತ್ವದ ಸೇವೆಯಾಗಿತ್ತು, ಕೊಡುಗೆಯಾಗಿತ್ತು. ಸಂಕಷ್ಟದಲ್ಲಿದ್ದಾಗ ಜನರಿಗೆ ಹೆಚ್ಚಿನ ಮಟ್ಟದಲ್ಲಿ ನೆರವಾಗಿತ್ತು. ಅದೇ ರೀತಿ ಮಹಾರಾಜರ ಅವಧಿಯಲ್ಲಿ ಮೈಸೂರು ಸಂಸ್ಥಾನಕ್ಕೆ ಸೇವೆ ಸಲ್ಲಿಸಿದ ದಿವಾನರುಗಳ ಪೈಕಿ ಕೇವಲ ಒಂದಿಬ್ಬರನ್ನೇ ಹೆಸರಿಸುತ್ತೇವೆ. ಅವರ ಸೇವೆಯನ್ನೇ ಪ್ರಮುಖವಾಗಿ ಪ್ರಸ್ತಾಪಿಸುತ್ತೇವೆ. ಆದರೆ ಅವರ ಕೈಕೆಳಗೆ ಸೇವೆ ಮಾಡಿ ಅವರ ಸಾಧನೆಗಳಲ್ಲಿ ನೆರವಾಗಿ ದುಡಿದ ಅಧಿಕಾರಿಗಳನ್ನು ಹೆಸರಿಸುವುದಿಲ್ಲ. ಪ್ರಮುಖ ಸ್ಥಾನದಲ್ಲಿದ್ದ ಇತರರ ಸೇವೆಯನ್ನು ಹೆಚ್ಚು ಗುರುತಿಸುವುದಿಲ್ಲ. ಆಡಳಿತದ ಪ್ರಮುಖ ಸ್ಥಾನದಲ್ಲಿದ್ದವರ ಜೊತೆಯಲ್ಲಿಯೋ ಅಥವಾ ಕೆಳಗಿನ ಸ್ಥಾನದಲ್ಲಿಯೋ ಇದ್ದ ಅನೇಕರು ಮೈಸೂರು ಸಂಸ್ಥಾನದ ಬೆಳವಣಿಗೆಗೆ ಅಪಾರ ಶ್ರಮ ವಹಿಸಿದ್ದಾರೆ. ಅರ್ಪಣಾ ಭಾವದಿಂದ ದುಡಿದಿದ್ದಾರೆ. ಇಂತಹವರ ಸೇವೆಯನ್ನು ನೆನೆಯುವುದೇ ಒಂದು ಪುಣ್ಯದ ಕೆಲಸ. ಇಂತಹವರ ನಿಸ್ಪೃಹ, ನಿಸ್ವಾರ್ಥ ಸೇವೆಯಿಂದ ಮೈಸೂರು, ಮಹಾರಾಜರು ಖ್ಯಾತಿ ಪಡೆಯುವಂತಾಯಿತು. ಮೈಸೂರು 'ರಾಮರಾಜ್ಯ'ವಾಗಲು ಸಾಧ್ಯವಾಯಿತು. ಮೈಸೂರು ರಾಮರಾಜ್ಯವಾದದ್ದು ಕೇವಲ ಒಂದಿಬ್ಬರು ಅಧಿಕಾರಿಗಳಿಂದಲ್ಲ. ಮಹಾರಾಜರೊಬ್ಬರ ಸಲಹೆ, ಮಾರ್ಗದರ್ಶನದಿಂದ ಮಾತ್ರವಲ್ಲ. ಅದರ ಹಿಂದೆ ನೂರಾರು ಜನರ ದುಡಿಮೆ ಇದೆ, ಶ್ರಮವಿದೆ. ನಾವು ಇದನ್ನು ನೆನೆಯಬೇಕು.

ಅಂತಹ ಕೆಲವು ಗಣ್ಯರ ಹೆಸರುಗಳನ್ನು ಹಲವು ಪ್ರಮುಖ ಜಾಗಗಳಿಗೆ ಇಡಲಾಗಿದೆ. ಆದರೆ ಅವರು ಯಾರೆಂಬುದು ನಮಗೆ ತಿಳಿಯದು. ಹಾಗೆ ಹೆಸರಿಡಲು ಕಾರಣವೇನೆಂದು ತಿಳಿಯದು. ಹೀಗಾಗಿ ಆ ಹೆಸರುಗಳು ಅಳಿಸಿಹೋಗುತ್ತಿವೆ. ಅವರುಗಳ ಸೇವೆ, ತ್ಯಾಗದ ಅರಿವಿಲ್ಲದೆ ಅವರ ಹೆಸರುಗಳನ್ನು ತೆಗೆದುಹಾಕಲಾಗುತ್ತಿದೆ. ಬದಲಿಗೆ ಹೊಸ ಹೆಸರುಗಳು ಕಾಣಿಸಿಕೊಳ್ಳುತ್ತಿವೆ. ಹಾಗೆ ಮೈಸೂರಿನ ಅಭಿವೃದ್ಧಿಗೆ ಶ್ರಮಿಸಿದ ಹಲವಾರು ಮಹನೀಯರು ಎಲೆಮರೆಯ ಕಾಯಿಗಳಂತೆ ಉಳಿದುಹೋಗಿದ್ದಾರೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಅವರುಗಳ ಬಗ್ಗೆ ಹೆಚ್ಚು ಮಾಹಿತಿಯೂ ಸುಲಭವಾಗಿ ದೊರೆಯದು. ದೊರೆತರೂ ಅಪೂರ್ಣ. ಒಂದು ಲೇಖನಕ್ಕೆ ಆಗಬಹುದಾದಷ್ಟು ಮಾಹಿತಿಯೂ ಲಭ್ಯವಾಗುವುದಿಲ್ಲ. ಇತಿಹಾಸದ ಪುಸ್ತಕಗಳಲ್ಲಿ ಅಲ್ಲಿ–ಇಲ್ಲಿ ಅವರುಗಳ ಬಗ್ಗೆ ಮಾಹಿತಿ ಅಡಗಿ ಹೋಗಿದ್ದರೂ, ಅದೂ ಕೂಡ ಅಲ್ಪ–ಸ್ವಲ್ಪ ಮಾತ್ರ. ಕೆಲವರ ಮಾಹಿತಿ ಅವರ ಕುಟುಂಬಗಳ ನೆನಪಿನಲ್ಲಿ ಮಾತ್ರ ಉಳಿದುಹೋಗಿದೆ. ಇದರಿಂದಾಗಿ ಸಾಮಾನ್ಯರಿಗೆ ಅವರ ಸೇವೆಯ ಅರಿವು ಇಲ್ಲದೆ ಹೋಗಿದೆ. ಇಂತಹ ಮಹನೀಯರ ಪೈಕಿ ವಿವರಗಳು ಲಭ್ಯವಾಗುವ ಕೆಲವರನ್ನಾದರೂ ನೆನಪಿಸಿಕೊಳ್ಳುವ ಉದ್ದೇಶದಿಂದ ನಾನು ಈ ಲೇಖನ ಮಾಲೆಯನ್ನು ಪ್ರಾರಂಭಿಸುತ್ತಿದ್ದೇನೆ. ಅಂತಹ ಜನ ನೂರಾರು ಮಂದಿ ಇರುವುದರಿಂದ ಎಲ್ಲರನ್ನೂ ಗುರುತಿಸುವುದು, ಎಲ್ಲರ ಬಗ್ಗೆಯೂ ಬರೆಯುವುದು ಅಸಾಧ್ಯವಾದ ಕೆಲಸ. ಈಗಾಗಲೇ ಹೇಳಿದಂತೆ ಅವರೆಲ್ಲರ ವಿವರಗಳೂ ದೊರೆಯುವುದಿಲ್ಲ. ಹಾಗೆ ಗುರುತಿಸುವಾಗ ಸಾಕಷ್ಟು ಪ್ರಸ್ತಾಪಿಸಲ್ಪಡುವ, ಜೀವಂತವಾಗಿರುವವರ ಹೆಸರುಗಳ ಬಗ್ಗೆ ನಾನು ಇಲ್ಲಿ ಪ್ರಸ್ತಾಪಿಸುವುದಿಲ್ಲ. ಎಲೆಮರೆಯ ಕಾಯಿಯಾಗಿ ಉಳಿದುಹೋಗಿರುವ ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ನಾನು ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

1. ಪೆರಿಯಸ್ವಾಮಿ ತಿರುಮಲಾಚಾರ್ಯ



ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದ ಅಧ್ಯಾಪಕರುಗಳಲ್ಲಿ ಒಬ್ಬರು ಎಂ. ಹಿರಿಯಣ್ಣನವರು. ಅವರು ಅಲ್ಲಿ ಸಂಸ್ಕೃತ ವಿಭಾಗದ ಪ್ರಾಧ್ಯಾಪಕರಾಗಿದ್ದರು. ತತ್ವಶಾಸ್ತ್ರದ ಪಾಠ ಹೇಳುತ್ತಿದ್ದರು. ತತ್ವಶಾಸ್ತ್ರದಲ್ಲಿ ಅವರದು ಅಪಾರ ಪಾಂಡಿತ್ಯ. ತಮ್ಮ ಪಾಂಡಿತ್ಯದಿಂದಾಗಿ ವಿಶ್ವಖ್ಯಾತರಾಗಿದ್ದರು. ಮೈಸೂರಿಗೆ ಕೀರ್ತಿ ತಂದವರ ಪೈಕಿ ಅವರೂ ಒಬ್ಬರು.

ಪ್ರೊ. ಹಿರಿಯಣ್ಣನವರು ತಮ್ಮ ಕೊಠಡಿಯಲ್ಲಿ ಶ್ರೀವೈಷ್ಣವ ಪಂಡಿತರೊಬ್ಬರ ಭಾವಚಿತ್ರವನ್ನು ಗೋಡೆಗೆ ತಗುಲಿಹಾಕಿದ್ದರಂತೆ. ಪ್ರತಿದಿನವೂ ಅದರ ಮುಂದೆ ನಿಂತು ಒಂದು ನಿಮಿಷ ಕಣ್ಣು ಮುಚ್ಚಿ ಕೈ ಮುಗಿದು ಆನಂತರ ತಮ್ಮ ಕುರ್ಚಿಯಲ್ಲಿ ಕೂತುಕೊಳ್ಳುತ್ತಿದ್ದರಂತೆ. ಆ ಭಾವಚಿತ್ರದಲ್ಲಿದ್ದವರು ಪ್ರೊ. ಹಿರಿಯಣ್ಣನವರ ಗುರುಗಳು – **ಪೆರಿಯಸ್ವಾಮಿ ತಿರುಮಲಾಚಾರ್ಯರು**. ದೊಡ್ಡ ವಿದ್ವಾಂಸರು.

ತಿರುಮಲಾಚಾರ್ಯರು ಸ್ವಯಮಾಚಾರ್ಯ ಪುರುಷರಾದ ಪೆರೀಸ್ವಾಮಿ ಶ್ರೀನಿವಾಸಾಚಾರ್ಯ ಮತ್ತು ಅಲಮೇಲಮ್ಮನವರ ಪುತ್ರರು. ನಲ್ಲಾನ್ ಚಕ್ರವರ್ತಿಗಳ ಸಂತತಿಯವರು. ಅವರು ಹುಟ್ಟಿದ್ದು 1791ರಲ್ಲಿ (ಪ್ಲವಂಗ ಸಂವತ್ಸರದ 1847ರ ಮಾರ್ಚ್ 7ರಂದು). ತಿರುಮಲಾಚಾರ್ಯರ ದೊಡ್ಡಪ್ಪನವರಾದ ಮೊದಲನೆಯ ಪೆರಿಸ್ವಾಮಿ ತಿರುಮಲಾಚಾರ್ಯರು ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ವಿದ್ವನ್ಮಣಿಗಳು. ಶ್ರೀನಿವಾಸಾಚಾರ್ಯರು ತಿರುಮಲಾಚಾರ್ಯರ ಬಾಲ್ಯದಲ್ಲಿಯೇ ವಿಧಿವಶರಾದರು. ಇವರ ದೊಡ್ಡಪ್ಪನವರ ಮಕ್ಕಳಾದ ಪೆರಿಸ್ವಾಮಿಗಳೆಂಬುವರು ತಿರುಮಲಾಚಾರ್ಯರ ಪೋಷಣೆಯನ್ನು ಮಾಡಿ ಬೆಳೆಸಿದರು. ಅವರ ಬಾಲ್ಯಪಾಠಗಳನ್ನು ಪೆರಿಸ್ವಾಮಿಗಳು ತಮ್ಮ ಮನೆಯಲ್ಲಿ ಹೇಳಿಕೊಟ್ಟರು.

ಅನಂತರ ಪ್ರೌಢ ವಿದ್ಯಾಭ್ಯಾಸಕ್ಕೆ ತಿರುಮಲಾಚಾರ್ಯರನ್ನು ಸೋಸಲೆ ಗರಳಪುರಿ ಶಾಸ್ತ್ರಿಗಳ ಬಳಿಗೆ ಕಳುಹಿಸಿದರು. ಗರಳಪುರಿ ಶಾಸ್ತ್ರಿಗಳು ತಮ್ಮ ಮನೆಯಲ್ಲೇ ಅನೇಕ ಶಿಷ್ಯರಿಗೆ ಪ್ರಾಚೀನ ಗುರುಕುಲದಂತೆ ವಿದ್ಯಾದಾನ ಮಾಡುತ್ತಿದ್ದರು. ಗರಳಪುರಿ ಶಾಸ್ತ್ರಿಗಳಲ್ಲಿ ವಿದ್ಯಾಭ್ಯಾಸ ಮಾಡಿ ತಿರುಮಲಾಚಾರ್ಯರು ತಮ್ಮ ಹದಿನೆಂಟನೆಯ ವಯಸ್ಸಿನಲ್ಲೇ ಗುರುವಿನಷ್ಟೇ ಪ್ರಸಿದ್ಧರಾದರು. ಇವರ ಆಸಕ್ತಿ–ಪಾಂಡಿತ್ಯವನ್ನು ಗುರುತಿಸಿದ ಗುರುಗಳಾದ ಗರಳಪುರಿ ಶಾಸ್ತ್ರಿಗಳು ತಮ್ಮ ಪುತ್ರರಾದ ಕವಿತಿಲಕ ಅಯ್ಯಶಾಸ್ತ್ರಿಗಳು, ಕೆಂಪುನಾರಾಯಣ ಪಂಡಿತರು ಮತ್ತಿತರ ಶಿಷ್ಯರಿಗೆ ಪಾಠ ಹೇಳಲು ಇವರನ್ನೇ ಗೊತ್ತುಮಾಡಿದರು. ಸರಳರೂ, ವಿನಯ ಸ್ವಭಾವದವರೂ ಆದ ಇವರು ತಮ್ಮ ಕಾರ್ಯದಲ್ಲಿ ಯಶಸ್ಸು ಸಾಧಿಸಿ, ಬೋಧಕವರ್ಯರೆಂದು ಪ್ರಖ್ಯಾತರಾದರು.

ವಿದ್ಯಾರ್ಥಿಗಳಿಗೆ ಪಾಠ ಹೇಳಿ ಕೊಡುವುದರ ಜೊತೆಗೆ ತಿರುಮಲಾಚಾರ್ಯರು ತಮ್ಮ ಗುರುಗಳಾದ ಗರಳಪುರಿ ಶಾಸ್ತ್ರಿಗಳ ಕೃತಿಗಳಿಗೆ ವ್ಯಾಖ್ಯಾನವನ್ನೂ ಬರೆದು ಅವರಿಂದ 'ಅಭಿನವ ಮಲ್ಲಿನಾಥ' ಎಂದು ಮೆಚ್ಚುಗೆ ಪಡೆದರು.

ಇವರು ಕೊಟ್ಟ ದೊಡ್ಡ ಕಾಣಿಕೆ ಎಂದರೆ ಮೈಸೂರು ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ **ಸದ್ವಿದ್ಯಾ ಪಾಠಶಾಲೆಯ ಸ್ಥಾಪನೆ**. ಸನಾತನ ಜ್ಞಾನ, ಪಾಂಡಿತ್ಯ ಉಳಿಯಬೇಕೆಂದು ಆಸೆ ಹೊತ್ತು ಇವರು ಸದ್ವಿದ್ಯಾ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿದರು. ಮೈಸೂರಿನ ಇನ್ನು ಕೆಲವು ಪಂಡಿತರು ಪೆರಿಯಸ್ವಾಮಿಗಳ ಕಾರ್ಯಕ್ಕೆ ನೆರವಾಗಿ ನಿಂತರು. ಪಾಠಶಾಲೆಯನ್ನು ಸ್ಥಾಪಿಸಿದ ಉದ್ದೇಶವಾದರೋ ಉಪನಿಷತ್ತು ಮುಂತಾದ ಗ್ರಂಥಗಳಲ್ಲಿ ಅಡಗಿರುವ ತತ್ವಜ್ಞಾನವನ್ನು ತಿಳಿಸಿಕೊಡುವುದು. ಕಾವ್ಯವನ್ನು ಹೇಳಿಕೊಡುವ ಹೊಣೆಗಾರಿಕೆಯನ್ನು ಅವರೇ ವಹಿಸಿಕೊಂಡರು. ಮನಸ್ಸಿಗೆ ತೋರಿದಂತೆ ಅರ್ಥ ಮಾಡಿಕೊಂಡು ಪ್ರತಿಭಾನುಗುಣವಾಗಿ ಭಾವ–ವಿಚಾರ–ವಿಮರ್ಶೆಗಳನ್ನು ಮಾಡುವುದಕ್ಕಿಂತ 'ಸದ್ವಿದ್ಯೆ'ಯ ಸ್ವಭಾವವನ್ನು ಹೊಂದಿಕೊಳ್ಳುವ ರೀತಿಯಲ್ಲಿ ಪಾಠ–ಪ್ರವಚನಗಳನ್ನು ಅವರು ಮಾಡುತ್ತಿದ್ದುದು ವಿಶೇಷ. ಅವರ ಪ್ರತಿಭೆ ಎಷ್ಟಿತ್ತೆಂದರೆ ಅವರ ಹತ್ತಿರ ಒಯ್ದ ಪುಸ್ತಕಗಳನ್ನು ವಿದ್ಯಾರ್ಥಿಗಳಿಂದ ಓದಿಸಿ, ಬರೀ ಕೇಳಿದ ಮಾತ್ರದಿಂದಲೇ ಗ್ರಂಥದ ವೈಶಿಷ್ಟ್ಯವನ್ನು ವಿವರವಾಗಿ ಹೇಳುತ್ತಿದ್ದರಂತೆ. ಅಂತಹ ಸಾಮರ್ಥ್ಯ ಅವರದು.

ಸದ್ವಿದ್ಯಾ ಸಂಸ್ಕೃತ ಪಾಠಶಾಲೆಯನ್ನು ಅವರು ಸ್ಥಾಪಿಸಿ ಅದರ ಅಧ್ಯಕ್ಷರೂ, ಮುಖ್ಯೋಪಾಧ್ಯಾಯರೂ ಆದರು. ಶಾಲೆ ಸ್ಥಾಪನೆಯಾದದ್ದು 1854ರಲ್ಲಿ, ಸಂಸ್ಕೃತ ಪಾಠಶಾಲೆಯಾಗಿ. ತಮ್ಮ ಶಿಷ್ಯರುಗಳಾದ ಕವಿತಿಲಕ ಸೋಸಲೆ ಅಯ್ಯಶಾಸ್ತ್ರಿಗಳು, ಆರ್.ಜಿ.ಐಯ್ಯನ್ಯಂಗಾರ್ಯರು, ಸೋಸಲೆ ಶ್ರೀನಿವಾಸಾಚಾರ್ಯರು ಮತ್ತು ಗುಂಡಾಶಾಸ್ತ್ರಿಗಳು ಇವರುಗಳನ್ನು ಸಹಾಯೋಪಾಧ್ಯಾಯರಾಗಿ ನೇಮಿಸಿಕೊಂಡು, ಸಾಹಿತ್ಯ, ವ್ಯಾಕರಣ ಮುಂತಾದ ವಿಷಯಗಳ ಉಚಿತ ಪಾಠ ಹೇಳುತ್ತಿದ್ದರು. ಈ ಶಾಲೆ ತಿರುಮಲಾಚಾರ್ಯರ ಪಾಠಶಾಲೆ ಎಂದೂ ಖ್ಯಾತಿ ಪಡೆಯಿತು.

ಬಹಳಷ್ಟು ಕಾಲದವರೆಗೆ ತಿರುಮಲಾಚಾರ್ಯರ ಪಾಠಶಾಲೆಯನ್ನು ಕೆಲವು ಮಹನೀಯರುಗಳ ಮನೆಗಳಲ್ಲಿ ನಡೆಸಲಾಗುತ್ತಿತ್ತು. ಅನಂತರ ಅದು ದೇವೀರಮ್ಮಣ್ಣಿ ಅಗ್ರಹಾರದ ಎದುರಿಗೆ ಇದ್ದ ಹಂಪೇ ಅರಸಿನವರ ಕಟ್ಟಡದಲ್ಲಿ ಸ್ವಲ್ಪ ಕಾಲ ನಡೆಯಿತು. ಅಲ್ಲಿಂದ ಬೊಕ್ಕಸದ ಮಾದಯ್ಯನವರ ಕಟ್ಟಡಕ್ಕೆ ಬದಲಾಯಿತು. ಹೀಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಬದಲಾಗುತ್ತಿದ್ದುದು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತಿತ್ತು. ಆದ್ದರಿಂದ ಪಾಠಶಾಲೆಗೋಸ್ಕರವಾಗಿಯೇ ಒಂದು ಶಾಶ್ವತವಾದ ಕಟ್ಟಡವನ್ನು ಕಟ್ಟಿಸಬೇಕೆಂದು ಪೆರಿಯಸ್ವಾಮಿಗಳು ತೀರ್ಮಾನಿಸಿದರು. ಮೈಸೂರಿನ ಜಿಲ್ಲಾಧಿಕಾರಿಗಳಾಗಿದ್ದ **ಪೂರ್ಣ ಕೃಷ್ಣರಾಯರು** ಇತರರೂ ಸೇರಿ ಸಾಹುಕಾರ್ 'ಗಂಜಿ' ನರಸಿಂಹಯ್ಯನವರನ್ನು ಈ ಧರ್ಮಕಾರ್ಯವನ್ನು ಮಾಡಿಕೊಡಬೇಕೆಂದು ಕೋರಿದರು. ಅವರುಗಳ ಕೋರಿಕೆಯಂತೆ ಪೆರಿಯಸ್ವಾಮಿಗಳ ಮಿತ್ರರೂ, ಧರ್ಮಿಷ್ಠರೂ ಆಗಿದ್ದ **'ಗಂಜಿ' ನರಸಿಂಹಯ್ಯನವರು** ಈಗಿನ ಕಟ್ಟಡವನ್ನು ನಿರ್ಮಾಣ ಮಾಡಿಸಿಕೊಟ್ಟರು. ಕಟ್ಟಡದ ನಿರ್ಮಾಣಕ್ಕೆ ಅವರು ತಮ್ಮ ಸ್ವಂತ ಹಣವನ್ನೇ ಖರ್ಚು ಮಾಡಿದರು. ಕಟ್ಟಡ ನಿರ್ಮಾಣವಾದುದು ಸುಮಾರು 1895ರಲ್ಲಿ. ನರಸಿಂಹಯ್ಯನವರು ಸಂತೇಪೇಟೆಯ ವರ್ತಕ ಶ್ರೀಮಂತರಲ್ಲಿ ಒಬ್ಬರು. ಕ್ಷಾಮದಿಂದ ಆಹಾರಕ್ಕೆ ಕೊರತೆಯಾದಾಗ ನರಸಿಂಹಯ್ಯನವರು ಕ್ಷಾಮಕ್ಕೆ ಈಡಾದವರಿಗೆ ಗಂಜಿ ಮಾಡಿಸಿ ಹಂಚುತ್ತಿದ್ದರು. ಈ ಕಾರಣ ಅವರಿಗೆ 'ಗಂಜಿ' ನರಸಿಂಹಯ್ಯ ಎಂದು ಹೆಸರು ಬಂದಿತ್ತು.

ಈಗ ಶಾಲೆ ಇರುವ ಸ್ಥಳದಲ್ಲಿ ಗರ್ಗೇಶ್ವರಿಯ ಗಾಡಿಗಳು ಬಂದು ನಿಲ್ಲುತ್ತಿದ್ದವು. ಇದರಿಂದಾಗಿ ಈ ಜಾಗವನ್ನು ಗರ್ಗೇಶ್ವರಿ ಚೌಕವೆಂದು ಕರೆಯುತ್ತಿದ್ದರು. ಅದೇ ಮರಿಮಲ್ಲಪ್ಪ ಶಾಲೆ ಇರುವ ಜಾಗವನ್ನು ಯಡತೊರೆ ಗಾಡಿ ಚೌಕವೆಂದು ಕರೆಯುತ್ತಿದ್ದರು. ಶಾಲೆಯ ನೈಋತ್ಯ ಮೂಲೆಯಲ್ಲಿನ ಆಂಜನೇಯನನ್ನು ಆ ರೈತರು ನಿರ್ಮಿಸಿದರೆನ್ನಲಾಗಿದೆ. ತಮ್ಮ ಗಾಡಿಗಳ ರಕ್ಷಣೆಗೆ ಸರ್ವೆ ಇಲಾಖೆಯವರ ಸಹಾಯದಿಂದ ಹನುಮನ ರಕ್ಷಣೆ ಪಡೆದರೆನ್ನಲಾಗಿದೆ.

ಶಾಲೆಯ ಕಟ್ಟಡದ ಪ್ರಾರಂಭೋತ್ಸವವನ್ನು ಮಹಾರಾಜ ಚಾಮರಾಜ ಒಡೆಯರು ನೆರವೇರಿಸಿದರು. "ನಿಮ್ಮ ಈ ಧರ್ಮಕಾರ್ಯವು ಅಪೂರ್ವವಾದುದು. ನಿಮ್ಮ ಮೇಲ್ಪಂಕ್ತಿಯನ್ನು ಧನಿಕರಾದ ಇತರರೂ ಅನುಸರಿಸಲಿ" ಎಂದು ಅವರು ಮೆಚ್ಚಿ ನುಡಿದರು. ಸುಮಾರು 25,000 ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಡವನ್ನು ಕಟ್ಟಿಸಿಕೊಟ್ಟ ಸಾಹುಕಾರ್ 'ಗಂಜಿ' ನರಸಿಂಹಯ್ಯನವರಿಗೆ ತಮ್ಮ ದರ್ಬಾರಿನಲ್ಲಿ 'ಧರ್ಮ ಪ್ರವರ್ತ' ಎಂಬ ಬಿರುದನ್ನು ಕೊಟ್ಟು ಗೌರವಿಸಿದರು. ಈ ಹೊಸ ಕಟ್ಟಡದಲ್ಲಿ ಶಾಲೆಯು ನಡೆಯುತ್ತಿದ್ದಾಗ ಸುಮಾರು 400 ಮಂದಿ ವಿದ್ಯಾರ್ಥಿಗಳು ಸಂಸ್ಕೃತ ವಿದ್ಯೆಯನ್ನು ವ್ಯಾಸಂಗ ಮಾಡುತ್ತಿದ್ದರು.





ಗೌರಿ ಸತ್ಯ
ಹಿರಿಯ ಪತ್ರಕರ್ತರು
8762788685

ಪಾಠಶಾಲೆಯ ಅಂಗವಾಗಿ 'ಸದ್ವಿದ್ಯಾ ಮಂದಿರ' ಹೆಸರಿನ ಮುದ್ರಾಶಾಲೆ, 'ಸದ್ವಿದ್ಯಾ ಸಂವರ್ಧಿನಿ ಸಭಾ' ಹೆಸರಿನಲ್ಲಿ ಸಂಸ್ಕೃತ ಭಾಷೆಯ ಚರ್ಚಾ ಸಂಘ, 'ಸದ್ವಿದ್ಯಾರಾಮಂ' ವಾಚಕ ಶಾಲೆ, 'ಸದ್ವಿದ್ಯಾ ಮಂಜರಿ' ಹೆಸರಿನ ಮಾಸ ಪತ್ರಿಕೆ, 'ಸದ್ವಿದ್ಯಾ ಪೋಷಿಣಿ' ಹೆಸರಿನ ವಾರ ಪತ್ರಿಕೆ, 'ಸದ್ವಿದ್ಯಾ ಕಂದಳಂ' ಹೆಸರಿನ ಕಥಾ ಪುಸ್ತಕ, 'ಸದ್ವಿದ್ಯಾ ಸಾಧನಂ' ಹೆಸರಿನಲ್ಲಿ ಬರವಣಿಗೆ ಪುಸ್ತಕ ಇವುಗಳನ್ನು ತಿರುಮಲಾಚಾರ್ಯರು ನಡೆಸುತ್ತಿದ್ದರು.

ಕೇವಲ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಸ್ಥಾಪಿತವಾಗಿದ್ದ ಶಾಲೆಗೆ ಯಾವುದೇ ಹಣ ಸಹಾಯವಿರಲಿಲ್ಲ. ಅದು ತಿರುಮಲಾಚಾರ್ಯರು ಮತ್ತು ಅವರ ಶಿಷ್ಯರುಗಳಿಂದಲೇ ನಡೆಯುತ್ತಿತ್ತು. ನಂತರ ಪುರಸಭೆ ಮತ್ತು ದೇವರಾಜ ನಿಧಿಯಿಂದ ಸ್ವಲ್ಪ ಹಣದ ಸಹಾಯ ದೊರೆಯಲಾರಂಭವಾಯಿತು. 1890ರ ವೇಳೆಗೆ ಶಾಲೆಯು ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯಿಂದ ಅಂಗೀಕೃತವಾಯಿತು. ಕ್ರಮೇಣ ಶಾಲೆಯಲ್ಲಿ ಕನ್ನಡ ವ್ಯಾಸಂಗವನ್ನೂ ಪ್ರಾರಂಭಿಸಲಾಯಿತು. ಪ್ರೌಢ ಸಂಸ್ಕೃತ ವ್ಯಾಸಂಗದ ಜೊತೆಗೆ ಕನ್ನಡ ಲೋವರ್ ಸೆಕೆಂಡರಿ ಮಟ್ಟದ ಶಿಕ್ಷಣವೂ ಸೇರಿಕೊಂಡಿತು. 1895ರ ವೇಳೆಗೆ ಶಾಲೆಯಲ್ಲಿ ಸುಮಾರು ನೂರು ವಿದ್ಯಾರ್ಥಿಗಳು ಓದುತ್ತಿದ್ದರು. ಆ ವೇಳೆಗೇ ಶಾಲೆಯು ಪ್ರಸಿದ್ಧಿಯಾಗಿದ್ದನ್ನು ಇದು ತೋರಿಸುತ್ತದೆ.

1921ರಲ್ಲಿ ಸದ್ವಿದ್ಯಾ ಸಂಸ್ಕೃತ ಶಾಲೆ ಸಂಸ್ಕೃತವನ್ನು ಐಚ್ಛಿಕ ವಿಷಯವನ್ನಾಗಿ ಬೋಧಿಸುವ ಕನ್ನಡ–ಇಂಗ್ಲಿಷ್ ಮಾಧ್ಯಮಿಕ ಶಾಲೆಯಾಯಿತು. ಅದುವರೆಗೂ ಅದು ಕೇವಲ ಪ್ರಾಥಮಿಕ ಶಾಲೆಯಾಗಿತ್ತು. ಮಾಧ್ಯಮಿಕ ಶಾಲೆಯ ಪ್ರಥಮ ಮುಖ್ಯೋಪಾಧ್ಯಾಯರು ದೇವುಡು ನರಸಿಂಹಯ್ಯನವರು. ಮಾಧ್ಯಮಿಕ ಶಾಲೆಯಲ್ಲಿ ಎಂಟು ಮಂದಿ ಅಧ್ಯಾಪಕರು ಮತ್ತು 500 ಮಂದಿ ವಿದ್ಯಾರ್ಥಿಗಳಿದ್ದರು. ಸ್ವಾತಂತ್ರ್ಯಾನಂತರ ಅದು ಪೂರ್ಣ ಕನ್ನಡ–ಇಂಗ್ಲಿಷ್ ಶಾಲೆಯಾಗಿ ಬೆಳೆಯಿತು. ಅದರ ಈ ಬೆಳವಣಿಗೆಗೆ ಕಾರಣರು ವೃದ್ಧಪಿತಾಮಹರೆಂದು ಖ್ಯಾತರಾಗಿದ್ದ **ಎಂ.ವೆಂಕಟಕೃಷ್ಣಯ್ಯನವರು**. ಈಚೆಗೆ ಈ ಸಂಸ್ಥೆ ಪ್ರಿ–ಯೂನಿವರ್ಸಿಟಿ ಶಿಕ್ಷಣದವರೆಗೆ ಬೆಳೆದು, ತನ್ನದೇ ಇನ್ನೊಂದು ಸಂಸ್ಥೆಯನ್ನು ಕಾಲೇಜು ಶಿಕ್ಷಣಕ್ಕಾಗಿ ಸ್ಥಾಪಿಸಿದೆ. ನಗರದ ಶಿಕ್ಷಣ ಕ್ಷೇತ್ರಕ್ಕೆ ತನ್ನದೇ ಕೊಡುಗೆ ನೀಡುತ್ತಾ ಕೀರ್ತಿ ಗಳಿಸಿದೆ.

ಶಾಲೆ ಸ್ಥಾಪನೆಯಾದದಂದಿನಿಂದ ಸ್ಥಾಪಕ ತಿರುಮಲಾಚಾರ್ಯರೇ ಶಾಲೆಯ ಅಧ್ಯಕ್ಷರಾಗಿದ್ದರು. ನಂತರ ಒಂದು ಆಡಳಿತ ಮಂಡಳಿಯನ್ನೂ ರಚಿಸಿ ಅವರು ಶಾಲೆಯನ್ನು ನಡೆಸಿಕೊಂಡು ಹೋಗುತ್ತಿದ್ದರು. 1899ರವರೆಗೆ ಅವರೇ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ನಗರದ ಹಲವಾರು ಗಣ್ಯರು ಈ ಸಂಸ್ಥೆಯ ಅಧ್ಯಕ್ಷರೂ, ಕಾರ್ಯದರ್ಶಿಗಳೂ, ಮುಖ್ಯೋಪಾಧ್ಯಾಯರೂ ಆಗಿದ್ದರು. ಅವರಲ್ಲಿ ಕೆಲವರೆಂದರೆ ವೃದ್ಧಪಿತಾಮಹ ಎಂ.ವೆಂಕಟಕೃಷ್ಣಯ್ಯ, ಅಂಬಳೆ ಅಣ್ಣಯ್ಯ ಪಂಡಿತರು, ಸಾಹುಕಾರ್ ಡಿ.ಬನುಮಯ್ಯ, ಮಹಾರಾಜರ ಗುರುಗಳಾಗಿದ್ದ ಡಿ. ರಾಮಯ್ಯ, 'ರಾಜಸೇವಾಸಕ್ತ' ಸಿ. ನರಸಿಂಹಯ್ಯ, ಸುಪ್ರಸಿದ್ಧ ವಿದ್ವಾಂಸ ದೇವುಡು ನರಸಿಂಹಶಾಸ್ತ್ರಿ ಮತ್ತು ಅಗರಂ ರಂಗಯ್ಯ.

ಇಲ್ಲಿ ಓದಿದ ವಿದ್ಯಾರ್ಥಿಗಳ ಪೈಕಿ ಗಣ್ಯರೆಂದರೆ ಕವಿತಿಲಕ ಅಯ್ಯಶಾಸ್ತ್ರಿಗಳು, ಸರ್. ಎಂ. ಕಾಂತರಾಜ ಅರಸ್, ದೇವಶಿಖಾಮಣಿ ಅಳಸಿಂಗಾಚಾರ್ಯರು, ಎಕ್ಸೈಸ್ ಕಮಿಷನರ್ ಅಂಬಳೆ ಸುಬ್ರಹ್ಮಣ್ಯ ಅಯ್ಯರ್, ಪ್ರೊ ಎಂ.ಹಿರಿಯಣ್ಣ ದಿವಾನ್ ಬಹದ್ದೂರ್ ಸರ್ ಎಂ.ಎನ್.ಕೃಷ್ಣರಾವ್, ಪ್ರೊ. ಎಂ.ಯಾಮುನಾಚಾರ್ಯ, ಪ್ರೊ. ಎಂ.ವಿ.ಕೃಷ್ಣರಾವ್ ಮತ್ತು ಮೈಸೂರು ವಾಸುದೇವಾಚಾರ್ಯರು.

ಶಾಲೆಯ ಸಭಾಂಗಣದಲ್ಲಿ ಹಲವಾರು ಹೆಸರಾಂತ ಪಂಡಿತರು ಉಪನ್ಯಾಸ–ಭಾಷಣಗಳನ್ನು ಮಾಡಿದ್ದಾರೆ. ನಾಡಿನ ಶ್ರೇಷ್ಠ ಸಂಗೀತ ದಿಗ್ಗಜರು ಕಾರ್ಯಕ್ರಮ ನಡೆಸಿದ್ದಾರೆ. ವೀಣೆ ಶೇಷಣ್ಣ, ರುದ್ರಪಟ್ಟಣಂ ವೆಂಕಟರಮಣಯ್ಯ, ಬಿಡಾರಂ ಕೃಷ್ಣಪ್ಪ ಮುಂತಾದವರು ಸಂಗೀತ ಕಛೇರಿಗಳನ್ನು ನಡೆಸಿದ್ದಾರೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲೂ ಈ ಸಂಸ್ಥೆ ತನ್ನ ಪಾತ್ರ ವಹಿಸದೆ ಇಲ್ಲ. ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ಪ್ರಚಾರ ಮುಂತಾದ ಚಟುವಟಿಕೆಗಳ ಕೇಂದ್ರವಾಗಿತ್ತು ಇದು.

ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿ ನೀಡಿದ್ದಾಗ ತಮ್ಮ ಸಿಂಹ ಘರ್ಜನೆಯಿಂದ ಭಾರತವನ್ನು ಎಚ್ಚರಿಸಿದ್ದು ಈ ಕಟ್ಟಡದಲ್ಲಿ. 1892ರ ನವೆಂಬರ್ ತಿಂಗಳಲ್ಲಿ ಪಾಠಶಾಲೆಯ ಸಭಾಂಗಣದಲ್ಲಿ ಅವರು ತಮ್ಮ ಉಪನ್ಯಾಸಗಳನ್ನು ಕೊಟ್ಟದ್ದು. 'ಸಂಸ' ಹೆಸರಿನಲ್ಲಿ 'ವಿಗಡ ವಿಕ್ರಮರಾಯ' ರಚಿಸಿದ ಸುಪ್ರಸಿದ್ಧ ಸಾಮಿ ವೆಂಕಟಾದ್ರಿ ಮತ್ತು ಖ್ಯಾತ ಪ್ರಹಸನಕಾರ ಟಿ.ಪಿ.ಕೈಲಾಸಂ ತಮ್ಮ ಕೊನೆಯ ದಿನಗಳಲ್ಲಿ ಇಲ್ಲಿ ವಾಸ ಮಾಡುತ್ತಿದ್ದರು. ಸಂಸ ಅವರು ಕಟ್ಟಡದ ದಕ್ಷಿಣ ದಿಕ್ಕಿನಲ್ಲಿ ಅಗ್ನೇಯ ಮೂಲೆಯಲ್ಲಿರುವ ಕೊಠಡಿಯಲ್ಲಿ ವಾಸವಾಗಿದ್ದರು. ಕೈಲಾಸಂ ಅವರಾದರೂ 1945ರ ಅಂತ್ಯದಲ್ಲಿ ಪಾಠಶಾಲೆಯ ವಾಯುವ್ಯ ಮೂಲೆಯ ಕೊಠಡಿಯಲ್ಲಿ ಸುಮಾರು ಒಂದು ತಿಂಗಳು ವಾಸವಾಗಿದ್ದರು. ಮೈಸೂರಿಗೆ ಇದು ಕೈಲಾಸಂ ಅವರ ಕೊನೆಯ ಭೇಟಿಯಾಗಿತ್ತು.

ಶತಮಾನವನ್ನೂ ದಾಟಿ ಕಳೆದ 170 ವರ್ಷಗಳಲ್ಲಿ ಮೈಸೂರಿನ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಸೇವೆ ಸಲ್ಲಿಸುತ್ತಾ ಬರುತ್ತಿರುವ ಸದ್ವಿದ್ಯಾ ಪಾಠಶಾಲೆಯ ಕೀರ್ತಿ ಅದರ ಸ್ಥಾಪಕ **ಪೆರಿಯಸ್ವಾಮಿ ತಿರುಮಲಾಚಾರ್ಯರಿಗೆ** ಸಲ್ಲಬೇಕಾದ್ದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನಲ್ಲಿ ಮೈ ಬಿಲ್ಡ್–23 ವಸ್ತುಪ್ರದರ್ಶನ

ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಚಾಲನೆ





ಮೈಸೂರು,ಡಿ.7(ಬಿಎಲ್‌ಯು)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಆಯೋಜಿಸಿರುವ ಮೈ ಬಿಲ್ಡ್–23 ವಸ್ತುಪ್ರದರ್ಶನವನ್ನು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉದ್ಘಾಟಿಸಿದರು.

ತರುವಾಯ ಮಾತನಾಡಿದ ಶ್ರೀಗಳು, ಮನೆ, ಅಪಾರ್ಟ್‌ಮೆಂಟ್ ಸೇರಿದಂತೆ ಇತರೆ ಕಟ್ಟಡ ನಿರ್ಮಾಣ ಮಾಡುವವರಿಗೆ ಈ ವಸ್ತುಪ್ರದರ್ಶನ ಬಹುಪಯೋಗಿಯಾಗಿದೆ. ಮಾರುಕಟ್ಟೆಗೆ ಹೊಸದಾಗಿ ಪರಿಚಯಿಸಿರುವ ಕಟ್ಟಡ ಸಾಮಗ್ರಿಗಳ ಬಗ್ಗೆ ಕೇಳಿರುತ್ತೇವೆ. ಆದರೆ ಅದನ್ನು ನೋಡಿರುವುದಿಲ್ಲ. ಜೊತೆಗೆ ಅದರ ಬಗ್ಗೆ ಸ್ಪಷ್ಟ ಮಾಹಿತಿ ಕೂಡ ಇರುವುದಿಲ್ಲ. ಆದರೆ ಮೈ ಬಿಲ್ಡ್ ವಸ್ತುಪ್ರದರ್ಶನದಲ್ಲಿ ಹೊಸದಾಗಿ ಮಾರುಕಟ್ಟೆಗೆ ಬಂದಿರುವ ಕಟ್ಟಡ ನಿರ್ಮಾಣ ಸಾಮಗ್ರಿಗಳ ಬಗ್ಗೆ ಸಮಗ್ರ ಮಾಹಿತಿ ದೊರೆಯುತ್ತದೆ. ಮೈಸೂರು ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಯ ಜನರು ಇದರ ಉಪಯೋಗ ಪಡೆಯಬೇಕು ಎಂದು ಸಲಹೆ ನೀಡಿದರು.

ಉದ್ಘಾಟನಾ ಕಾರ್ಯಕ್ರಮದ ನಂತರ ಶ್ರೀಗಳು ಎಲ್ಲಾ ಸ್ಟಾಲ್‌ಗಳಿಗೆ ಭೇಟಿ ನೀಡಿ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ವೀಕ್ಷಿಸಿ ಅದರ ಬಗ್ಗೆ ಮಾಹಿತಿ ಪಡೆದರು.

ಇಂದಿನಿಂದ ಐದು ದಿನಗಳ ಕಾಲ ವಸ್ತು ಪ್ರದರ್ಶನ ನಡೆಯಲಿದ್ದು, 173 ಸ್ಟಾಲ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಕಟ್ಟಡ ನಿರ್ಮಾಣಕ್ಕೆ ಅವಶ್ಯವಿರುವ ಸಿಮೆಂಟ್, ಕಬ್ಬಿಣ, ಎಂ.ಸ್ಯಾಂಡ್, ನವೀನ ರೀತಿಯ ಬಾಗಿಲುಗಳು, ಕೃತಕ ಹಸಿರು ನೆಲಹಾಸು, ಇಂಟೀರಿಯರ್ ಡಿಸೈನ್ಸ್ ಸೇರಿದಂತೆ ಹಲವು ವಸ್ತುಗಳನ್ನು ಪ್ರದರ್ಶಿಸಲಾಗಿದೆ. ಈ ವಸ್ತುಗಳ ಉಪಯೋಗದ ಬಗ್ಗೆ ಕಂಪನಿಗಳ ಪ್ರತಿನಿಧಿಗಳು ಸ್ಥಳದಲ್ಲೇ ಮಾಹಿತಿ ನೀಡುತ್ತಾರೆ.

ಕಟ್ಟಡ ನಿರ್ಮಾಣ ಸಾಮಗ್ರಿಗಳ ತಯಾರಿಕಾ ಕ್ಷೇತ್ರದಲ್ಲಿ ಬಹಳಷ್ಟು ಆವಿಷ್ಕಾರವಾಗಿದೆ. ನವೀಕರಿಸಿರುವ ಕಟ್ಟಡ ಸಾಮಗ್ರಿಗಳನ್ನು ವಸ್ತುಪ್ರದರ್ಶನದಲ್ಲಿಡಲಾಗಿದೆ. ಮಧ್ಯವರ್ತಿಗಳ ಹಾವಳಿ ಇಲ್ಲದೆ ಕಂಪನಿಗಳಿಂದಲೇ ನೇರವಾಗಿ ವಸ್ತುಗಳನ್ನು ಖರೀದಿಸಲು ವಸ್ತುಪ್ರದರ್ಶನದಲ್ಲಿ ಸಂಪರ್ಕ ವ್ಯವಸ್ಥೆ ಮಾಡಲಾಗಿದೆ.

ಉದ್ಘಾಟನಾ ಕಾರ್ಯಕ್ರಮದ ವೇದಿಕೆಯಲ್ಲಿ ಅಸೋಸಿಯೇಷನ್‌ನ ಮೈಸೂರು ವಿಭಾಗದ ಅಧ್ಯಕ್ಷ ನಾಗರಾಜ್ ವಿ.ಬೈರಿ, ಕಾರ್ಯದರ್ಶಿ ಕೆ.ಎಸ್.ಬಾಲಾಜಿ, ಮೈಬಿಲ್ಡ್ ಆಯೋಜನೆಯ ಮುಖ್ಯಸ್ಥ ಎಂ.ಡಿ.ಚಂದ್ರಶೇಖರ್, ಕಾರ್ಯದರ್ಶಿ ಆರ್.ರಮೇಶ್ ರಾವ್ ಉಪಸ್ಥಿತರಿದ್ದರು.

ಮೈ ಬಿಲ್ಡ್‌ನಲ್ಲಿ ಕೈ ಬೀಸಿ ಕರೆಯುತ್ತಿದೆ ಹೌಸ್ ಆಫ್ ನಕ್ಷಾ

Nakhsha HOMES

ಮೈಬಿಲ್ಡ್–23 ವಸ್ತುಪ್ರದರ್ಶನದಲ್ಲಿ ಹೌಸ್ ಆಫ್ ನಕ್ಷಾ ಜನರನ್ನು ಕೈ ಬೀಸಿ ಕರೆಯುತ್ತಿದೆ. ವಸತಿ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿರುವ ನಕ್ಷಾ ಬಿಲ್ಡರ್ಸ್ ವಿಶೇಷ ಮಳಿಗೆಯು ಮನೆಯ ವಿನ್ಯಾಸ, ವಾಸ್ತುಶಿಲ್ಪ, ಅತ್ಯಾಧುನಿಕ ಸೌಲಭ್ಯ ಸೇರಿದಂತೆ ಮನೆಗೆ ಸಂಬಂಧಿಸಿದಂತೆ ಹಲವು ಮಾಹಿತಿ ನೀಡಲಿದೆ.

ಆರಾಮದಾಯಕ ಹಾಗೂ ವಿನೂತನ ಶೈಲಿಯ ವಾಸದ ಕೋಣೆ, ಕಲಾತ್ಮಕತೆಯ ಒಳಾಂಗಣ, ವಿನೂತನ ಶೈಲಿಯ ಅಡುಗೆ ಮನೆ, ವಾಸ್ತುಶಿಲ್ಪಕ್ಕೆ ತಕ್ಕಂತೆ ಮನೆಯ ನಿರ್ಮಾಣಕ್ಕೆ ನಕ್ಷಾ ಬಿಲ್ಡರ್ಸ್ ರೂಪ ನೀಡಲಿದೆ ಎಂದು ನಕ್ಷಾ ಬಿಲ್ಡರ್ಸ್ ವ್ಯವಸ್ಥಾಪಕ ನಿರ್ದೇಶಕ ಪಿ.ವಿನಯ್ ಶಂಕರ್ ತಿಳಿಸಿದ್ದಾರೆ.

ಹೌಸ್ ಆಫ್ ನಕ್ಷಾ ಕೇವಲ ಜಾಗಗಳ ಬಗ್ಗೆ ಅಲ್ಲ, ಇದು ನೆನಪುಗಳನ್ನು ರೂಪಿಸುವ ತಾಣ. ಊಟದ ಹಾಲ್‌ನಲ್ಲಿ ವಿಹರಿಸಿ ಹೊಸ ಆನಂದ ಅನುಭವಿಸಬಹುದು. ಕಲಾಕೃತಿಯ ಪೀಠೋಪಕರಣಗಳಿಂದ ಸ್ಫೂರ್ತಿ ಪಡೆಯಬಹುದು ಎಂದು ವಿನಯ್ ಶಂಕರ್ ಹೇಳಿದ್ದಾರೆ. ಗುಣಮಟ್ಟ, ಸ್ಪಷ್ಟತೆ, ಕೈಗೆಟಕುವ ಬೆಲೆ ಹಾಗೂ ನವೀನತೆಗಳ ಬದ್ಧತೆಗೆ ಹೆಸರುವಾಸಿಯಾಗಿರುವ ನಕ್ಷಾ ಬಿಲ್ಡರ್ಸ್, ನಿಮ್ಮ ಕನಸಿನ ಮನೆಯನ್ನು ನಿರ್ಮಾಣ ಮಾಡಲಿದೆ ಎಂದು ಹೇಳಿದ್ದಾರೆ. ಹೌಸ್ ಆಫ್ ನಕ್ಷಾದಲ್ಲಿ ಮನೆಯ ವಾಸ್ತುಶಿಲ್ಪದ ತೇಜಸ್ಸು ಹಾಗೂ ಸೊಬಗನ್ನು ಆನಂದಿಸಬಹುದು. ಈ ಬಗ್ಗೆ ಮಾಹಿತಿ ಪಡೆಯಲು, ಅನುಭವ ಹೊಂದಲು ಮೈಬಿಲ್ಡ್‌ನಲ್ಲಿರುವ ಹೌಸ್ ಆಫ್ ನಕ್ಷಾಗೆ ಭೇಟಿ ನೀಡಿ ಎಂದು ಸಲಹೆ ನೀಡಿದ್ದಾರೆ.



ಡಾ.ಬಿ.ಆರ್.ಅಂಬೇಡ್ಕರ್‌ರವರ 67ನೇ ಮಹಾಪರಿನಿರ್ವಾಣ ಪ್ರಯುಕ್ತ ಪುರಭವನದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ ಮಾಲಾರ್ಪಣೆ ಮಾಡಿದರು. ಈ ವೇಳೆ ಜಿಲ್ಲಾ ಗ್ರಾಮಾಂತರ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಡಿ.ಮಹೇಶನಾಯಕ, ಮೂಗೂರು ನಂಜುಂಡಸ್ವಾಮಿ, ಮೆಲ್ಲಹಳ್ಳಿ ಮಹದೇವಸ್ವಾಮಿ, ಹನುಮಂತೇಗೌಡ, ಜೆಕೆ ಟೈರ್ ರಘು, ಶ್ರೀನಿವಾಸ, ಶ್ರೀಮತಿ ಶುಭ, ಶ್ರೀಮತಿ ಪುಷ್ಪಾವತಿ, ಭಾಗ್ಯ, ಸಿದ್ದಮ್ಮ ಇತರರು ಉಪಸ್ಥಿತರಿದ್ದರು.



ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ವತಿಯಿಂದ ಅಂಬೇಡ್ಕರ್ ಅವರ ಪರಿನಿರ್ವಾಣ ದಿನದಂದು ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಸಿಡಿಸಿ ನಿರ್ದೇಶಕ ಪ್ರೊ.ಆನಂದ್, ಪತ್ರಿಕೋದ್ಯಮ ವಿಭಾಗದ ನಿರ್ದೇಶಕರಾದ ಪ್ರೊ.ಸಪ್ನ, ಡಾ.ಚಂದ್ರಶೇಖರ್, ಪ್ರೊ.ಜಗದೀಶ್, ಉಮೇಶ್, ಪುಟ್ಟಸಿದ್ದೇಗೌಡ ಇದ್ದರು.



ದಲಿತ ಸಂಘರ್ಷ ಸಮಿತಿ, ಮೈಸೂರು ಜಿಲ್ಲಾ ಸಮಿತಿಯಿಂದ ಡಾ.ಅಂಬೇಡ್ಕರ್ ಅವರ ಪರಿನಿಬ್ಬಾಣದ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಮನ ಸಲ್ಲಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ವಿನೋದ್ ಎಂ.ಚಾಕೂ, ನಗರ ಸಂಚಾಲಕ ಬಿ.ರಾಜಶೇಖರ್, ನಗರ ಸಂಘಟನಾ ಸಂಚಾಲಕ ಹೆಚ್.ಡಿ.ಗುರಪ್ಪ, ಸಲಹಾ ಸಮಿತಿ ಸದಸ್ಯ ಎಂ.ಕುಚೇಲ, ಮಾಧ್ಯಮ ಸಮಿತಿ ಸದಸ್ಯ ರವಿ, ಸಿದ್ದರಾಜು, ಶ್ರೀನಿವಾಸ, ಶಿವರುದ್ರಪ್ಪ, ಪುರುಷೋತ್ತಮ್, ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ 67ನೇ ಮಹಾಪರಿನಿರ್ವಾಣದ ಪ್ರಯುಕ್ತ ರಾಷ್ಟ್ರ ಭಾರತಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ ಮಕ್ಕಳಿಗೆ ರಕ್ತ ಗುಂಪಿನ ಪರೀಕ್ಷೆಯನ್ನು ಜೀವಧಾರ ರಕ್ತನಿಧಿ ಕೇಂದ್ರದ ಸಹಯೋಗದೊಂದಿಗೆ ನಡೆಸಲಾಯಿತು. ದೇಶಭಕ್ತಿ ಗೀತೆ, ಭಾವಗೀತೆ ಏರ್ಪಡಿಸಲಾಗಿತ್ತು. 12 ಮಕ್ಕಳು ಭಾಗವಹಿಸಿದ್ದರು. ಅದರಲ್ಲಿ 8 ಮಕ್ಕಳಿಗೆ ಪ್ರಶಸ್ತಿ ನೀಡಲಾಯಿತು. ಉಳಿದ ಎಲ್ಲಾ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಣೆ ಮಾಡಲಾಯಿತು.



ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನವನ್ನು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಆಚರಿಸಲಾಯಿತು. ಈ ವೇಳೆ ವಿ.ಪಿ. ಸುಶೀಲ, ಎಂ. ಪುಟ್ಟರಾಜು, ಜವರಪ್ಪ, ಗೋವಿಂದರಾಜು, ಕಮಲಾ ನಟರಾಜ್, ಭಾಗ್ಯಮ್ಮ, ಮೊಹಮ್ಮದ್ ಹರ್ಷಫ್, ಷರೀಫ್ ಅಹಮದ್, ಮಲ್ಲೇಶ್, ಗೋವಿಂದಯ್ಯ, ರಜನೀಕಾಂತ್ ಇತರರು ಉಪಸ್ಥಿತರಿದ್ದರು.

ಅರ್ಜಿ ಸಲ್ಲಿಕೆ ದಿನಾಂಕ ವಿಸ್ತರಣೆ

ಮೈಸೂರು,ಡಿ.7–2023–24ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಹೊಸದಾಗಿ ಪ್ರವೇಶ ಪಡೆಯಲು sw.kar.nic.in ಮೂಲಕ ಅರ್ಜಿ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದ್ದು, ಅರ್ಜಿ ಸಲ್ಲಿಸುವ ದಿನಾಂಕವನ್ನು ಡಿ.15ರವರೆಗೆ ವಿಸ್ತರಿಸಲಾಗಿದೆ. ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಿದ ನಂತರ ಅರ್ಜಿಗಳೊಂದಿಗೆ ಅಗತ್ಯ ದಾಖಲೆಗಳನ್ನು ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ಇವರಿಗೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗಾಗಿ ಪಡುವಾರಹಳ್ಳಿ, ಆದಿಪಂಪ ರಸ್ತೆಯಲ್ಲಿರುವ ಡಾ. ಬಾಬು ಜಗಜೀವನ್ ರಾಮ್ ಭವನ ಕಟ್ಟಡದ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಗ್ರೇಡ್–1 ಅವರ ಕಚೇರಿ ಅಥವಾ ದೂ.ಸಂ. 0821–2520910 ಸಂಪರ್ಕಿಸಬಹುದು.

ಡಿ.12, ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು,ಡಿ.7–ಮೈಸೂರಿನ ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘವು ಜೆಎಸ್‌ಎಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಜೆಎಸ್‌ಎಸ್ ಡೆಂಟಲ್ ಆಸ್ಪತ್ರೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಡಿಸೆಂಬರ್ 12ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಂಡಿ ಮೊಹಲ್ಲಾದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.9448753597, 9916155453 ಸಂಪರ್ಕಿಸಬಹುದು.



ಕಾಡಾನೆ ಜೊತೆ ಕಾದಾಡಿ ವೀರ ಮರಣ ಹೊಂದಿದ ಮಾಜಿ ಅಂಬಾರಿ ಆನೆ ಅರ್ಜುನನ ಸಮಾಧಿ ಸ್ಥಳದಲ್ಲಿ ಮೈಸೂರು ರಾಜವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ದಂಪತಿ ಗುರುವಾರ ಅಂತಿಮ ನಮನ ಸಲ್ಲಿಸಿದರು.

ರಾಜ್ಯದಲ್ಲಿ ನೆಲೆಸಿರುವ ಬಾಂಗ್ಲಾದೇಶಿಗರ ಪತ್ತೆ ಮಾಡಿ ಬಿಎಸ್‌ಎಫ್ ವಶಕ್ಕೆ ಒಪ್ಪಿಸುತ್ತೇವೆ

● ಗೃಹ ಸಚಿವ ಡಾ.ಪರಮೇಶ್ವರ್ ಭರವಸೆ ● ಅಕ್ರಮ ನಿವಾಸಿಗಳ ಪತ್ತೆಗೆ ವಿಶೇಷ ಕಾರ್ಯಾಚರಣೆ ಆರಂಭ



ಬೆಂಗಳೂರು, ಡಿ.7(ಕೆಎಂಶಿ)– ರಾಜ್ಯದಲ್ಲಿ ನೆಲೆಸಿರುವ ಬಾಂಗ್ಲಾದೇಶದ ಅಕ್ರಮ ನಿವಾಸಿಗಳನ್ನು ಪತ್ತೆ ಹಚ್ಚಿ, ಬಿಎಸ್‌ಎಫ್‌ಗೆ ಹಸ್ತಾಂತರಿಸುವುದಾಗಿ ಗೃಹ ಸಚಿವ ಡಾ. ಜಿ.ಪರಮೇಶ್ವರ್ ವಿಧಾನಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಉಮಾಶ್ರೀ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಈಗಾಗಲೇ ಈ ಅಕ್ರಮ ನಿವಾಸಿಗಳನ್ನು ಗುರುತಿಸುವ ಕಾರ್ಯ ನಡೆದಿದೆ. ನಂತರ ಅವರನ್ನು ಗಡಿಯವರೆಗೂ ಕೊಂಡೊಯ್ದು ಬಿಎಸ್‌ಎಫ್ ಅಧಿಕಾರಿಗಳಿಗೆ ಹಸ್ತಾಂತರಿಸಿ, ಗಡಿಪಾರು ಮಾಡಲಾಗುವುದು ಎಂದರು.

ನಮ್ಮ ಪೊಲೀಸರು ರಾಜ್ಯಾದ್ಯಂತ 45 ದಿನಗಳ ಕಾಲ ವಿಶೇಷ ಕಾರ್ಯಾಚರಣೆ ನಡೆಸಿ 5000ಕ್ಕೂ ಅಧಿಕ ಮನೆಗಳ ತಪಾಸಣೆ ಮಾಡಿದ್ದಾರೆ. ಅಲ್ಲದೆ, ವಲಸಿಗರು ನೆಲೆಸಿದ್ದಾರೆ ಎಂಬ 28 ಕೇಂದ್ರಗಳನ್ನು ಗುರುತಿಸಲಾಗಿದೆ. ಅವುಗಳ ತಪಾಸಣೆಯೂ ಮುಂದುವರೆದಿದೆ.

ರಾಜ್ಯದಲ್ಲಿರುವ ಈ ವಲಸಿಗರನ್ನು ಪತ್ತೆ ಹಚ್ಚಿ ಗಡಿಪಾರು ಮಾಡುವವರೆಗೂ ನಮ್ಮ ಪೊಲೀಸರ ತಂಡದ ವಿಶೇಷ ಕಾರ್ಯಾಚರಣೆ ಮುಂದುವರೆಯಲಿದೆ.

ಬಾಂಗ್ಲಾ ಅಷ್ಟೇ ಅಲ್ಲ, ಇತರೆ ವಿದೇಶಿ ವಲಸಿಗರನ್ನು ಪತ್ತೆ ಹಚ್ಚುವ ಕೆಲಸ ಗುಪ್ತಚರ ಇಲಾಖೆ ಮಾಡುತ್ತಿದೆ. ನಂತರ ಪೊಲೀಸರು ಅವರನ್ನು ವಶಕ್ಕೆ ಪಡೆದು ಮುಂದಿನ ಕ್ರಮಕೈಗೊಳ್ಳಲಿದ್ದಾರೆ. ಇದುವರೆಗೂ ಅಕ್ರಮ ಬಾಂಗ್ಲಾ ಮತ್ತು ವಿದೇಶಿ ವಲಸಿಗರ ಮೇಲೆ 764 ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ ಬಾಂಗ್ಲಾ ವಲಸಿಗರ ವಿರುದ್ಧ 53 ಪ್ರಕರಣ ದಾಖಲಾಗಿದೆ. ಇದುವರೆಗೂ 135 ಅಕ್ರಮ ವಲಸಿಗರನ್ನು ಪತ್ತೆ ಹಚ್ಚಿ ಅವರನ್ನು ಹೊರಹಾಕುವ ಕೆಲಸ ನಡೆದಿದೆ. ಜೀವನೋಪಾಯಕ್ಕೆ ವಲಸೆ ಬಂದಿರುವ ಇವರು, ಈಗ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಹದಗೆಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಇವರುಗಳು ನಕಲಿ ಆಧಾರ್ ಕಾರ್ಡ್ ಸೇರಿದಂತೆ ಇನ್ನಿತರೆ ದಾಖಲೆಗಳನ್ನು ಸೃಷ್ಟಿಸಿಕೊಂಡು ಕರ್ನಾಟಕದ ವಿವಿಧ ಭಾಗಗಳಲ್ಲಿ ವಾಸ ಮಾಡುತ್ತಿದ್ದಾರೆ. ಮಧ್ಯವರ್ತಿಗಳ ಮೂಲಕ ರಾಜ್ಯ ಪ್ರವೇಶಿಸಿ ಕೆಲವರು ವಿವಿಧ ಉದ್ದಿಮೆಗಳಲ್ಲಿ ಕಾರ್ಮಿಕರಾಗಿದ್ದರೆ, ಮತ್ತೆ ಕೆಲವರು ಅಕ್ರಮ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಇವರನ್ನು ಇಲ್ಲಿಗೆ ತಂದುಬಿಟ್ಟವರನ್ನು ಪತ್ತೆ ಹಚ್ಚಿ ಅವರ ಮೇಲೂ ಕ್ರಮ ಕೈಗೊಳ್ಳಲು ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದ್ದಾರೆ ಎಂದರು.

ಡಿ.13, ಸಿರಿಧಾನ್ಯ ಪಾಕ ಸ್ಪರ್ಧೆ

ಮೈಸೂರು,ಡಿ.7–ಅಂತರರಾಷ್ಟ್ರೀಯ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಮೇಳ 2024ರ ಅಂಗವಾಗಿ ಮೈಸೂರು ಜಿಲ್ಲೆಯಲ್ಲಿ ಸಿರಿಧಾನ್ಯ ಪಾಕ ಸ್ಪರ್ಧೆಯನ್ನು ಕೃಷಿ ಇಲಾಖೆಯಿಂದ ಡಿ.13ರಂದು ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಕೃಷಿ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳನ್ನು ಹೊರತುಪಡಿಸಿ ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಭಾಗವಹಿಸಲು ಅವಕಾಶವಿರುತ್ತದೆ. ಅಭ್ಯರ್ಥಿಗಳು ತಮ್ಮ ಭಾವಚಿತ್ರದೊಂದಿಗೆ ಹೆಸರು, ವಿಳಾಸ ಮತ್ತು ತಯಾರಿಸುವ ಖಾದ್ಯ ಬೇಕಾಗುವ ಸಾಮಗ್ರಿಗಳು, ತಯಾರಿಸಲು ಬೇಕಾಗುವ ಸಮಯ ಹಾಗೂ ತಯಾರಿಸುವ ವಿಧಾನದ ಸಂಕ್ಷಿಪ್ತ ಮಾಹಿತಿಯೊಂದಿಗೆ ಅರ್ಜಿಯನ್ನು ಡಿ.11ರ ಮಧ್ಯಾಹ್ನ 12ರೊಳಗೆ ಇ–ಮೇಲ್ ವಿಳಾಸ jdamysuru@gmail.com ಅಥವಾ ಖುದ್ದಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಸಾರ್ವಜನಿಕ ಕಚೇರಿಗಳ ಕಟ್ಟಡ, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು ಈ ವಿಳಾಸಕ್ಕೆ ಸಲ್ಲಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರು (ಉ & ಮೌ), ಜಂಟಿ ಕೃಷಿ ನಿರ್ದೇಶಕರ ಕಚೇರಿ, ಮೈಸೂರು ಇವರ ದೂ.ಸಂಖ್ಯೆ 82779 33105 ಅನ್ನು ಸಂಪರ್ಕಿಸಬಹುದು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.7–ಡಿಸೆಂಬರ್ 8ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ ಮಂಡಕಳ್ಳಿ, ಗೆಜ್ಜಗಳ್ಳಿ, ಹೊಸಹುಂಡಿ, ಏಳಿಗೆಹುಂಡಿ, ಎಸ್.ಉತ್ತನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಶ್ರೀನಗರ, ಮಹಾಲಕ್ಷ್ಮಿ ಲೇಔಟ್, ರೇಷ್ಮೆ ಲೇಔಟ್, ಟೀಚರ್ಸ್ ಲೇಔಟ್, ಆರ್.ಕೆ. ಲೇಔಟ್, ಕೊಪ್ಪಲೂರು, ಭವಾನಿ ಲೇಔಟ್, ವಿನಾಯಕ ಎನ್‌ಕ್ಲೇವ್, ಮಹಾಲಕ್ಷ್ಮಿ ದೃಷ್ಟಿ ಎನ್‌ಕ್ಲೇವ್ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದೆ. ಆದುದರಿಂದ ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಭ್ರೂಣಲಿಂಗ ಪತ್ತೆ ತಡೆಗೆ ಕಾನೂನಿನ ಜೊತೆಗೆ ವೃತ್ತಿಬದ್ಧತೆ, ಸ್ವಯಂ ಜಾಗ್ರತೆ ಅವಶ್ಯ

● ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಶೈಮಾ ಖಮ್ರೋಜ್ ಸಲಹೆ ● ತಾಯಿ, ಮಗುವಿನ ಆರೋಗ್ಯ ಸುರಕ್ಷತೆ ದೃಷ್ಟಿಯಿಂದ ಬಳಸುವ ಸ್ಕ್ಯಾನಿಂಗ್ ಘೋರ ಕೃತ್ಯಕ್ಕೆ ಬಳಸುವುದು ಮಹಾ ಅಪರಾಧ

ಮೈಸೂರು, ಡಿ.7(ಎಸ್‌ಬಿಡಿ)– ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ಕಾನೂನು ಬಾಹಿರ ಹಾಗೂ ಶಿಕ್ಷಾರ್ಹ ಅಪರಾಧ. ಇದನ್ನು ತಡೆಯಲು ಕಾನೂನಿನ ಜೊತೆಗೆ ವೃತ್ತಿ ಬದ್ಧತೆ ಹಾಗೂ ಸ್ವಯಂ ಜಾಗ್ರತೆ ಬಹಳ ಮುಖ್ಯ ಎಂದು ಪೋಕ್ಸೋ ಕಾಯ್ದೆ ಪ್ರಕರಣಗಳ ವಿಚಾರಣೆಗಾಗಿ ಇರುವ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ–1)ದ ನ್ಯಾಯಾಧೀಶರು ಹಾಗೂ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶೈಮಾ ಖಮ್ರೋಜ್ ತಿಳಿಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಜಿಪಂ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ತಂತ್ರವಿಧಾನಗಳ ಕುರಿತ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಾಥಮಿಕ ಶಾಲೆ ಶಿಕ್ಷಕರಂತೆ ಹಲವು ಉದಾಹರಣೆಗಳ ಮೂಲಕ ಭ್ರೂಣಲಿಂಗ ಪತ್ತೆ ಎಷ್ಟೊಂದು ಘೋರ ಕೃತ್ಯ, ಅದರಿಂದ ಸಮಾಜದ ಮೇಲಾಗುವ ದುಷ್ಪರಿಣಾಮದ ಬಗ್ಗೆ ಮನದಟ್ಟು ಮಾಡಿದರು.



ಮೈಸೂರು ಜಿಪಂ ಸಭಾಂಗಣದಲ್ಲಿ ಗುರುವಾರ ಕಾರ್ಯಾಗಾರಕ್ಕೆ ಚಾಲನೆ ನೀಡಿದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶೈಮಾ ಖಮ್ರೋಜ್, ಭ್ರೂಣಲಿಂಗ ಪತ್ತೆ ಅಪರಾಧ ಸಂಬಂಧಿತ ಮಹಿತಿಯನ್ನೊಳಗೊಂಡ ಪೋಸ್ಟರ್ ಬಿಡುಗಡೆ ಮಾಡಿದರು.

ಕಾಲ ಉರುಳಿದಂತೆ ಸಾಕಷ್ಟು ಬದಲಾವಣೆಯಾಗಿದೆ. 80–90ರ ದಶಕದಲ್ಲಿ ಮನೆಯಲ್ಲಿ 10–12 ಮಕ್ಕಳಿರುತ್ತಿದ್ದರು. ಗಂಡು ಮಗು ಪಡೆಯಬೇಕೆಂಬುದೂ ಒಂದು ಕಾರಣವಾಗಿತ್ತು. ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದರು. ಗಂಡು ಮಕ್ಕಳಿಗೆ ಪ್ರಾಧಾನ್ಯತೆ ಇತ್ತು. ಈಗಲೂ ಕೆಲವೆಡೆ ಇಂತಹ ಪರಿಸ್ಥಿತಿ ಇರಬಹುದು. ಆದರೆ ಶಿಕ್ಷಣ, ಪ್ರಬುದ್ಧತೆ ಬೆಳೆದಂತೆಲ್ಲಾ ಸಾಕಷ್ಟು ಬದಲಾವಣೆಯಾಗಿದೆ ಎಂದು ಹೇಳಿದರು.

ಒಂದು ಆವಿಷ್ಕಾರದ ಹಿಂದೆ ಸದುದ್ದೇಶವಿರುತ್ತದೆ. ಆದರೆ ಅವುಗಳ ದುರ್ಬಳಕೆಯಿಂದ ಸಾಕಷ್ಟು ದುಷ್ಪರಿಣಾಮಗಳೂ ಉಂಟಾಗುತ್ತವೆ. ಟಿವಿ, ಮೊಬೈಲ್ ದುರ್ಬಳಕೆಯಿಂದ ಸಂಬಂಧಗಳು, ಸಮಾಜದ ಸ್ವಾಸ್ಥ್ಯ ಹಾಳಾಗಿದೆ. ಹಾಗೆಯೇ ಸ್ಕ್ಯಾನಿಂಗ್ ಯಂತ್ರವನ್ನೂ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಪ್ರಸವಪೂರ್ವದಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯ ಪರಿಶೀಲನೆಗಿರುವ ಪರೀಕ್ಷೆಯನ್ನು ಭ್ರೂಣ ಲಿಂಗ ಪತ್ತೆಗೆ ಬಳಸಿರುವುದು ವಿಷಾದನೀಯ ಎಂದರು.

'ವೈದ್ಯೋ ನಾರಾಯಣೋ ಹರಿಃ' ಎಂದರೆ ವೈದ್ಯರನ್ನು ದೇವರಿಗೆ ಸಮ ಎನ್ನುತ್ತಾರೆ. ವೈದ್ಯಕೀಯ ವೃತ್ತಿ ಅತ್ಯಂತ ಶ್ರೇಷ್ಠವಾದದ್ದು. ನಾವು, ನೀವೆಲ್ಲಾ ಜನರ ಸೇವಕರು. ನಮ್ಮಿಂದ ಸಮಾಜ ಒಳ್ಳೆಯದನ್ನು ಬಯಸುತ್ತದೆ. ಹೆಣ್ಣೆಂದ ಮಾತ್ರಕ್ಕೆ ಕಣ್ಣು ಬಿಡುವ ಮುನ್ನವೇ ಕತ್ತು ಹಿಸುಕುವುದು ಮಹಾಪರಾಧ ನಿಮ್ಮಿಂದ ಭ್ರೂಣ ಲಿಂಗ ತಿಳಿದ ಕಾರಣದಿಂದ ಆ ಜೀವದ ಹತ್ಯೆಯಾದರೆ ಅದು ನಿಮ್ಮನ್ನು ಕಾಡುವುದಿಲ್ಲವೇ?. ಜೀವ ಕಳೆಯುವ ಕೆಲಸವನ್ನು ಯಾರೂ ಮಾಡಬಾರದು ಎಂದರು.

ಕಾನೂನಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಭ್ರೂಣಲಿಂಗ ಪತ್ತೆ ಜಾಮೀನು ರಹಿತ ಅಪರಾಧ ಪ್ರಕರಣ. ಅಲ್ಲದೆ ಯಾವುದೇ ರಾಜೀ ಸಂಧಾನಕ್ಕೂ ಅವಕಾಶವಿರುವುದಿಲ್ಲ. ಜೀವ ಉಳಿಸುವ ವೈದ್ಯರು ನ್ಯಾಯಾಲಯದಲ್ಲಿ ಆರೋಪಿಯಾಗಿ ನಿಂತರೆ ನಿಮ್ಮ ವೃತ್ತಿಯ ಘನತೆ ಏನಾಗುಬಹುದು ಯೋಚಿಸಿ. ನಿಮ್ಮ ಕುಟುಂಬ ಹಾಗೂ ಸಮಾಜ ನಿಮ್ಮನ್ನು ಕಾಣುವ ರೀತಿ ಹೇಗಿರುತ್ತದೆ ಎಂದು ಚಿಂತಿಸಿ. ವೃತ್ತಿಜೀವನದಲ್ಲಿ ಕಪ್ಪುಚುಕ್ಕೆಯಾದರೆ ಸಹಜವಾಗಿರಲು ಸಾಧ್ಯವೇ? ಎಂದು ಪ್ರಶ್ನಿಸಿಕೊಳ್ಳಿ. ಎಲ್ಲರೂ ಸ್ವಯಂ ಜಾಗೃತರಾದರೆ ಇಂತಹ ಕೃತ್ಯಗಳು ನಡೆಯುವುದೇ ಇಲ್ಲ ಎಂದು ಎಚ್ಚರಿಸಿದರು.

ಆಸ್ಪತ್ರೆ ಹಾಗೂ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಎಲ್ಲವೂ ಕಾನೂನುಬದ್ಧವಾಗಿರಬೇಕು. ಎಲ್ಲಾ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಬೇಕು. ಕಾನೂನಾತ್ಮಕವಾಗಿ ನೋಂದಾಯಿಸಿದ ಸ್ಕ್ಯಾನಿಂಗ್ ಉಪಕರಣಗಳನ್ನು ಬಳಸಿ. ಪ್ರತಿಯೊಂದಕ್ಕೂ ದಾಖಲೆಗಳನ್ನು ನಿರ್ವಹಣೆ ಮಾಡಬೇಕು. ಎಲ್ಲಾ ಪ್ರಕ್ರಿಯೆಗಳೂ ನಿಯಮಬದ್ಧವಾಗಿದ್ದರೆ ಪ್ರಶ್ನಿಸುವ ಪ್ರಮೇಯ ಎದುರಾಗುವುದಿಲ್ಲ. ಸಮಾಜ ನಮ್ಮ ಮೇಲಿಟ್ಟಿರುವ ನಂಬಿಕೆಯನ್ನು ಉಳಿಸಿಕೊಂಡು ಮುಂದುವರೆಯಬೇಕು. ಇತ್ತೀಚೆಗೆ ನಡೆದ ಘಟನೆಗಳು(ಭ್ರೂಣಹತ್ಯೆ) ಮರುಕಳಿಸದಂತೆ ತಡೆಯುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಕಾರ್ಯಕ್ರಮ ಅನುಷ್ಠಾಧಿಕಾರಿಯೂ ಆದ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ಗೋಪಿನಾಥ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಟಿ.ಅಮರನಾಥ್ ವೇದಿಕೆಯಲ್ಲಿದ್ದರು. ತಾಲೂಕು ಆರೋಗ್ಯಾಧಿಕಾರಿಗಳು ಸೇರಿದಂತೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳ ವಿವಿಧ ಹಂತದ ವೈದ್ಯಾಧಿಕಾರಿಗಳು, ಸ್ಕ್ಯಾನಿಂಗ್ ಸೆಂಟರ್‌ಗಳ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಸೂಚ್ಯವಾಗಿಯೂ ಭ್ರೂಣಲಿಂಗ ತಿಳಿಸಲು ಹೋಗಬಾರದು...!

ಗರ್ಭಿಣಿ ಸ್ತ್ರೀಯರು ವೈದ್ಯರ ಮೇಲಿನ ವಿಶ್ವಾಸದಿಂದ ಕೌಟುಂಬಿಕ ವಿಚಾರಗಳನ್ನು ಹೇಳಿಕೊಳ್ಳುವುದಿದೆ. ಎರಡು ಹೆಣ್ಣು ಮಕ್ಕಳಿವೆ, ಈ ಬಾರಿಯೂ ಹೆಣ್ಣಾದರೆ ನಮ್ಮ ಕುಟುಂಬವನ್ನು ಎದುರಿಸಲಾರೆ ಎಂದೆಲ್ಲಾ ತಮ್ಮ ಮನಸ್ಸಿನ ದುಗುಡ ತೋಡಿಕೊಂಡಿರುತ್ತಾರೆ. ಇಂತಹ ಸಂದರ್ಭದಲ್ಲಿ ವೈದ್ಯರು ತುಂಬಾ ಜಾಗೃತವಾಗಿರಬೇಕು. ಮುಂದಿನ ಬಾರಿ ಬರುವಾಗ ಜಿಲೇಬಿ ಅಥವಾ ಪೇಡ ತೆಗೆದುಕೊಂಡು ಬಾ, ಸದ್ಯದಲ್ಲೇ ವರಲಕ್ಷ್ಮೀ ಪೂಜೆ ಮಾಡುತ್ತೀರಿ, ತುಂಬಾ ಓಡಾಡುತ್ತಿದ್ದಾನೆ, ಸುಮ್ಮನೆ ಮಲಗಿದ್ದಾಳೆ ಎಂದೆಲ್ಲಾ ಭ್ರೂಣದ ಲಿಂಗ ತಿಳಿಯುವಂತೆ ಮಾತನಾಡಬಾರದು. ಇದೂ ಕೂಡ ದೊಡ್ಡ ತಪ್ಪು. ಸೂಚ್ಯ ಪದಗಳಿಂದ ಗರ್ಭದಲ್ಲಿರುವುದು ಹೆಣ್ಣು ಎಂದು ತಿಳಿದು ಮನೆಯಲ್ಲೇ ಯಾವುದೋ ವಸ್ತು ಸೇವನೆ ಮಾಡಿ, ಗರ್ಭಪಾತಕ್ಕೆ ಪ್ರಯತ್ನಿಸಬಹುದು ಎಂದು ನ್ಯಾಯಾಧೀಶರಾದ ಶೈಮಾ ಖಮ್ರೋಜ್ ಅವರು ಎಚ್ಚರಿಕೆ ನೀಡಿದರು.

ಮೈಸೂರು ಮಿತ್ರ ಶುಕ್ರವಾರ 8 ಡಿಸೆಂಬರ್ 2023

ಮಂಡ್ಯ ನಗರ ನೀರು ಸರಬರಾಜು ದರ ಪರಿಷ್ಕರಣೆ

ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಸಭೆಯಲ್ಲಿ 282 ರಿಂದ 225 ರೂ.ಗೆ ಕಡಿತ



ಮಂಡ್ಯ, ಡಿ.7– ನಗರದ ಕುಡಿಯುವ ನೀರಿನ ಪೂರೈಕೆ ದರದ ಗೊಂದಲ ಬಗೆಹರಿದಿದ್ದು, ಮಾಸಿಕ 225 ರೂ. ನಿಗದಿಪಡಿಸಲಾಗಿದೆ.

ಬೆಳಗಾವಿಯ ಸುವರ್ಣಸೌಧದ ಸಮಿತಿ ಕೊಠಡಿಯಲ್ಲಿ ಮಂಡ್ಯ ನಗರದ ನೀರು ಸರಬರಾಜಿನ ದರ ಹಾಗೂ ಜಿಲ್ಲೆಯ ಇತರ ನಗರ ಸ್ಥಳೀಯ ಸಂಸ್ಥೆಗಳ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ವಿಶೇಷ ಸಭೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನೀರಿನ ದರ ಅಂತಿಮಗೊಳಿಸಿದರು.

ಪೌರಾಡಳಿತ ಸಚಿವ ರಹೀಂಖಾನ್ ಹಾಗೂ ಮಂಡ್ಯ ಜಿಲ್ಲೆಯ ಶಾಸಕರ ಉಪಸ್ಥಿತಿಯಲ್ಲಿ ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿಕಾರಿಗಳ ಸಭೆ ನಡೆಸಿದ ಚಲುವರಾಯಸ್ವಾಮಿ, ಮಂಡ್ಯ ನಗರ ಹಾಗೂ ಇತರ ತಾಲೂಕುಗಳ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವಂತೆ ಸೂಚಿಸಿದರು.

ಮಂಡ್ಯದಲ್ಲಿ ಕಳೆದ ಹಲವು ವರ್ಷಗಳಿಂದ ಕುಡಿಯುವ ನೀರಿನ ಪೂರೈಕೆ ದರ ನಿಗದಿ ಸಮಸ್ಯೆ ಇದೆ. ಈ ಹಿಂದೆ ಜಿಲ್ಲಾಧಿಕಾರಿಗಳ ಸಮಿತಿಯಲ್ಲಿ 2018ರಿಂದ ಅನ್ವಯವಾಗುವಂತೆ 282 ರೂ. ದರ ನಿಗದಿಪಡಿಸಲಾಗಿದೆ. ಆದರೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದರ ಕಡಿಮೆ ಮಾಡಲು ಸೂಚಿಸಿದ್ದು, ಅದರಂತೆ 225 ರೂ. ನಿಗದಿಪಡಿಸಲು ಸೂಚಿಸಿದರು.

ಹಿಂದಿನ ಬಾಕಿ, ಬಡ್ಡಿ ವಸೂಲಿ ಮತ್ತಿತರ ವಿಷಯಗಳನ್ನು ಉಸ್ತುವಾರಿ ಸರ್ಕಾರದ ತೀರ್ಮಾನಕ್ಕೆ ಬಿಡಲಾಗುವುದು. ಸಾರ್ವಜನಿಕರಿಂದ ಮಾಮೂಲಿ ದರದಲ್ಲಿ ಬಾಕಿ ಹಣ ಪಡೆದು ನೀರು ಪೂರೈಸುವಂತೆ ತಿಳಿಸಿದರು.

ಅನಧಿಕೃತ ಸಂಪರ್ಕ ಪಡೆದವರಿಗೆ ನೋಟಿಸ್ ನೀಡಿ ಸೂಕ್ತ ಶುಲ್ಕ ಪಡೆದು ಸಕ್ರಮಗೊಳಿಸಿ, ನೀರಿನ ಕರ ಶೇ.100 ವಸೂಲಿ ಮಾಡಿ ಜೊತೆಗೆ ಯಾವುದೇ ಲೋಪವಿಲ್ಲದಂತೆ ನೀರು ಪೂರೈಸಿ ಎಂದರು. ಇದೇ ವೇಳೆ ನಾಗಮಂಗಲದ ನೂತನ ವಾಣಿಜ್ಯ ಸಂಕೀರ್ಣದ ಹರಾಜು ಪ್ರಕ್ರಿಯೆ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಈ ಹಿಂದೆ ಇದ್ದ 29 ಮಂದಿ ವರ್ತಕರಿಗೆ ನ್ಯಾಯಾಲಯದ ಸೂಚನೆ ಮೇರೆಗೆ ಹೊಸ ದರದಂತೆ ಬಾಕಿ ಹಣ ಪಡೆದು ಮುಂದಿನ 4 ವರ್ಷ ಅವಕಾಶ ಕಲ್ಪಿಸುವುದು. ಇತರ ಮಳಿಗೆಗಳ ಹರಾಜು ನಡೆಸುವುದು. ಈ 29 ಮಳಿಗೆಗಳನ್ನು 4 ವರ್ಷಗಳ ನಂತರ ತೆರವುಗೊಳಿಸಿ ಹೊಸದಾಗಿ ಹರಾಜು ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮಂಡ್ಯ ನಗರದ ಕೆಲವು ಪ್ರದೇಶಗಳಲ್ಲಿ ಬಾಕಿ ಇರುವ ಒಳಚರಂಡಿ ವ್ಯವಸ್ಥೆ ಪೂರ್ಣಗೊಳಿಸಿ ವೈಜ್ಞಾನಿಕವಾಗಿ ತ್ಯಾಜ್ಯ ನೀರಿನ ವಿಲೇವಾರಿ ಮಾಡಲು ಹಾಗೂ ಜಿಲ್ಲೆಯ ಇತರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಸಂಪೂರ್ಣ ವೈಜ್ಞಾನಿಕವಾಗಿ ಮಾಡುವಂತೆ ಚಲುವರಾಯಸ್ವಾಮಿ ಅಧಿಕಾರಿಗಳಿಗೆ ಸೂಚಿಸಿದರು.

ಪೌರಾಡಳಿತ ಸಚಿವ ರಹೀಂಖಾನ್ ಮಾತನಾಡಿ,ಕೃಷಿ ಸಚಿವರ ಬೇಡಿಕೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ನಗರಾಭಿವೃದ್ಧಿ ಇಲಾಖೆ ಆಯುಕ್ತ ಅಜಯ್ ನಾಗಭೂಷಣ್, ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಶರತ್, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ಪ್ರಭುಲಿಂಗ ಕವಲಕಟ್ಟೆ ಮತ್ತಿತರರು ಸಭೆಯಲ್ಲಿ ಹಾಜರಿದ್ದು ಚರ್ಚೆಯಲ್ಲಿ ಪಾಲ್ಗೊಂಡು ಸಲಹೆಗಳನ್ನು ನೀಡಿದರು. ಸಭೆಯಲ್ಲಿ ಶಾಸಕರಾದ ಗಣಿಗ ರವಿಕುಮಾರ್, ರಮೇಶ್ ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ ಹಾಗೂ ದರ್ಶನ್ ಪುಟ್ಟಣ್ಣಯ್ಯ ಹಾಜರಿದ್ದು, ಸಲಹೆಗಳನ್ನು ನೀಡಿದರು.

ಪಾಂಡವಪುರ ತಾಲೂಕು ಪಂಚಾಯಿತಿ ಸಾಮಾನ್ಯ ಸಭೆ

ತಮ್ಮ ಇಲಾಖೆಗಳ ಪ್ರಗತಿ ವಿವರಿಸಿದ ಅಧಿಕಾರಿಗಳು



ಪಾಂಡವಪುರ, ಡಿ.7– ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಆಡಳಿತಾಧಿಕಾರಿ ಅಶೋಕ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ತಮ್ಮ ಇಲಾಖೆಗಳ ಪ್ರಗತಿ ಬಗ್ಗೆ ವಿವರಣೆ ನೀಡಿದರು.

ಕೃಷಿ ಅಧಿಕಾರಿ ಜಗದೀಶ್ ಮಾತನಾಡಿ, ಕೃಷಿ ಇಲಾಖೆಯಿಂದ ಹನಿ ನೀರಾವರಿ ಯೋಜನೆಯಡಿ ರೈತರಿಗೆ ಪೈಪ್‌ಗಳನ್ನು ವಿತರಿಸಲಾಗುತ್ತಿದೆ. ರೈತರಿಗೆ ಸಬ್ಸಿಡಿ ದರದಲ್ಲಿ ರಾಗಿ ಬಿತ್ತನೆ ಬೀಜ ವಿತರಿಸಲಾಗಿದೆ. ರೈತರು ಸರ್ಕಾರದ ಬರ ಪರಿಹಾರದ ಹಣ ಪಡೆಯಲು ತಮ್ಮ ದಾಖಲೆಗಳನ್ನು ಎಫ್‌ಐಡಿ ನೋಂದಾಯಿಸಿಕೊಳ್ಳಬೇಕು. ಸೆಕೆಂಡರಿ ಅಗ್ರಿಕಲ್ಚರ್ ಯೋಜನೆಯಡಿ ಕೃಷಿ ಸಂಸ್ಕರಣೆ, ಜೇನು ಸಾಕಾಣಿಕೆ ಹಾಗೂ ಅಣಬೆ ಕೃಷಿ ಮಾಡುವ ರೈತರಿಗೆ 3 ಲಕ್ಷದವರೆಗೂ ಸಹಾಯಧನ ನೀಡಲಾಗುತ್ತಿದೆ. ಈ ಯೋಜನೆಗಳನ್ನು ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಸಿಡಿಪಿಓ ಪೂರ್ಣಿಮಾ ಮಾತನಾಡಿ, ನವೆಂಬರ್ ಅಂತ್ಯದವರೆಗೆ ನೌಕರು, ಅಂಗನವಾಡಿ ಸಿಬ್ಬಂದಿಗೆ ವೇತನ ಹಾಗೂ ಗೌರವ ಧನ ನೀಡಲಾಗಿದೆ. ಜೊತೆಗೆ 'ಡಿ' ಗ್ರೂಪ್ ನೌಕರರು ನಿವೃತ್ತಿ ಹೊಂದಿದ್ದು, ನೌಕರರ ನೇಮಕಾತಿಗಾಗಿ ಸರ್ಕಾರಕ್ಕೆ ಪತ್ರ ವ್ಯವಹಾರ ನಡೆಸಲಾಗಿದೆ. ಜನಸಂಖ್ಯೆ ಆಧಾರದ ಮೇಲೆ ಪಾಂಡವಪುರ ಪಟ್ಟಣ, ಸುಂಕಾತೊಣ್ಣೂರು, ಪಟ್ಟಸೋಮನಹಳ್ಳಿಗೆ ಅಂಗನವಾಡಿ ಮಂಜೂರಾಗಿದ್ದು ಶೀಘ್ರವೇ ಆರಂಭಿಸಲಾಗುವುದು. ಇಲಾಖೆಯಿಂದ ಹೆಣ್ಣು ಮಕ್ಕಳಿಗೆ 3 ಲಕ್ಷದವರೆಗೆ ಸಾಲ ಸೌಲಭ್ಯ ನೀಡುವ ಉದ್ಯೋಗಿಣಿ ಯೋಜನೆಗೆ ಅರ್ಜಿ ಸಲ್ಲಿಸಲು ಡಿ.22 ಕೊನೆ ದಿನಾಂಕವಾಗಿದ್ದು ಆಸಕ್ತರು ಅರ್ಜಿ ಸಲ್ಲಿಸಬಹುದು ಎಂದರು.

ಆಡಳಿತಾಧಿಕಾರಿ ಅಶೋಕ್ ಮಾತನಾಡಿ, ಫೆಬ್ರವರಿ–ಮಾರ್ಚ್‌ನಲ್ಲಿ ಲೋಕಸಭೆ ಚುನಾವಣೆ ದಿನಾಂಕ ಘೋಷಣೆಯಾಗುವ ಸಾಧ್ಯತೆ ಇರುವುದರಿಂದ ಅಧಿಕಾರಿಗಳು ಜಿಪಂ, ತಾಪಂನ ಎಲ್ಲಾ ಕಾರ್ಯಕ್ರಮಗಳನ್ನು ಫೆಬ್ರವರಿ ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ಚುನಾವಣೆ ನೀತಿಸಂಹಿತೆ ಎದುರಾಗಿ ಕಾರ್ಯಕ್ರಮಗಳು ರದ್ದಾಗುವ ಸಾಧ್ಯತೆಗಳಿವೆ ಎಂದರು.

ಚೋಳು ಭೂಮಿಗಳಲ್ಲಿ ಮೀನು ಕೃಷಿ ಮಾಡಿದರೆ ಕಬ್ಬು, ಭತ್ತಕ್ಕಿಂತ ಅಧಿಕ ಇಳುವರಿ ಪಡೆಯಬಹುದಾಗಿದೆ ಹಾಗಾಗಿ ಮೀನುಗಾರಿಕೆ ಇಲಾಖೆ ಅಧಿಕಾರಿಗಳು ರೈತರಿಗೆ ಅರಿವು ಮೂಡಿಸಿ, ರೈತರು ಚೋಳು ಭೂಮಿಯಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿಕೊಂಡು ಮೀನುಗಾರಿಕೆ ಮಾಡಿ ಅಧಿಕ ಲಾಭಗಳಿಸುವಂತೆ ಸಲಹೆ ನೀಡಿ ಎಂದರು.

ಸಭೆಯಲ್ಲಿ ತಾಪಂ ಇಓ ಲೋಕೇಶ್ ಮೂರ್ತಿ, ನರೇಗಾ ಅಧಿಕಾರಿ ಸುರೇಂದ್ರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ಬರ ಹಿನ್ನೆಲೆ: ಅಂತರ ಜಿಲ್ಲೆಗಳಿಗೆ ಮೇವು ಸಾಗಾಣಿಕೆ ನಿರ್ಬಂಧ



ಮಂಡ್ಯ, ಡಿ.7– ಜಿಲ್ಲೆಯ ಬರಪೀಡಿತ ತಾಲೂಕುಗಳಲ್ಲಿ ಮುಂಬರುವ ದಿನಗಳಲ್ಲಿ ಮೇವಿನ ಸಮಸ್ಯೆ ಉದ್ಭವಿಸಬಹುದಾಗಿದ್ದು, ಜಿಲ್ಲೆಯಿಂದ ಹೊರ ಜಿಲ್ಲೆಗಳಿಗೆ / ಹೊರ ರಾಜ್ಯಗಳಿಗೆ ಮೇವು ಸಾಗಿಸುತ್ತಿರುವುದು ಕಂಡು ಬಂದಿದೆ. ಹೀಗಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲೆಯಿಂದ ಹೊರ ಜಿಲ್ಲೆ / ಹೊರ ರಾಜ್ಯಗಳಿಗೆ ಮೇವು ಸಾಗಾಣಿಕೆ ನಿರ್ಬಂಧಿಸಿ ಜಿಲ್ಲಾಧಿಕಾರಿ ಡಾ.ಕುಮಾರ ಆದೇಶ ಹೊರಡಿಸಿದ್ದಾರೆ.

2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ The Disaster Management Act–2005ರ ನಿಯಮ–24 (ಚಿ) ಹಾಗೂ MANUAL For Drought Management 2020 ರನ್ವಯ ಅಂತರ್ ಜಿಲ್ಲೆ / ರಾಜ್ಯಗಳಿಗೆ ಮೇವು ಸಾಗಾಣಿಕೆಯನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿದ ದಿನಾಂಕದಿಂದ 6 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಗೆ ಬರುವಂತೆ ನಿರ್ಬಂಧಿಸಿ ಆದೇಶಿಸಿದೆ.

ಜಿಲ್ಲೆಯಿಂದ ಮೇವು ಹೊರ ಜಿಲ್ಲೆಗಳಿಗೆ ಸಾಗಾಣಿಕೆ ಮಾಡುವುದಾಗಲಿ ಹಾಗೂ ಒಣ ಮೇವನ್ನು ಯಾವುದೇ ರೂಪದಲ್ಲಿ ಹೊರ ರಾಜ್ಯಗಳಿಗೆ ಸಂಸ್ಕರಿಸಿ ಸಾಗಾಣಿಕೆ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ. ಈ ಸಂಬಂಧ ಅವಶ್ಯಕವಿರುವ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲಾ ತಾಲೂಕಿನ ತಹಸೀಲ್ದಾರ್‌ಗೆ ಸೂಚಿಸಿದೆ.

ಮೇವು ಸಾಗಾಣಿಕೆ ನಿರ್ಬಂಧಿಸುವ ನಿಟ್ಟಿನಲ್ಲಿ ಎಲ್ಲಾ ತಾಲೂಕಿನ ದಂಡಾಧಿಕಾರಿಗಳು ಮತ್ತು ಪೊಲೀಸ್ ನಿರೀಕ್ಷಕರು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. ಹಾಗೂ ಹೊರ ಜಿಲ್ಲೆಗಳಲ್ಲಿನ ಮೇವು ಸಾಗಾಣಿಕೆ ನಿರ್ಬಂಧಿಸುವಲ್ಲಿ ಲೋಪವೆಸಗುವ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಡಿ.7– ಕೆಐಎಡಿಬಿ ಮತ್ತು ತುಂಬಕೆರೆ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ಡಿ.9 ರಂದು ಬೆಳಗ್ಗೆ 9 ರಿಂದ ಸಂಜೆ 6 ರವರೆಗೆ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಗುತ್ತಲು, ಫ್ಯಾಕ್ಟರಿ ವೃತ್ತ, ಕೈಗಾರಿಕಾ ಬಡಾವಣೆಗಳು, ಎಂ.ಸಿ.ರಸ್ತೆ, ತಾವರೆಗೆರೆ, ನೆಹರುನಗರ, ಉದಯಗಿರಿ, ಸಾದತ್ ಮೊಹಲ್ಲಾ, ಚನ್ನಯ್ಯ ಬಡಾವಣೆ, ಸಿದ್ದಾರ್ಥ ಬಡಾವಣೆ, ಬೆಂಗಳೂರು ಮುಖ್ಯ ರಸ್ತೆಯ ಹೆಬ್ಬಾಳ, ಶ್ರೀನಿವಾಸಪುರ ಗೇಟ್, ಹೊಡಾಘಟ್ಟ, ಕೀಲಾರ, ಹನಕೆರೆ, ಬೂದನೂರು, ಭೂತನಹೊಸೂರು, ಈಚಗೆರೆ, ಚನ್ನಪ್ಪನದೊಡ್ಡಿ, ಬೇಲೂರು, ಹಂಬರಹಳ್ಳಿ, ಆಲಕೆರೆ, ಕಚ್ಚಿಗೆರೆ, ಹೊನಗಾನಹಳ್ಳಿಮಠ, ತುಂಬಕೆರೆ, ಚಾಮಲಾಪುರ, ಉಮ್ಮಡಹಳ್ಳಿ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಂಜೇಗೌಡ ನಿಧನ



ಕೆ.ಆರ್.ಪೇಟೆ, ಡಿ.7– ತಾಲೂಕಿನ ಚಿಲ್ಲದಹಳ್ಳಿ ಗ್ರಾಮದ ಹಿರಿಯ ಮುಖಂಡ ಮಂಜೇಗೌಡ(58) ಗುರುವಾರ ನಿಧನರಾದರು. ಮೃತರು ಪತ್ನಿ ಯಶೋಧಮ್ಮ, ಪುತ್ರ ನಾಗೇಶ್, ಪುತ್ರಿ ಅಂಬುಜ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಬೆಳಗ್ಗೆ 10ಗಂಟೆಗೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಳ್ಳಿಗಳ ಅಭಿವೃದ್ಧಿಗೆ ನರೇಗಾ ಯೋಜನೆ ಸಹಕಾರಿ

ಅಗ್ರಹಾರಬಾಚಹಳ್ಳಿ ಗ್ರಾಮ ಸಭೆಯಲ್ಲಿ ನೋಡಲ್ ಅಧಿಕಾರಿ ಎಸ್.ದಿವಾಕರ್



ಕೆ.ಆರ್.ಪೇಟೆ, ಡಿ.7– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಪಂ ಅಧ್ಯಕ್ಷ ಎ.ಸಿ.ದಿವಿಕುಮಾರ್ ಅಧ್ಯಕ್ಷತೆಯಲ್ಲಿ ಗ್ರಾಮ ಸಭೆ ನಡೆಯಿತು.

ನೋಡಲ್ ಅಧಿಕಾರಿ ಎಸ್.ದಿವಾಕರ್ ಗ್ರಾಮ ಸಭೆ ಉದ್ಘಾಟಿಸಿ ಮಾತನಾಡಿ, ಹಳ್ಳಿಗಳ ಅಭಿವೃದ್ಧಿಗೆ ನರೇಗಾ ಯೋಜನೆ ಸಹಕಾರಿಯಾಗಿದೆ. ಗ್ರಾಪಂ ಸದಸ್ಯರು ತಾವು ಪ್ರತಿನಿಧಿಸುವ ಗ್ರಾಮಗಳಿಗೆ ಸಮುದಾಯ ಕಾಮಗಾರಿ, ವೈಯಕ್ತಿಕ ಕಾಮಗಾರಿಗಳನ್ನು ಕೈಗೊಳ್ಳಲು ಸಾರ್ವಜನಿಕರನ್ನು ಪ್ರೇರೇಪಿಸಬೇಕು. ನರೇಗಾ ಯೋಜನೆ ಹಣ ಪಡೆಯಲು ಜಾಬ್ ಕಾರ್ಡ್ ಅವಶ್ಯವಿರುವುದರಿಂದ ಪ್ರತಿಯೊಬ್ಬರೂ ಜಾಬ್ ಕಾರ್ಡ್ ಮಾಡಿಸಿಕೊಂಡು ಯೋಜನೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಗ್ರಾಪಂ ಅಧ್ಯಕ್ಷ ಎ.ಸಿ.ದಿವಿಕುಮಾರ್ ಮಾತನಾಡಿ, ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ರಸ್ತೆ, ಚರಂಡಿ ಅಭಿವೃದ್ಧಿ, ವಿದ್ಯುತ್ ದೀಪ, ಶುದ್ಧ ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯಕ್ಕೆ ಆದ್ಯತೆ ನೀಡಲಾಗಿದೆ. ನರೇಗಾ ಯೋಜನೆಯಡಿ ಜಾನುವಾರು ಕೊಟ್ಟಿಗೆ, ಕೆರೆಗಳ ಹೂಳೆತ್ತುವುದು, ಗೋಕಟ್ಟೆ ಅಭಿವೃದ್ಧಿ, ಕಲ್ಯಾಣಿ ಪುನಶ್ಚೇತನ, ಕೊಳವೆ ಬಾವಿ ರೀಚಾರ್ಜ್ ಮಾಡಿಸುವುದು. ಸರ್ಕಾರಿ ಕಟ್ಟಡಗಳಿಗೆ ಮಳೆ ಕುಯ್ಲು ಯೋಜನೆ, ಶಾಲೆಗಳು, ದೇವಾಲಯಗಳ ಆವರಣದಲ್ಲಿ ಸಸಿಗಳನ್ನು ನೆಡುವುದು. ರೈತರಿಗೆ ಕಣ, ಸ್ಮಶಾನ ಅಭಿವೃದ್ಧಿ, ಜಾನುವಾರುಗಳಿಗೆ ಕುಡಿಯುವ ನೀರಿನ ತೊಟ್ಟಿ ನಿರ್ಮಾಣ, ಕುರಿ, ಮೇಕೆ, ಹಂದಿ, ಕೋಳಿ ಶೆಡ್ ನಿರ್ಮಾಣ, ಎರೆಹುಳು ಘಟಕ, ಅಜೋಲಾ ಪಿಟ್, ಬಯೋಗ್ಯಾಸ್, ಮೀನು ಹೊಂಡ, ಸೋಕ್ ಪಿಟ್ ಸೇರಿದಂತೆ ಹತ್ತು ಹಲವು ಕಾಮಗಾರಿ ಕೈಗೊಳ್ಳಬಹುದು. ಹಾಗಾಗಿ ಅರ್ಹರು ಗ್ರಾಮ ಸಭೆಯಲ್ಲಿ ಲಿಖಿತವಾಗಿ ಅರ್ಜಿ ಸಲ್ಲಿಸಿ ಈ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು ಎಂದರು.

ಕೃಷಿ ಇಲಾಖೆ ಶ್ರೀಧರ್, ತೋಟಗಾರಿಕೆ ಅಧಿಕಾರಿ ದೇವರಾಜು, ಸಮಾಜ ಕಲ್ಯಾಣ ಇಲಾಖೆಯ ವ್ಯವಸ್ಥಾಪಕ ಗೋವಿಂದರಾಜು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಯ ಸರ್ಕಾರಿ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಗ್ರಾಪಂ ಉಪಾಧ್ಯಕ್ಷೆ ಸುನೀತಾ, ಪಿಡಿಓ ವಿನೋದ್, ಸದಸ್ಯ ಆರ್.ರಮೇಶ್, ಗ್ರಾಪಂ ಸದಸ್ಯ ಆರ್.ಶ್ರೀನಿವಾಸ್, ಸಾವಿತ್ರಮ್ಮ, ಚನ್ನೇಗೌಡ, ರೇಣುಕಾ, ನೇತ್ರಾ, ಪ್ರೇಮಾ, ಕುಮಾರಗೌಡ, ಫಯಾಜ್ ಉಲ್ಲಾಖಾನ್, ಭಾಗ್ಯಮ್ಮ, ಸಿ.ಆರ್.ಪಿ.ಕುಮಾರ್, ಶಶಿರೇಖಾ, ಜಯಂತಿ, ರವೀಂದ್ರ ಆರ್.ಶ್ರೀನಿವಾಸ್, ನಂಜೇಗೌಡ, ದಿನೇಶ್, ರೇವತಿ, ಬಿಲ್ ಕಲೆಕ್ಟರ್ ನರಸಿಂಹಯ್ಯ, ತ್ರಿವೇಣಿ, ಶ್ರೀಧರ್, ಮಾಜಿ ಗ್ರಾಪಂ ಸದಸ್ಯ ಎ.ಬಿ.ಕುಮಾರ್ ಮತ್ತಿತರರಿದ್ದರು.

ಉಚಿತ, ರಿಯಾಯಿತಿ ದರದಲ್ಲಿ ವಿದ್ಯುತ್

ಮಂಡ್ಯ, ಡಿ.7– ವಿದ್ಯುತ್ ಮಗ್ಗ ಪೂರ್ವ ಮತ್ತು ವಿದ್ಯುತ್ ಮಗ್ಗ ಘಟಕಗಳಿಗೆ ಉಚಿತ ಹಾಗೂ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಅರ್ಜಿ ಆಹ್ವಾನಿಸಿದೆ. ಡಿ.15 ರೊಳಗೆ ಕೈಮಗ್ಗ ಮತ್ತು ಜವಳಿ ಇಲಾಖೆಗೆ ಹೊಸದಾಗಿ ಅರ್ಜಿ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ವಿವರಗಳಿಗೆ ಕೈಮಗ್ಗ ಮತ್ತು ಜವಳಿ ಇಲಾಖೆ ಸಂಪರ್ಕಿಸಲು(08232–222366) ಪ್ರಕಟಣೆ ತಿಳಿಸಿದೆ.

ಬೋರ್‌ವೆಲ್ ಕಾಮಗಾರಿಗೆ ತಡೆ ಆದೇಶ ವಾಪಸ್‌ಗೆ ಒತ್ತಾಯ



ಮಂಡ್ಯ, ಡಿ.7– ಕೃಷಿಗಾಗಿ ರೈತರು ಅಕ್ರಮ–ಸಕ್ರಮ ಕಾಯ್ದೆಯಡಿ ಟಿಸಿ, ವಿದ್ಯುತ್ ಕಂಬ ಹಾಗೂ ವೈರ್‌ಗಳ ಮೂಲಕ ವಿದ್ಯುತ್ ಸಂಪರ್ಕ ಪಡೆದು ತಮ್ಮ ಜಮೀನುಗಳಿಗೆ ಬೋರ್‌ವೆಲ್‌ಗಳನ್ನು ಅಳವಡಿಸಿಕೊಳ್ಳುವ ಕಾಮಗಾರಿಗೆ ತಡೆ ನೀಡಿರುವ ಮೌಖಿಕ ಆದೇಶ ರದ್ದುಗೊಳಿಸಿ, ರೈತರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ತಾಲೂಕು ಬಿಜೆಪಿ ಮಾಜಿ ಅಧ್ಯಕ್ಷ ಬೂಕಹಳ್ಳಿ ಮಂಜು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಂತ ಹಣದಲ್ಲಿ ಬೋರ್‌ವೆಲ್ ತೆಗೆಸಿ ತಾತ್ಕಾಲಿಕ ವಿದ್ಯುತ್ ಪಡೆದಿರುವ ರೈತರು ವಿದ್ಯುತ್ ಸಕ್ರಮಕ್ಕಾಗಿ ತಲಾ 20 ಸಾವಿರ ರೂ. ಇಲಾಖೆಗೆ ಪಾವತಿಸಿ ಕಳೆದ 2–3 ವರ್ಷಗಳಿಂದ ಚಾತಕ ಪಕ್ಷಿಯಂತೆ ಕಾಯುತ್ತಿದ್ದು, ಕೂಡಲೇ ಸಂಬಂಧಿಸಿದ ಕಾಮಗಾರಿ ಆರಂಭಕ್ಕೆ ಸರ್ಕಾರ ಆಸಕ್ತಿ ವಹಿಸಬೇಕೆಂದು ಮನವಿ ಮಾಡಿದರು.

ಈ ಸಂಬಂಧ ರಾಜ್ಯದ ಬೆಸ್ಕಾಂ ವ್ಯಾಪ್ತಿಯಲ್ಲಿ 900 ಕೋಟಿ, ಸೆಸ್ಕಾಂ ವ್ಯಾಪ್ತಿಯಲ್ಲಿ 237 ಕೋಟಿ ಹಾಗೂ ಎಸ್ಕಾಂ ವ್ಯಾಪ್ತಿಯಲ್ಲಿ 400 ಕೋಟಿ ರೂ. ಕಾಮಗಾರಿ ಕೈಗೆತ್ತಿಕೊಳ್ಳುವ ಹಂತದಲ್ಲಿ ಸ್ಥಗಿತಗೊಳಿಸಿರುವುದರಿಂದ ರೈತರಿಗೆ ತೊಂದರೆಯಾಗಲಿದ್ದು, ಈ ಬಗ್ಗೆ ಸರ್ಕಾರ ಮುತುವರ್ಜಿ ವಹಿಸಬೇಕೆಂದು ಮನವಿ ಮಾಡಿದರು.

ಕಳೆದ ಅ.7ರಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶದಂತೆ ನೂತನವಾಗಿ ಐಪಿ ಸೆಟ್ ಅಳವಡಿಸಿಕೊಳ್ಳುವ ರೈತರು ಲಕ್ಷಾಂತರ ರೂ. ವ್ಯಯಿಸಿ ವಿದ್ಯುತ್ ಕಂಬ ಟಿಸಿ ಹಾಗೂ ವೈರ್ ಅಳವಡಿಕೆಗೆ ಮುಂದಾಗಬೇಕೆಂಬ ಆದೇಶ ರೈತ ವಿರೋಧಿಯಾಗಿದ್ದು, ಸದರಿ ಕಾಯ್ದೆ ವಾಪಸ್ ಪಡೆಯಬೇಕೆಂದು ಆಗ್ರಹಿಸಿದರು. ಕಾಮಗಾರಿ ಆದೇಶಕ್ಕೆ ತಡೆ ನೀಡಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 1 ಲಕ್ಷ ರೈತರು ಹಾಗೂ ಜಿಲ್ಲೆಯಲ್ಲಿ ಎರಡ್ನೂರು ಸಾವಿರ ರೈತರು ಸೌಲಭ್ಯ ವಂಚಿತರಾಗಿದ್ದು, ಕೂಡಲೇ ಸರ್ಕಾರ ಈ ಬಗ್ಗೆ ಗಮನ ಹರಿಸಬೇಕೆಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಕೃಷಿಕ ಮಹದೇವು ಮಾತನಾಡಿದರು. ಕೃಷಿಕರಾದ ಸತೀಶ್, ದಿನೇಶ್, ನಾಗೇಶ್ ಉಪಸ್ಥಿತರಿದ್ದರು.

ಹುಣಸೂರಲ್ಲಿ ಅಂಬೇಡ್ಕರ್, ಬುದ್ದರ ಭವ್ಯ ಮೆರವಣಿಗೆ



ಹುಣಸೂರು: ಡಾ.ಅಂಬೇಡ್ಕರ್ ಅವರ ಪರಿನಿರ್ವಾಣ ದಿನದ ಅಂಗವಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರವನ್ನು ಪುಷ್ಪಗಳಿಂದ ಹಾಗೂ ದೀಪಗಳಿಂದ ಅಲಂಕರಿಸಿ, ಗೌತಮ ಬುದ್ದರ ವಿಗ್ರಹದೊಂದಿಗೆ ಅಲಂಕೃತಗೊಂಡ ವಾಹನದಲ್ಲಿ ಭವ್ಯ ಮೆರವಣಿಗೆ ನಡೆಸಲಾಯಿತು.

ತಾಲೂಕು ಆಡಳಿತ ವತಿಯಿಂದ ಏರ್ಪಡಿಸಿದ್ದ ಮೆರವಣಿಗೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉಪವಿಭಾಗಾಧಿಕಾರಿ ಡಾ.ರುಚಿ ಬಿಂದಾಲ್, ತಹಶೀಲ್ದಾರ್ ಮಂಜುನಾಥ್, ತಾಪಂ ಕಾರ್ಯನಿರ್ವಹಣಾಧಿಕಾರಿ ಮನು ಹಾಗೂ ಮುಖಂಡರು ಚಾಲನೆ ನೀಡಿದರು.

ದಲಿತ ಮುಖಂಡರು ಸೇರಿದಂತೆ ನೂರಾರು ಮಂದಿ ಕೈಯಲ್ಲಿ ಮೇಣದ ಬತ್ತಿ ಹಿಡಿದು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಈ ಸಂದರ್ಭದಲ್ಲಿ ಹರಿಹರ ಆನಂದ ಸ್ವಾಮಿ, ನಾಗರಾಜ್ ಮಲ್ಲಾಡಿ, ನಿಂಗರಾಜ್ ಮಲ್ಲಾಡಿ, ರತ್ನಪುರಿ ಪುಟ್ಟಸ್ವಾಮಿ, ನಗರಸಭಾ ಸದಸ್ಯ ಹೆಚ್.ಪಿ.ಸತೀಶ್, ಸತ್ಯಪ್ಪ ವರದರಾಜು, ಕೊಳಗಟ್ಟ ಕೃಷ್ಣ, ಕಾಂತರಾಜು, ಚಿಕ್ಕ ಹುಣಸೂರು ರಾಜು, ಮಹದೇವಸ್ವಾಮಿ, ಶಿವಾನಂದ, ಸೋಮನಹಳ್ಳಿ ಪ್ರಸನ್ನ, ಹೆಚ್.ಎಸ್.ವರದರಾಜು, ಮಾರನಹಳ್ಳಿ ಶಿವಣ್ಣ, ಕಾಂತರಾಜು, ತಾಲೂಕು ಮಟ್ಟದ ಅಧಿಕಾರಿಗಳು, ಸರ್ಕಾರಿ ನೌಕರರು, ಸೇರಿದಂತೆ ನೂರಾರು ಜನರು ಭಾಗವಹಿಸಿದ್ದರು.

ಕರ್ನಾಟಕ ಕ್ರಿಕೆಟ್ ತಂಡಕ್ಕೆ ಚಿರುಕೃಷ್ಣ ಆಯ್ಕೆ



ಬೆಟ್ಟದಪುರ : ಬಿಹಾರದ ಪಾಟ್ನಾದಲ್ಲಿ ನಡೆಯಲಿರುವ 17 ವರ್ಷದ ಒಳಗಿನ ಕ್ರಿಕೆಟ್ ಪಂದ್ಯಾವಳಿಗೆ ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆಯಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಚಿರುಕೃಷ್ಣ ಕರ್ನಾಟಕ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಚಿರುಕೃಷ್ಣಯವರು ಪಿರಿಯಾಪಟ್ಟಣದಲ್ಲಿ ಪೊಲೀಸ್ ವೃತ್ತ ನಿರೀಕ್ಷಕರಾಗಿ ಸೇವೆ ಸಲ್ಲಿಸಿ ಪ್ರಸ್ತುತ ಹೊಳೆನರಸಿಪುರದ ಪೊಲೀಸ್ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಬಿ.ಆರ್. ಪ್ರದೀಪ್ ಕುಮಾರ್ ಹಾಗೂ ಶಿಲಾ ದಂಪತಿಯ ಪುತ್ರರಾಗಿದ್ದಾರೆ. ಚಿರುಕೃಷ್ಣ ಅವರ ಸಾಧನೆಗೆ ಪಿರಿಯಾಪಟ್ಟಣ ತಾಲೂಕಿನ ಹಲವಾರು ಮುಖಂಡರು ಅಭಿನಂದನೆ ಸಲ್ಲಿಸಿದ್ದಾರೆ.

ಡಿ.10 ನಂ.ಗೂಡು ಕೆಲವೆಡೆ ವಿದ್ಯುತ್ ವ್ಯತ್ಯಯ

ನಂಜನಗೂಡು: ನಂಜನಗೂಡು ಉಪವಿಭಾಗದ ಹದಿನಾರು ಶಾಖಾ ವ್ಯಾಪ್ತಿಯಲ್ಲಿ ಬರುವ ಅಡಕನಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆಯನ್ನು ಹಮ್ಮಿಕೊಂಡಿದ್ದು, ಡಿ.10 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಅಡಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಸಲು ದೇಗುಲದ ಹುಂಡಿಯಲ್ಲಿ 9.29 ಲಕ್ಷ ರೂ. ಸಂಗ್ರಹ



ಕಿಕ್ಕೇರಿ, ಡಿ.7– ಇಲ್ಲಿಗೆ ಸಮೀಪದ ಸಾಸಲು ಗ್ರಾಮದ ಸೋಮೇಶ್ವರ, ಶಂಭುಲಿಂಗೇಶ್ವರ ಹುಂಡಿಯಲ್ಲಿ 9.29 ಲಕ್ಷ ರೂ. ಸಂಗ್ರಹವಾಗಿದೆ. ಮುಜರಾಯಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ನೇತೃತ್ವದಲ್ಲಿ ಹುಂಡಿ ಎಣಿಕೆ ನಡೆದು ಹಣವನ್ನು ಸಾಸಲು ಗ್ರಾಮದ ಬ್ಯಾಂಕ್ ಆಫ್ ಬರೋಡಾದ ದೇವಾಲಯದ ಖಾತೆಗೆ ಜಮಾ ಮಾಡಲಾಯಿತು. ಈ ವೇಳೆ ತಹಸೀಲ್ದಾರ್ ನಿಸರ್ಗಪ್ರಿಯ, ಉಪ ತಹಸೀಲ್ದಾರ್ ವೀಣಾ, ರಾಜಸ್ವ ನಿರೀಕ್ಷಕ ಗೋಪಾಲಕೃಷ್ಣ, ಮುಜರಾಯಿ ಗುಮಾಸ್ತೆ ಪೂರ್ಣಿಮಾ, ಗ್ರಾಮಾಡಳಿತಾಧಿಕಾರಿ ಸಂಜಯ್, ಸೋಮಾಚಾರ್, ಸುನೀಲ್ ಗಾಣಿಗೇರ, ಶಶಿಕುಮಾರ್ ಮಡ್ಡಿ, ತಿಪ್ಪೇಶ್, ಕಾಂತೇಶ್, ಪ್ರಸನ್ನ, ಪರಿಮಳಾ, ವನಜಾಕ್ಷಿ, ಗ್ರಾಮ ಸಹಾಯಕರು ಇದ್ದರು.

ಬೋರೆಹೊಸಳ್ಳಿಯಲ್ಲಿ ಟೈಲರಿಂಗ್ ತರಬೇತಿ ಶಿಬಿರ



ಕಂಪಲಾಪುರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕಂಪಲಾಪುರ ವಲಯದ ಬೋರೆಹೊಸಳ್ಳಿ ಗ್ರಾಮದಲ್ಲಿ ಬುಧವಾರ ಸ್ಫೂರ್ತಿ ಜ್ಞಾನ ವಿಕಾಸ ಕೇಂದ್ರದ ಸದಸ್ಯರು ಹಾಗೂ ಸಂಘದ ಸದಸ್ಯರಿಗೆ ಟೈಲರಿಂಗ್ ತರಬೇತಿ ಶಿಬಿರ ಆಯೋಜಿಸಲಾಗಿತ್ತು.

ಗ್ರಾಮಾಭಿವೃದ್ಧಿ ಯೋಜನೆಯ ಕೊಡಗು ಜಿಲ್ಲೆ ಬಿ.ಸಿ.ಟ್ರಸ್ಟ್ ನಿರ್ದೇಶಕಿ ಲೀಲಾವತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಹಿಳೆಯರು ಕೇವಲ ಸಂಘದ ಹಣಕಾಸು ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರದೆ ಇಂತಹ ತರಬೇತಿ ಶಿಬಿರಗಳಲ್ಲಿ ಭಾಗವಹಿಸಿ ಆರ್ಥಿಕವಾಗಿ ಸಬಲರಾಗಬೇಕು. ಸ್ವಂತ ದುಡಿಮೆಯಿಂದ ಕುಟುಂಬ ನಿರ್ವಹಣೆ ಮಾಡಿಕೊಳ್ಳಬೇಕು. ಜೊತೆಗೆ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕು ಎಂದರು.

ತಾಲೂಕು ಯೋಜನಾಧಿಕಾರಿ ಸುರೇಶ್ ಶೆಟ್ಟಿ ಮಾತನಾಡಿ, ಮಹಿಳೆಯರು ಮನೆಗೆ ಮಾತ್ರ ಸೀಮಿತ ಆಂದು ಕೊಳ್ಳಬಾರದು. ಬದಲಾಗಿ ಸ್ವಂತ ಉದ್ಯೋಗವನ್ನು ಕೈಯಲ್ಲಿಟ್ಟುಕೊಂಡು ಸ್ವಾವಲಂಬಿ ಬದುಕನ್ನು ತಮ್ಮದಾಗಿಸಿಕೊಳ್ಳಬೇಕು ಎಂದರು.

ಟೈಲರಿಂಗ್ ತರಬೇತಿ ಶಿಕ್ಷಕಿ ದಿವ್ಯ, ಒಕ್ಕೂಟದ ಅಧ್ಯಕ್ಷೆ ರಾಣಿ, ಗ್ರಾ.ಪಂ ಮಾಜಿ ಅಧ್ಯಕ್ಷೆ ಚಂದ್ರಮ್ಮ, ವಲಯ ಮೇಲ್ವಿಚಾರಕಿ ರವಿಕಲಾಶೆಟ್ಟಿ, ಸೇವಾ ಪ್ರತಿನಿಧಿ ರೂಪಾ ಸೇರಿದಂತೆ ಸದಸ್ಯರು ಹಾಜರಿದ್ದರು.

ಪ್ರತಿಯೊಬ್ಬರಿಗೂ ಮಾನವ ಹಕ್ಕುಗಳ ಅರಿವು ಅಗತ್ಯ



ಮಂಡ್ಯ, ಡಿ.7– ಪ್ರತಿಯೊಬ್ಬ ನಾಗರಿಕನಿಗೂ ಮಾನವ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು ಅಗತ್ಯ ಎಂದು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್ ನಾಗರಾಜ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಾನವ ಹಕ್ಕುಗಳ ದಿನಾಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಡಿ.10 ರಂದು ಮಾನವ ಹಕ್ಕುಗಳ ದಿನಾಚರಣೆ ಆಯೋಜಿಸಿ ಸಾರ್ವಜನಿಕರಿಗೆ ಮಾನವ ಹಕ್ಕುಗಳ ಬಗ್ಗೆ ಅರಿವು ಮೂಡಿಸಲಾಗುವುದು ಎಂದರು. ಮಾನವ ಹಕ್ಕುಗಳ ಕುರಿತು ಇಂದು ಪ್ರಪಂಚದಾದ್ಯಂತ ಚರ್ಚೆಯಾಗುತ್ತಿದೆ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಹಂತದಿಂದಲೇ ಮಾನವ ಹಕ್ಕುಗಳನ್ನು ರಕ್ಷಣೆ ಮಾಡು ವುದು ಕಲಿತರೆ ಭವಿಷ್ಯದಲ್ಲಿ ಉತ್ತಮ ಸಮಾಜ ಸೃಷ್ಟಿಸಲು ಸಾಧ್ಯ ಎಂದರು.

ಸ್ವಾತಂತ್ರ್ಯ, ಸಮಾನತೆ, ಶಿಕ್ಷಣ, ಘನತೆ, ಗೌರವ ಎಲ್ಲವೂ ಮಾನವ ಹಕ್ಕುಗಳಿಗೆ ಸಂಬಂಧಿಸಿರುವುದರಿಂದ ಶಿಕ್ಷಣ ಕೊಡಿಸದಿರುವುದು, ಬಲವಂತವಾಗಿ ಮದುವೆ ಮಾಡುವುದು, ಗುಲಾಮಗಿರಿಗೆ ತಳ್ಳುವುದು ಹಾಗೂ ಬಾಲಕಾರ್ಮಿಕ ಪದ್ಧತಿ ಅನುಸರಿಸುವುದು ಹಕ್ಕಿಗೆ ವಿರುದ್ಧವಾದದು ಎಂದರು.

ಮಕ್ಕಳಿಗೆ ಕಾನೂನಿನ ಮೌಲ್ಯಗಳನ್ನು ಕುರಿತು ಹೇಳುವ ಕೆಲಸಗಳು ಆಗಬೇಕು. ಅನೇಕ ಮೂಲಭೂತ ಹಕ್ಕುಗಳ ಉಲ್ಲಂಘನೆ ಇಂದು ನಡೆಯುತ್ತಿದೆ. ಪರಿಸರ ಮಾಲಿನ್ಯದ ನಡುವೆ ಜನರು ಬದುಕುವಂತಹ ಸ್ಥಿತಿ ನಿರ್ಮಾಣವಾಗಿದ್ದು, ಮಾನವ ಹಕ್ಕುಗಳ ಬಗ್ಗೆ ಜಾಗೃತಿ ಅತ್ಯಗತ್ಯ ಎಂದರು.

ಇದೇ ಸಂದರ್ಭ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಎಸ್.ರಾಜಮೂರ್ತಿ, ಸಮಾಜ ಕಲ್ಯಾಣಾಧಿಕಾರಿ ಸಿದ್ದಲಿಂಗೇಶ್, ಡಿಡಿಪಿಯು ಚೆಲುವಯ್ಯ, ಪಿಇಎಸ್ ಕಾನೂನು ಕಾಲೇಜಿನ ಪ್ರಾಧ್ಯಾಪಕ ಜಯಕುಮಾರ್, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಆರ್.ರೋಹಿತ್, ಪೊಲೀಸ್ ಇನ್ಸ್‌ಪೆಕ್ಟರ್ ನವೀನ್, ಕಾರ್ಮಿಕ ಇಲಾಖೆ ತಾಲೂಕು ಪರಿವೀಕ್ಷಕ ಸ್ವಾಮಿ, ಮುಖಂಡರಾದ ಕುಮಾರಿ, ಸಿದ್ದರಾಜು, ಪೂರ್ಣಿಮಾ, ಜನಾರ್ಧನ್ ಹಾಗೂ ಲಂಕೇಶ್ ಸೇರಿದಂತೆ ಇನ್ನಿತರರಿದ್ದರು.

ಹಂಪಾಪುರದಲ್ಲಿ ಪರವಾನಗಿ ಇಲ್ಲದ ಕ್ಲಿನಿಕ್‌ಗಳಿಗೆ ಬೀಗ

ತಾಲೂಕು ಆರೋಗ್ಯಾಧಿಕಾರಿಗಳ ದಿಢೀರ್ ದಾಳಿ





ಹಂಪಾಪುರ: ಹೆಚ್.ಡಿ.ಕೋಟೆ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿ ಕುಮಾರ್ ಹೆಚ್.ಡಿ.ಕೋಟೆ ತಾಲೂಕು ಹಂಪಾಪುರ ಹೋಬಳಿಯ ಜಿ.ಬಿ.ಸರಗೂರು ಮತ್ತು ಆಲನಹಳ್ಳಿ ಗ್ರಾಮದ ಖಾಸಗಿ ಕ್ಲಿನಿಕ್‌ಗಳ ಮೇಲೆ ದಿಢೀರ್ ದಾಳಿ ನಡೆಸಿ ಪರವಾನಗಿ ಇಲ್ಲದ ಕ್ಲಿನಿಕ್‌ಗಳಿಗೆ ಬೀಗ ಹಾಕಿಸಿದರು.

ಗುರು ಕ್ಲಿನಿಕ್ ಮತ್ತು ಅರುಣ್ ಕ್ಲಿನಿಕ್‌ಗಳಿಗೆ ದಿಢೀರ್ ದಾಳಿ ನಡೆಸಿ KPMEA ಪರವಾನಗಿ ಪರಿಶೀಲನೆ ಮಾಡಿದಾಗ, ಪರವಾನಗಿ ಇಲ್ಲದೆ ಇರುವುದು ಹಾಗೂ ಸ್ವಚ್ಛತೆ ಇಲ್ಲದಿರುವ ಕಾರಣ ಬೀಗ ಹಾಕಿಸಿದರು. ಇದೇ ಸಂದರ್ಭದಲ್ಲಿ ತಾಲೂಕು ಆರೋಗ್ಯಾಧಿಕಾರಿಗಳು ಮಾತನಾಡಿ, ಜಿಲ್ಲಾಧಿಕಾರಿಗಳ ಆದೇಶದಂತೆ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಎಲ್ಲಾ ಖಾಸಗಿ ಕ್ಲಿನಿಕ್ ಹಾಗೂ ಆಸ್ಪತ್ರೆಯವರು KPMEA ಪರವಾನಗಿ ಇಲ್ಲದೆ ಯಾವುದೇ ಕ್ಲಿನಿಕ್ ನಡೆಸುವಂತಿಲ್ಲ ಹಾಗೂ ಆಸ್ಪತ್ರೆ ಮುಖ್ಯಸ್ಥರು ತಮ್ಮಲ್ಲಿ ಸಿಗುವ ಸೌಲಭ್ಯಗಳ ವಿವರ ಮತ್ತು ಚಿಕಿತ್ಸೆಯ ದರ ಪಟ್ಟಿಯನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು, ಹಾಗೂ ಮುಂದಿನ ದಿನಗಳಲ್ಲಿ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಎಲ್ಲಾ ಖಾಸಗಿ ಕ್ಲಿನಿಕ್ ಮತ್ತು ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗುವುದು. KPMEA ಪರವಾನೆ ಇಲ್ಲದಿದ್ದರೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹಿನ್ನೆಲೆ ಶಾಲಾ ಮುಖ್ಯ ಶಿಕ್ಷಕರ ಸಭೆ

● ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಿ ಹೆಚ್ಚು ಅಂಕ ಗಳಿಸುವಂತೆ ಮಾಡುವುದು ಶಿಕ್ಷಕರ ಕರ್ತವ್ಯ ● ಜಿಪಂ ಸಿಇಓ ಕೆ.ಎಂ.ಗಾಯತ್ರಿ ಅಭಿಮತ



ಮೈಸೂರು,ಡಿ.7(ಎಂಟಿವೈ)– ಶಾಲಾ ವಿದ್ಯಾರ್ಥಿಗಳಿಗೆ ಆಗುವ ಆಂತರಿಕ ಭಯ ಹಾಗೂ ಸಾಮಾಜಿಕ ಮತ್ತು ಕೌಟುಂಬಿಕ ಒತ್ತಡ ನಿವಾರಿಸುವುದರೊಂದಿಗೆ ಆತ್ಮಸ್ಥೈರ್ಯ ತುಂಬಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆಯುವಂತೆ ಮಾಡುವ ಕರ್ತವ್ಯ ಶಿಕ್ಷಕರದ್ದಾಗಿದೆ ಎಂದು ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ ಸಲಹೆ ನೀಡಿದ್ದಾರೆ.

2023–24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಸುಧಾರಿಸಲು ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಗುರುವಾರ ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಜಿ.ಪಂ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾ.25ರಿಂದ ಆರಂಭವಾಗಲಿದೆ. ಪರೀಕ್ಷೆಗೆ ದಿನಗಣನೆ ಆರಂಭವಾಗಿದ್ದು, ಜಿಲ್ಲೆಯಲ್ಲಿರುವ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು, ಸಹಶಿಕ್ಷಕರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬಗ್ಗೆ ಹೆಚ್ಚು ಗಮನ ಹರಿಸಬೇಕು. ವಿದ್ಯಾರ್ಥಿಗಳ ಭವಿಷ್ಯ ಹಾಗೂ ವ್ಯಕ್ತಿತ್ವ ರೂಪಿಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ನಿರ್ವಹಿಸುತ್ತಾರೆ. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬದುಕಿನಲ್ಲಿ ಮಹತ್ವದ ಘಟ್ಟವಾಗಿದ್ದು, ಫಲಿತಾಂಶ ಸುಧಾರಣೆಗೆ ಶಿಕ್ಷಕರು ಶ್ರಮಿಸಬೇಕು ಎಂದರು.

ಪರೀಕ್ಷೆ ಸಮೀಪಿಸುತ್ತಿದ್ದಂತೆಯೇ ವಿದ್ಯಾರ್ಥಿಗಳಲ್ಲಿ ಆತಂಕ ಹೆಚ್ಚಾಗುತ್ತದೆ. ಇದರೊಂದಿಗೆ ಮನೆಯಲ್ಲಿ ಪೋಷಕರು ಇಂತಿಷ್ಟೇ ಅಂಕ ಗಳಿಸಬೇಕು ಎಂದು ಒತ್ತಡ ಹೇರುತ್ತಿರುತ್ತಾರೆ. ಅಲ್ಲದೆ, ಅಕ್ಕಪಕ್ಕದ ಮನೆಯವರು, ಸಂಬಂಧಿಗಳು ಬಂದು ನಿಮ್ಮ ಮಗ ಹೆಚ್ಚು ಅಂಕ ಪಡೆಯುತ್ತಾನೆ ಎಂದು ಆಡುವ ಮಾತುಗಳು ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದರಿಂದ ಇನ್ನಷ್ಟು ಒತ್ತಡಕ್ಕೆ ವಿದ್ಯಾರ್ಥಿಗಳು ಒಳಗಾಗುತ್ತಾರೆ. ಅದರಲ್ಲೂ ಅಧಿಕಾರಿಗಳು, ಶಿಕ್ಷಕರ ಮಕ್ಕಳ ಮೇಲೆ ಇನ್ನಷ್ಟು ಒತ್ತಡ ಉಂಟಾಗುತ್ತದೆ. ಎಲ್ಲಿ ಪರೀಕ್ಷೆಯಲ್ಲಿ ಹಿನ್ನಡೆಯಾಗುತ್ತದೋ ಎಂದು ಭಯ ಬೀಳುವ ಸ್ಥಿತಿ ಇರುತ್ತದೆ. ಇದರಿಂದ ಚೆನ್ನಾಗಿ ಓದಿದ್ದರೂ ಪರೀಕ್ಷೆ ಬರೆಯಲು ಆಗದೇ ಭಯ ಬೀಳುತ್ತಾರೆ. ಪಾಲಕರ ನಿರೀಕ್ಷೆಗಳು ತುಂಬಾ ಇರುತ್ತದೆ. ಅವರ ನಿರೀಕ್ಷೆಗಳನ್ನು ಪೂರೈಸಲು ಸಾಧ್ಯವೇ? ಎಂಬ ಒತ್ತಡಕ್ಕೆ ಮಕ್ಕಳು ಸಿಲುಕಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ತರಗತಿಗೆ ಭೇಟಿ ನೀಡಿ ವಿದ್ಯಾರ್ಥಿಗಳನ್ನು ಗಮನಿಸಬೇಕು ಎಂದು ಸಲಹೆ ನೀಡಿದರು.

ಕಲಿಕಾ ಆಸಕ್ತಿ ಕಡಿಮೆ ಇರುವ ವಿದ್ಯಾರ್ಥಿಗಳ ಕಡೆಗೆ ಶಿಕ್ಷಕರು ಹೆಚ್ಚಿನ ಒತ್ತು ನೀಡಬೇಕು. ಕೆಲವು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಕೊರತೆ ಇರುತ್ತದೆ. ಅವರಲ್ಲಿ ಆತ್ಮವಿಶ್ವಾಸ ತುಂಬುವ ಕಾರ್ಯ ಮಾಡಬೇಕು. ಶಾಲೆಯಲ್ಲಿ ನಡೆಯುವ ಟೆಸ್ಟ್ ಮಾದರಿಯಲ್ಲಿಯೇ ಪರೀಕ್ಷೆ ಇರುತ್ತದೆ. ಆತಂಕ ಪಡಬೇಡಿ ಎಂದು ವಿದ್ಯಾರ್ಥಿಗಳಲ್ಲಿ ಧೈರ್ಯ ತುಂಬಬೇಕು. ಪ್ರತಿಯೊಂದು ಮಕ್ಕಳನ್ನು ವೈಯಕ್ತಿಕವಾಗಿ ಕರೆದು ಅವರ ಸಮಸ್ಯೆಗಳನ್ನು ಆಲಿಸಬೇಕು. ಯಾವ ವಿಷಯದಲ್ಲಿ ಹಿನ್ನಡೆಯಿದ್ದಾರೆ ಎಂದು ಗುರುತಿಸಿ, ವಿಷಯ ತಜ್ಞರಿಂದ ಹೆಚ್ಚುವರಿ ತರಗತಿ ತೆಗೆದುಕೊಳ್ಳಬೇಕು. ದಿನದ ಕೊನೆಯಲ್ಲಿ ಗುಂಪು ಚರ್ಚೆ ಮಾಡಿಸಬೇಕು. ಇದರಿಂದ ಮಕ್ಕಳು ತಮಗಾಗುತ್ತಿರುವ ಸಮಸ್ಯೆಯನ್ನು ಸಹಪಾಠಿಗಳೊಂದಿಗೆ ಹೇಳಿಕೊಳ್ಳುತ್ತಾರೆ. ಆಗ ಸಮಸ್ಯೆ ಬಗೆಹರಿಸಲು ಸಾಧ್ಯ ಎಂದರು.

ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಬೇಕು. ಎಲ್ಲಿಯೂ ಸಣ್ಣ ಲೋಪವಾಗದಂತೆ ಕಟ್ಟೆಚ್ಚರ ವಹಿಸಬೇಕು. ಪರೀಕ್ಷೆ ಸಂಬಂಧ ದೂರು ಮತ್ತು ಆರೋಪ ಬರದಂತೆ ಕಾರ್ಯನಿರ್ವಹಿಸಬೇಕು. ಜಿಲ್ಲೆಯಲ್ಲಿ ಸರ್ಕಾರದ ನಿರ್ದೇಶನ ಪ್ರಕಾರ ಪರೀಕ್ಷೆಯನ್ನು ಯಶಸ್ವಿಯಾಗಿ ನಿರ್ವಹಿಸುವ ವಿಶ್ವಾಸವನ್ನು ಹೊಂದಿದ್ದೇನೆ ಎಂದರು.

ಸಭೆಯಲ್ಲಿ ಜಿ.ಪಂ ಉಪ ಕಾರ್ಯದರ್ಶಿ ಎಂ.ಕೃಷ್ಣರಾಜು, ಡಿಡಿಪಿಐ ಹೆಚ್.ಕೆ.ಪಾಂಡು, ಶಾಲಾ ಶಿಕ್ಷಣ ಇಲಾಖೆ ಸಹ ನಿರ್ದೇಶಕ ಪಾಂಡುರಂಗ, ಡಯಟ್ ಪ್ರಾಂಶುಪಾಲ ನಾಗರಾಜಯ್ಯ, ಬಿಇಡಿ ಕಾಲೇಜು ಪ್ರಾಂಶುಪಾಲರಾದ ಗೀತಾಮ್ಮ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಬಸವರಾಜು, ರೇವಣ್ಣ, ರಾಜು, ಶೋಭಾ, ಕೃಷ್ಣಪ್ಪ, ಮಾರೇಗೌಡ, ಕೃಷ್ಣ, ನಂಜುಂಡಯ್ಯ, ವಿವೇಕ್, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಮಹದೇವಯ್ಯ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

> ಮುಂದಿನ ಶೈಕ್ಷಣಿಕ ವರ್ಷದ ಆರಂಭದಿಂದಲೇ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಸುಧಾರಿಸಲು ಕ್ರಿಯಾಯೋಜನೆ ರೂಪಿಸಬೇಕು. ಹಿಂದಿನ ವರ್ಷದ ಫಲಿತಾಂಶದ ವಿವರ ಹಾಗೂ ಯಾವ ತಾಲೂಕಿನಲ್ಲಿ ಯಾವ ವಿಷಯದಲ್ಲಿ ವಿದ್ಯಾರ್ಥಿಗಳು ಹಿನ್ನಡೆ ಅನುಭವಿಸುತ್ತಿದ್ದಾರೆ ಎಂದು ಗುರುತಿಸಿ, ಅದನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು. ಕಳೆದ ಸಾಲಿನಲ್ಲಿ ವಿದ್ಯಾರ್ಥಿಗಳು ಇಂಗ್ಲಿಷ್, ವಿಜ್ಞಾನ ಹಾಗೂ ಗಣಿತದಲ್ಲಿ ಹಿನ್ನಡೆ ಅನುಭವಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಗಣಿತ ಹಾಗೂ ವಿಜ್ಞಾನದ ಸೂತ್ರಗಳ ಬಗ್ಗೆ ಶಿಕ್ಷಕರು ಕೈಪಿಡಿ ರಚಿಸಿ, ಎಲ್ಲಾ ಶಾಲೆಗಳ ವಿದ್ಯಾರ್ಥಿಗಳಿಗೆ ನೀಡಬೇಕು. ಇದರಿಂದ ಮಕ್ಕಳ ಕಲಿಕೆಗೆ ಪೂರಕವಾಗಲಿದೆ.
>
> -ಕೆ.ಎಂ.ಗಾಯತ್ರಿ ಜಿ.ಪಂ ಸಿಇಓ

ಹೆಣ್ಣು ಭ್ರೂಣ ಹತ್ಯೆ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಒತ್ತಾಯಿಸಿ ಪ್ರತಿಭಟನೆ



ಮೈಸೂರು, ಡಿ.7(ಎಂಟಿವೈ)– ಲಿಂಗಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆ ದಂಧೆಕೋರರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾತ್ಮ ಗಾಂಧಿ ವೃತ್ತದಲ್ಲಿ ಗುರುವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ಹೆಣ್ಣು ಭ್ರೂಣ ಹತ್ಯೆಯ ಕರಾಳಮುಖ ಎಲ್ಲರಿಗೂ ಪರಿಚಯವಾಗಿದೆ. ಹೆಣ್ಣು ಭ್ರೂಣಗಳ ಹತ್ಯೆ ತಡೆಯಲು ಗರ್ಭಪೂರ್ವ ಮತ್ತು ಪ್ರಸವಪೂರ್ವ ಲಿಂಗಪತ್ತೆ ತಂತ್ರಜ್ಞಾನ ಕಾಯ್ದೆ ಜಾರಿಗೆ ಬಂದಿದೆ. 2003ರಲ್ಲಿ ಲಿಂಗಪತ್ತೆ ನಿಷೇಧ ಎನ್ನುವ ಪದವನ್ನು ಕಾಯ್ದೆಗೆ ಸೇರಿಸಲಾಗಿದೆ. ಹೆಣ್ಣು ಭ್ರೂಣ ಕೊಲ್ಲುವ ದಂಧೆ ಪತ್ತೆಹಚ್ಚಿ ಮಟ್ಟ ಹಾಕಲು ಸಕ್ಷಮ ಪ್ರಾಧಿಕಾರ ತೆರೆದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು.

ಗದ್ದೆ, ಹೊಲ, ಆಲೆಮನೆಗಳಲ್ಲಿ ಸೋನೋಗ್ರಫಿ ಅವ್ಯಾಹತವಾಗಿ ನಡೆದಿದೆ. ಸ್ತ್ರೀ ಭ್ರೂಣ ಹತ್ಯೆ ಉತ್ತರ ರಾಜ್ಯಗಳ ದಿವಾಳಿ ಸಾಂಸ್ಕೃತಿಕ ಆಲೋಚನೆ ಕಡೆಗೆ ಸಾಗುವ ಲಕ್ಷಣವಾಗಿದೆ. ಮೈಸೂರಿನಲ್ಲೂ ಭ್ರೂಣ ಹತ್ಯೆ ಎಗ್ಗಿಲ್ಲದೆ ನಡೆಯುತ್ತಿರುವುದು, ವೈದ್ಯರು, ದಾದಿಯರು, ಲ್ಯಾಬ್ ಟೆಕ್ನೀಷಿಯನ್‌ಗಳು ಭಾಗವಹಿಸಿರುವುದರಿಂದ ಮೈಸೂರಿನ ಜನತೆ ತಲೆ ತಗ್ಗಿಸುವಂತಾಗಿದೆ. ಈ ಅಕ್ರಮ ತಡೆಯಲು ಸರ್ಕಾರ ಸೂಕ್ತ ಕಾನೂನು ರೂಪಿಸಬೇಕು. ಸಮಾಜಘಾತುಕ ಶಕ್ತಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಜಿಲ್ಲಾ ಸಕ್ಷಮ ಪ್ರಾಧಿಕಾರಿಗಳನ್ನು ಹೊಸದಾಗಿ ರಚಿಸಿ ನಿಗಾ ವ್ಯವಸ್ಥೆ ಬಲಪಡಿಸಬೇಕು. ಗ್ರಾಮ ಪಂಚಾಯಿತಿ, ನಗರಸಭೆ, ಪುರಸಭೆಯ ಸಾಮಾಜಿಕ ನ್ಯಾಯ ಸಮಿತಿ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಕಾನೂನು ಪ್ರಾಧಿಕಾರ ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ, ಸಹ ಕಾರ್ಯದರ್ಶಿ ಸುಶೀಲ, ಜಿಲ್ಲಾ ಸಂಚಾಲಕಿ ಕೆ.ಸಿ.ಆಶಾ, ರಂಜಿತ.ಪಿ.ಆರ್, ಸುನೈನಾ, ಲೀಲಾವತಿ, ಪುಷ್ಪ ಸೇರಿದಂತೆ ಹಲವು ಪಾಲ್ಗೊಂಡಿದ್ದರು.

ಡಿ.15ಕ್ಕೆ 'ನೇಗಿಲ ಧರ್ಮ' ಚಿತ್ರ ಬಿಡುಗಡೆ



ಮೈಸೂರು, ಡಿ.7(ಎಂಟಿವೈ)– ಮಂಡ್ಯದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಫಿಲಂಸ್ ನಿರ್ಮಿಸಿರುವ ರೈತರ ಜೀವನಾಧಾರಿತ ಕನ್ನಡ ಚಲನಚಿತ್ರ 'ನೇಗಿಲ ಧರ್ಮ' ಸಿನಿಮಾ ಡಿ.15 ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಎಸ್. ಕೃಷ್ಣ ಸ್ವರ್ಣಸಂದ್ರ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೇಗಿಲ ಧರ್ಮ ಚಲನಚಿತ್ರವು 2022ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಉತ್ತಮ ಸಾಹಿತ್ಯ ಪ್ರಶಸ್ತಿ ಪಡೆದುಕೊಂಡಿದೆ. ಈ ಚಿತ್ರಕ್ಕೆ ತಾವೇ ಕತೆ, ಚಿತ್ರಕಥೆ, ಸಾಹಿತ್ಯ ನೀಡಿದ್ದು, ರೈತ ದೇಶ ಬೆನ್ನೆಲುಬು, ಎಲ್ಲ ರಂಗಕ್ಕೂ ಕೃಷಿ ಆಧಾರಸ್ತಂಭ, ಆದರೆ ಈಗ ರೈತ ಸಂಕಷ್ಟಕ್ಕೆ ಸಿಲುಕಿ ಆತ್ಮಹತ್ಯೆ ದಾರಿ ಹಿಡಿಯುತ್ತಿರುವುದು ಬೇಸರದ ಸಂಗತಿಯಾಗಿದೆ. ಜೊತೆಗೆ, ರೈತರಿಗೆ ಯಾರೂ ಹೆಣ್ಣು ಕೊಡುತ್ತಿಲ್ಲ. ಹೀಗಾಗಿ ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸಿ, ಕೃಷಿ ಕಡೆಗೆ ಜನರು ಒಲವು ತೋರುವಂತೆ ಮಾಡುವ ಸಂದೇಶ ಚಿತ್ರ ಹೊಂದಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕ ಅರಸಯ್ಯ, ಶಂಕರೇಗೌಡ, ಗೌಡಗೆರೆ ಮಹೇಂದ್ರ ಹಾಗೂ ನಿಖಿ ಇದ್ದರು.

ಕೋಟೆ ತಾಲೂಕು ಆಡಳಿತದಿಂದ ಜೀತದಾಳಾಗಿದ್ದ ನೇಪಾಳದ ಮಹಿಳೆ, ಮಕ್ಕಳ ರಕ್ಷಣೆ

● ಪತಿಯ ರಕ್ಷಣೆಗೂ ಕ್ರಮ ● ಅಕ್ರಮವಾಗಿ ದುಡಿಸಿಕೊಳ್ಳುತ್ತಿದ್ದ ವ್ಯಕ್ತಿ ವಿರುದ್ಧ ಕ್ರಮಕ್ಕೆ ನಿರ್ಧಾರ

ಹೆಚ್.ಡಿ.ಕೋಟೆ, ಡಿ.7–ಕಳೆದ ಒಂದೂವರೆ ವರ್ಷದಿಂದ ಜೀತದಾಳಾಗಿ ದುಡಿಯುತ್ತಿದ್ದ ನೇಪಾಳ ಮೂಲದ ಮಹಿಳೆ ಮತ್ತು ಇಬ್ಬರು ಮಕ್ಕಳನ್ನು ತಾಲೂಕು ಆಡಳಿತ ರಕ್ಷಿಸಿದೆ. ಈ ಮಹಿಳೆಯ ಪತಿಯನ್ನು ಈಕೆಯಿಂದ ಬೇರ್ಪಡಿಸಿರುವ ಜಮೀನು ಮಾಲೀಕ ಆತನನ್ನು ಕೊಡಗಿನ ತೋಟವೊಂದರಲ್ಲಿ ದುಡಿಸಿಕೊಳ್ಳುತ್ತಿದ್ದಾನೆ ಎಂದು ಹೇಳಲಾಗಿದ್ದು, ಆತನ ರಕ್ಷಣೆಗೂ ಅಧಿಕಾರಿಗಳು ಮುಂದಾಗಿದ್ದಾರೆ.

ತಾಲೂಕಿನ ಭೀಮನಹಳ್ಳಿ ಸಮೀಪದ ಕೈಲಾಸಪುರ ಗ್ರಾಮದ ಈರೇಗೌಡ ಎಂಬಾತನ ಜಮೀನಿನಲ್ಲಿ ನೇಪಾಳ ಮೂಲದ ಮಹಿಳೆ ಜೀತದಾಳಾಗಿ ದುಡಿಯುತ್ತಿದ್ದಾಳೆ. ಆಕೆಯನ್ನು ಅಮಾನವೀಯವಾಗಿ ನಡೆಸಿಕೊಳ್ಳಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಇಂದು ತಹಸೀಲ್ದಾರ್ ಶ್ರೀನಿವಾಸ್, ಸಿಡಿಪಿಓ ಆಶಾ, ಸಮಾಜ ಕಲ್ಯಾಣ ಇಲಾಖೆಯ ರಾಮಸ್ವಾಮಿ, ಗಿರಿಜನ ಅಭಿವೃದ್ಧಿ ಇಲಾಖೆಯ ನಾರಾಯಣ ಸ್ವಾಮಿ, ಜೀವಿಕಾ ಸಂಘಟನೆಯ ಉಮೇಶ್, ಬಸವರಾಜು, ಎಎಸ್‌ಐ ಸುಬಾನ್ ದಾಳಿ ನಡೆಸಿದರು.

ಈ ವೇಳೆ ನೇಪಾಳ ಮಹಿಳೆ ದನ ಕಾಯುತ್ತಿದ್ದರು. ಆಕೆಯನ್ನು ವಿಚಾರಿಸಿದಾಗ ಕಳೆದ ಒಂದೂವರೆ ವರ್ಷದ ಹಿಂದೆ ಮಧ್ಯವರ್ತಿಯೋರ್ವನ ಮೂಲಕ ಈರೇಗೌಡನ ಜಮೀನಿಗೆ ಕೆಲಸಕ್ಕೆ ಬಂದಿದ್ದಾಗಿಯೂ ತನಗೆ 200 ರೂ. ಹಾಗೂ ಪತಿಗೆ 300 ರೂ. ದಿನಗೂಲಿ ಆಧಾರದಲ್ಲಿ ನೇಮಿಸಿಕೊಂಡಿದ್ದ ಈರೇಗೌಡ ಬೆಳಗ್ಗೆ 4 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ದುಡಿಸಿಕೊಳ್ಳುತ್ತಿದ್ದ. ತನ್ನ ಪತಿ ಗೋಪಾಲ್‌ನನ್ನು ಈರೇಗೌಡ ನಾಲ್ಕು ತಿಂಗಳ ಹಿಂದೆ ಕೊಡಗಿಗೆ ಕರೆದುಕೊಂಡು ಹೋಗಿಬಿಟ್ಟಿದ್ದಾನೆ. ಪತಿಯೊಂದಿಗೆ ತನಗೆ ಸಂಪರ್ಕವೇ ಇಲ್ಲ. ಮೊಬೈಲ್‌ನಲ್ಲೂ ಮಾತನಾಡಲು ಅವಕಾಶ ನೀಡುತ್ತಿಲ್ಲ. ತನ್ನ ಮೇಲೆ ಹಲವು ಬಾರಿ ಹಲ್ಲೆ ನಡೆಸಿ ಕೆಲವೊಮ್ಮೆ ಉಪವಾಸ ಇರಿಸಿದ್ದ ಈರೇಗೌಡ, ಪುಟ್ಟ ಮಕ್ಕಳಿಂದಲೂ ದುಡಿಸಿಕೊಳ್ಳುತ್ತಿದ್ದ ಎಂದು ಆರೋಪಿಸಲಾಗಿದೆ.

ಮಹಿಳೆ ಮತ್ತು ಮಕ್ಕಳನ್ನು ರಕ್ಷಿಸಿರುವ ತಾಲೂಕು ಆಡಳಿತವು ತಾಯಿ ಮತ್ತು ಮಕ್ಕಳನ್ನು ಸಿಡಿಪಿಓ ವಶಕ್ಕೆ ನೀಡಿದೆ. ಅಲ್ಲದೇ ಮಹಿಳೆಯ ಪತಿಗೆ ಈ ವಿಚಾರವನ್ನು ತಿಳಿಸಿದ್ದು, ಆತನನ್ನು ಕರೆತರುವ ವ್ಯವಸ್ಥೆ ಮಾಡಲಾಗಿದೆ. ಈ ಸಂಬಂಧ ಈರೇಗೌಡನ ವಿರುದ್ಧ ಜೀತವಿಮುಕ್ತಿ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕೆಂದು ಜೀವಿತಾ ಸಂಘಟನೆ ಒತ್ತಾಯಿಸಿದೆ.

ತಮಿಳುನಾಡಿಗೆ ಕಾವೇರಿ ನೀರು: ಕಾವೇರಿ ಕ್ರಿಯಾ ಸಮಿತಿ ಪ್ರತಿಭಟನೆ



ಮೈಸೂರು, ಡಿ.7(ಎಂಟಿವೈ)– ತಮಿಳುನಾಡಿಗೆ ಕಾವೇರಿ ನೀರು ಬಿಡುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ಆದೇಶ ಖಂಡಿಸಿ ಕಾವೇರಿ ಕ್ರಿಯಾ ಸಮಿತಿ ಕಾರ್ಯಕರ್ತರು ಗುರುವಾರ ಪ್ರತಿಭಟನೆ ಮುಂದುವರೆಸಿದರು.

ಮೈಸೂರಿನ ದೊಡ್ಡಗಡಿಯಾರ ವೃತ್ತದ ಬಳಿ ಪ್ರತಿಭಟನೆ ನಡೆಸಿದ ಕಾವೇರಿ ಕ್ರಿಯಾ ಸಮಿತಿ ಕಾರ್ಯಕರ್ತರು ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡಬಾರದು. ಕಾವೇರಿ ನೀರಿನ ವಿಚಾರದಲ್ಲಿ ಕರ್ನಾಟಕ್ಕೆ ನಿರಂತರವಾಗಿ ಅನ್ಯಾಯವಾಗುತ್ತಿದೆ. ನೀರು ನಿರ್ವಹಣಾ ಪ್ರಾಧಿಕಾರ ಕರ್ನಾಟಕದ ಮೇಲೆ ಮಲತಾಯಿ ಧೋರಣೆ ತಾಳುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಬಸವರಾಜು, ಮಹದೇವಪ್ಪ, ಮೆಲ್ಲಹಳ್ಳಿ ಮಹದೇವಸ್ವಾಮಿ, ತೇಜಸ್ ಲೋಕೇಶ್‌ಗೌಡ, ಚಿನ್ನಸ್ವಾಮಿ, ನೇಹಾ, ಪ್ರಭಾ, ಅಲ್ಲಮ್ಮ, ವಿಷ್ಣು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ಮೈಸೂರು ಜಿಲ್ಲೆ ಉತ್ತಮ ಫಲಿತಾಂಶ ಬರಲು ವಿಶೇಷ ಕ್ರಮ



ಮೈಸೂರು,ಡಿ.7(ಎಂಟಿವೈ)– ಮೈಸೂರು ಜಿಲ್ಲೆಯ ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು 1 ರಿಂದ 5ನೇ ಸ್ಥಾನದೊಳಗೆ ಬರುವ ಗುರಿಯೊಂದಿಗೆ ವಿಶೇಷ ಕ್ರಮ ಕೈಗೊಳ್ಳಲಾಗಿದೆ ಎಂದು ಡಿಡಿಪಿಐ ಹೆಚ್.ಕೆ. ಪಾಂಡು ತಿಳಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ನಡೆದ ಜಿಲ್ಲೆಯ ಪ್ರೌಢಶಾಲೆಗಳ ಮುಖ್ಯಶಿಕ್ಷಕರ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆಗೆ 2019ರಲ್ಲಿ ಶೇ.80.65, 2020ರಲ್ಲಿ ಶೇ.74.4 ಫಲಿತಾಂಶ ಬಂದಿತ್ತು. 2021ರಲ್ಲಿ ಕೋವಿಡ್ ಹಿನ್ನೆಲೆಯಲ್ಲಿ ಎಲ್ಲಾ ವಿದ್ಯಾರ್ಥಿಗಳನ್ನು ಉತ್ತೀರ್ಣ ಮಾಡಲಾಗಿತ್ತು. 2022ರಲ್ಲಿ ಶೇ.91.37, 2023 ರಲ್ಲಿ ಶೇ.89.99 ಫಲಿತಾಂಶ ಬಂದಿತ್ತು. ಈ ಬಾರಿ ಮತ್ತಷ್ಟು ಉತ್ತಮ ಫಲಿತಾಂಶ ಪಡೆಯಲು ಶಿಕ್ಷಕರು ವಿದ್ಯಾರ್ಥಿಗಳನ್ನು ಉತ್ತೇಜಿಸಬೇಕು. ಕಳೆದ ಬಾರಿ ತಾಲೂಕುವಾರು ಫಲಿತಾಂಶದಲ್ಲಿ ಪಿರಿಯಾಪಟ್ಟಣ (ಶೇ.97.42) ಅತಿ ಹೆಚ್ಚು ಹಾಗೂ ಕೆ.ಆರ್. ನಗರ ತಾಲೂಕು (ಶೇ.68.31) ಕಡಿಮೆ ಫಲಿತಾಂಶ ಪಡೆದುಕೊಂಡಿದೆ. ಈ ಬಾರಿ ಕೆ.ಆರ್. ನಗರ ತಾಲೂಕು ಫಲಿತಾಂಶ ಸುಧಾರಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಪ್ರಸಕ್ತ ಸಾಲಿನಲ್ಲಿ ಪರೀಕ್ಷೆ ಎದುರಿಸಲು 40,174 ವಿದ್ಯಾರ್ಥಿಗಳ ಹೆಸರು ನೋಂದಣಿಯಾಗಿದ್ದಾರೆ. ಹೆಚ್.ಡಿ. ಕೋಟೆ ತಾಲೂಕಿನಲ್ಲಿ 3,732, ಹುಣಸೂರು ತಾಲೂಕಿನಲ್ಲಿ 4,376, ಕೆ.ಆರ್. ನಗರ ತಾಲೂಕಿನಲ್ಲಿ 3,145, ಮೈಸೂರು ಉತ್ತರದಲ್ಲಿ 6,586, ಮೈಸೂರು ಗ್ರಾಮಾಂತರದಲ್ಲಿ 5,286, ಮೈಸೂರು ದಕ್ಷಿಣದಲ್ಲಿ 4,636, ನಂಜನಗೂಡು ತಾಲೂಕಿನಲ್ಲಿ 5,151, ಪಿರಿಯಾಪಟ್ಟಣ ತಾಲೂಕಿನಲ್ಲಿ 3237, ತಿ.ನರಸೀಪುರ ತಾಲೂಕಿನಲ್ಲಿ 4,025 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 131 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡಲಾಗುತ್ತದೆ. ಈ ಬಾರಿ ಜಿಲ್ಲೆಯಲ್ಲಿ 447 ವಿಶೇಷ ಚೇತನ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದು, ಇವರಿಗೆ ಪರೀಕ್ಷೆ ಬರೆಯಲು ಸಹಾಯಕರನ್ನು ನಿಯೋಜಿಸಲಾಗುತ್ತದೆ ಎಂದರು.

ಕಳೆದ ಬಾರಿ ಫಲಿತಾಂಶದಲ್ಲಿ ವಿಜ್ಞಾನ (ಶೇ.90.28), ಇಂಗ್ಲಿಷ್ (93.05) ಹಾಗೂ ಸಮಾಜ (ಶೇ.93.90) ವಿಷಯದಲ್ಲಿ ಹಿಂದುಳಿದಿರುವುದು ಕಂಡು ಬಂದಿದೆ. ಈ ವಿಷಯಗಳಲ್ಲಿ ಈ ಬಾರಿ ಫಲಿತಾಂಶ ಸುಧಾರಣೆಗೆ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ. ಕಳೆದ ಬಾರಿ ಕನ್ನಡದಲ್ಲಿ ಶೆ.94.48, ಹಿಂದಿಯಲ್ಲಿ ಶೇ.94.52, ಗಣಿತದಲ್ಲಿ ಶೇ.95.20 ಫಲಿತಾಂಶ ಬಂದಿದೆ. ವಿದ್ಯಾರ್ಥಿಗಳು ಪರೀಕ್ಷೆಯನ್ನು ಆತ್ಮಸ್ಥೈರ್ಯದಿಂದ ಎದುರಿಸಲು ಅನುಕೂಲವಾಗುವಂತೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕೆಲವು ವಿದ್ಯಾರ್ಥಿಗಳು ತರಗತಿಯಲ್ಲಿ ಕಲಿಕಾ ಸಂಶಯಗಳನ್ನು ಶಿಕ್ಷಕರಿಂದ ಕೇಳಿ ಪರಿಹರಿಸಿಕೊಳ್ಳಲು ಹಿಂಜರಿಯುವುದರಿಂದ ಸಹಪಾಠಿಗಳಿಂದ ತಿಳಿದು ಕಲಿಯಲು ಗುಂಪು ರಚಿಸಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಡಾ.ಅಂಬೇಡ್ಕರ್ ಮಹಾ ಪರಿನಿಬ್ಬಾಣ ಹಿನ್ನೆಲೆ ಮೊಂಬತ್ತಿ ಬೆಳಗಿ, ಪುಷ್ಪನಮನ



ಮೈಸೂರು, ಡಿ.7(ಎಂಕೆ)– ಮೈಸೂರಿನ ವಿಜಯನಗರ 1ನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಬುದ್ಧ ವಿಹಾರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರ ಮಹಾ ಪರಿನಿಬ್ಬಾಣ ದಿನದ ಅಂಗವಾಗಿ ಕರ್ನಾಟಕ ಬುದ್ಧ ಧಮ್ಮ ಸಮಿತಿ ವತಿಯಿಂದ ಮೊಂಬತ್ತಿ ಬೆಳಗಿಸಿ ಸ್ಮರಿಸಲಾಯಿತು.

ಈ ವೇಳೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಕರ್ನಾಟಕ ಬುದ್ಧ ಧಮ್ಮ ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಮಹಾದೇವಪ್ಪ ಮಾತನಾಡಿ, ಮನುಷ್ಯ ಕ್ರಿಯಾಶೀಲನಾಗಿರಬೇಕು, ಬದುಕು ಯಾವಾಗಲೂ ಸಕಾರಾತ್ಮಕವಾಗಿರಬೇಕು. ಆಗ ಮಾತ್ರ ಭಗವಾನ್ ಬುದ್ಧರು ಹೇಳಿದಂತೆ ನಿನಗೆ ನೀನೇ ಬೆಳಕಾಗಲು ಸಾಧ್ಯ ಎಂದರು.

ನಿನಗೆ ನೀನೇ ಬೆಳಕು ಎಂಬ ಬುದ್ಧರ ವಾಣಿಯು ಸಕಾರಾತ್ಮಕ ಆಲೋಚನೆ ಹಾಗೂ ಭರವಸೆಯ ಬೆಳಕಾಗಿದೆ. ಪರಾವಲಂಬನೆ ಯಾವಾಗಲೂ ಅಪಾಯಕಾರಿ. ಬದುಕಿನಲ್ಲಿ ಪ್ರಯತ್ನಶೀಲವೇ ಮುಖ್ಯ ಎಂಬ ಅರ್ಥವನ್ನು ಹೇಳುತ್ತದೆ. ಅದರಂತೆ ಬಾಬಾಸಾಹೇಬರು ಜೀವನದಲ್ಲಿ ಎಷ್ಟೇ ಅಡ್ಡಿ–ಆತಂಕ ಬಂದರೂ ಎದೆಗುಂದದೆ ಕ್ರಿಯಾಶೀಲರಾಗಿರುತ್ತಿದ್ದರು ಎಂದು ಸ್ಮರಿಸಿದರು.

ಇದೇ ವೇಳೆ ಸಮಿತಿಯ ನೂತನ ವರ್ಷದ ಕ್ಯಾಲೆಂಡರ್ ಅನ್ನು ಲಡಾಖ್‌ನ ಸೋದೆ ಬಂತೇಜಿಯವರು ಬಿಡುಗಡೆ ಮಾಡಿದರು. ಕರ್ನಾಟಕ ಬುದ್ಧ ಧಮ್ಮ ಸಮಿತಿಯ ಅಧ್ಯಕ್ಷ ಪ್ರೊ.ಡಿ.ನಂಜುಂಡಯ್ಯ ಸಹ ಕಾರ್ಯದರ್ಶಿ ಹೆಚ್.ಶಿವರಾಜ್, ನಿವೃತ್ತ ಇಂಜಿನಿಯರ್ ಆರ್.ನಟರಾಜು, ರಾಜು ಹಂಪಾಪುರ, ನಿಸರ್ಗ ಸಿದ್ದರಾಜು, ಪುಟ್ಟಸ್ವಾಮಿ, ಮಹದೇವಸ್ವಾಮಿ, ಎಂ.ನಾಗಯ್ಯ, ಎಸ್.ಆರ್.ಪ್ರಶಾಂತ್, ಎಂ.ಮಹಾದೇವಯ್ಯ, ಕೆ.ಮಹಾದೇವಯ್ಯ, ನಾಗರಾಜು, ನಿರಂಜನ್, ರೂಪೇಶ್, ವಿಶಾಲ್, ಗಾಯತ್ರಿದೇವಿ, ರಾಜಮ್ಮ, ಪ್ರೇಮಲತಾ, ದಲಿತ ಸಂಘಟನೆಗಳ ಮುಖಂಡರು ಸೇರಿದಂತೆ ಮತ್ತಿತರರಿದ್ದರು.

ಮೊಬೈಲ್ ಬಳಸಬೇಕು ಆದರೆ ಸಾಮಾಜಿಕ ಜಾಲತಾಣಗಳ ದಾಸರಾಗಬಾರದು

ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ ಸಲಹೆ



ಮೈಸೂರು, ಡಿ.7(ಎಂಕೆ)– ಕಾಲ ಕಾಲಕ್ಕೆ ಅಪ್ಡೇಟ್ ಆಗಲು ಮೊಬೈಲ್ ಬಳಸಬೇಕೆ ವಿನಹ ಸಾಮಾಜಿಕ ಜಾಲತಾಣಗಳ ದಾಸರಾಗಬಾರದು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ ಹೇಳಿದರು.

ನಗರದ ಲಕ್ಷ್ಮಿಪುರಂನಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ಯುಜಿಸಿ–ನೆಟ್ ಮತ್ತು ಕೆ–ಸೆಟ್ ಪರೀಕ್ಷಾ ಉಚಿತ ತರಬೇತಿ ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಿ ಮತ್ತು ಅಧ್ಯಯನ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಶ್ರಮವಿಲ್ಲದೆ ಯಾವುದೇ ಪ್ರತಿಫಲದ ನಿರೀಕ್ಷೆ ಇಟ್ಟುಕೊಳ್ಳಬೇಡಿ. ನಿರಾಶವಾದಿಗಳು ಹಸಿವು, ನೋವು, ಕಷ್ಟ–ಕಾರ್ಪಣ್ಯಗಳನ್ನು ಮುಂದು ಮಾಡಿ ಸೋಮಾರಿಗಳಾದರೆ, ಆಶಾವಾದಿಗಳು ಅದನ್ನೇ ಹಠ ಮತ್ತು ಛಲದ ಅಸ್ತ್ರವನ್ನಾಗಿ ಬಳಸಿಕೊಂಡು ಬಹುದೊಡ್ಡ ಸಾಧನೆ ಮಾಡುತ್ತಾರೆ. ಇದಕ್ಕೆ ಇತಿಹಾಸವೇ ನಮ್ಮ ಕಣ್ಮುಂದೆ ಇದೆ ಎಂದರು.

ನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ, ಶಿಕ್ಷಣ ತಜ್ಞ ಪ್ರೊ.ಎನ್.ಎನ್. ಪ್ರಹ್ಲಾದ್, ಪ್ರೊ ಆರ್.ಎನ್.ಪದ್ಮನಾಭ, ಪ್ರೊ.ವಿಜಯಪ್ರಕಾಶ್, ಪ್ರೊ.ಕೆ.ಯಶೋಧರ, ಪ್ರೊ.ಕೃ.ಪ.ಗಣೇಶ, ಜೈನಹಳ್ಳಿ ಸತ್ಯನಾರಾಯಣಗೌಡ, ಕಾರ್ಯದರ್ಶಿ ಹೆಚ್. ಬಾಲಕೃಷ್ಣ ಉಪಸ್ಥಿತರಿದ್ದರು.

ಕಲಬುರಗಿಯಲ್ಲಿ ಹಾಡಹಗಲೇ ವಕೀಲನ ಬರ್ಬರ ಹತ್ಯೆ



ಕಲಬುರಗಿ, ಡಿ.7– ಕಲಬುರಗಿ ನಗರದಲ್ಲಿ ಗುರುವಾರ ನ್ಯಾಯಾಲಯಕ್ಕೆ ತೆರಳುತ್ತಿದ್ದ ವಕೀಲರೊಬ್ಬರನ್ನು ಹಾಡಹಗಲೇ ದುಷ್ಕರ್ಮಿಗಳಿಬ್ಬರು ತಲೆ ಮೇಲೆ ಕಲ್ಲು ಎತ್ತಿ ಹಾಕಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಲಬುರಗಿ ನಗರದ ಸಾಯಿ ಮಂದಿರ್ ಬಳಿ ಈ ಭೀಕರ ಕೊಲೆ ನಡೆದಿದೆ. ಕೊಲೆಯಾದ ವಕೀಲರನ್ನು ಉದನೂರ ಗ್ರಾಮದ ನಿವಾಸಿ ವಕೀಲ ಈರಣ್ಣಗೌಡ ಪೊಲೀಸ್ ಪಾಟೀಲ್ (40) ಎಂದು ಗುರುತಿಸಲಾಗಿದೆ.

ಹಂತಕರು ಮಚ್ಚಿನೊಂದಿಗೆ ವಕೀಲನನ್ನು ಬೆನ್ನಟ್ಟಿ ಬರುತ್ತಿದ್ದಾಗ ಅವರಿಂದ ತಪ್ಪಿಸಿಕೊಳ್ಳಲು ವಕೀಲ ಈರಣ್ಣಗೌಡ ಪೊಲೀಸ್ ಪಾಟೀಲ್ ಅವರು ಶ್ರೀ ಗಂಗಾ ವಿಹಾರ್ ಅಪಾರ್ಟ್ಮೆಂಟ್ ಒಳಗೆ ಓಡಿದ್ದಾರೆ. ಅಲ್ಲಿ ತನ್ನ ರಕ್ಷಣೆಗಾಗಿ ರಿವಾಲ್ವರ್ ತೆಗೆಯುತ್ತಿದ್ದ ವಕೀಲನ ಮೇಲೆ ಹಂತಕರು ಮಚ್ಚು ಬೀಸಿ ಹಲ್ಲೆ ಮಾಡಿದ್ದಾರೆ. ಆ ಬಳಿಕ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದಾರೆ. ಮಚ್ಚು ಹಿಡಿದು ಅಟ್ಟಾಡಿಸಿಕೊಂಡು ಬರುತ್ತಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.


ಪೊಲೀಸರ ಪ್ರಕಾರ, ಹಂತಕರು, ವಕೀಲರನ್ನು ಸುಮಾರು ಅರ್ಧ ಕಿಲೋ ಮೀಟರ್‌ವರೆಗೆ ಬೆನ್ನಟ್ಟಿದ ನಂತರ ಅವರ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ, ಬಳಿಕ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಹತ್ಯೆ ಮಾಡಿದ್ದಾರೆ. ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಹಳೆ ದ್ವೇಷವೇ ಕೊಲೆಗೆ ಕಾರಣ ಎಂದು ಪೊಲೀಸರು ಶಂಕಿಸಿದ್ದಾರೆ ಈ ಸಂಬಂಧ ವಿಶ್ವವಿದ್ಯಾಲಯ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕುದುರೆ ಮೇಲೆ ಕ್ರೌರ್ಯ ಮೆರೆದ ಅಪ್ಪ–ಮಗ

ಮೈಸೂರು, ಡಿ.7(ಬಿಎಲ್‌ಯು)–ವ್ಯಕ್ತಿಯೋರ್ವ ತನ್ನ ಮಗನೊಂದಿಗೆ ಸೇರಿ ಮೂಕಪ್ರಾಣಿ ಸಾಕು ಕುದುರೆಗೆ ಹಿಗ್ಗಾ–ಮುಗ್ಗಾ ಹೊಡೆದು ಕ್ರೌರ್ಯ ಮೆರೆದಿದ್ದಾನೆ.

ಮೈಸೂರಿನ ಅಗ್ರಹಾರದಲ್ಲಿರುವ ಟಾಂಗಾ ನಿಲ್ದಾಣದ ಬಳಿ ಇಂದು ರಾತ್ರಿ ಅಪ್ಪ–ಮಗ ಸೇರಿ ಚಾವಟಿಯಿಂದ ಕುದುರೆಯನ್ನು ಹಿಗ್ಗಾ–ಮುಗ್ಗಾ ಹೊಡೆದಿದ್ದಾರೆ. ಹೊಡೆತ ತಾಳಲಾರದೆ ಕುದುರೆ ಕೆಳಗೆ ಬಿದ್ದರೂ ಕರುಣೆ ತೋರದ ಇವರು ಮತ್ತೆ ಮತ್ತೆ ಅದನ್ನು ಹೊಡೆದಿದ್ದಾರೆ. ಇದನ್ನು ಕಂಡ ಸಾರ್ವಜನಿಕರು ಪ್ರಶ್ನಿಸಿದರೆ ಅವರಿಗೇ ಬಾಯಿಗೆ ಬಂದಂತೆ ಬಯ್ಯುತ್ತಿದ್ದರಿಂದ ಎಲ್ಲರೂ ನಮಗ್ಯಾಕೆ ಉಸಾಬರಿ ಎಂದು ಸ್ಥಳ ಖಾಲಿ ಮಾಡುತ್ತಿದ್ದ ದೃಶ್ಯ ಕಂಡುಬಂತು.

ಚೂಪಾದ ಮರದ ತುಂಡು ತುಳಿದು 'ಅರ್ಜುನ'ನಿಗೆ ಗಾಯವಾಗಿತ್ತೇ ಹೊರತು ಗುಂಡೇಟಿನಿಂದಲ್ಲ: ಅರಣ್ಯ ಇಲಾಖೆ ಸ್ಪಷ್ಟನೆ



ಹಾಸನ, ಡಿ.7– ವಿಶೇಷ ಕಾರ್ಯಾಚರಣೆ ವೇಳೆ ಭೀಕರ ಕಾಳಗದಲ್ಲಿ ದಸರಾ ಆನೆ ಅರ್ಜುನ ಆನೆ ಮೃತಪಟ್ಟಿದ್ದು, ಅದರ ಮಾವುತ ವಿನು ರೋದಿಸಿದ್ದು ಎಂಥವರ ಮನಕಲಕುವಂತಿತ್ತು.

ಅರ್ಜುನ ಆನೆ ಕಾಳಗದ ವೇಳೆ ಅರಣ್ಯಾಧಿಕಾರಿಗಳ ತಪ್ಪಾದ ಗುಂಡೇಟಿಗೆ ಬಲಿಯಾಗಿದೆ ಎಂಬ ಆರೋಪ ಎಲ್ಲೆಡೆ ಕೇಳಿಬಂದಿತ್ತು. ಆದರೆ, ಅರಣ್ಯ ಇಲಾಖೆಯು ಈ ಆರೋಪವನ್ನು ಅಲ್ಲಗಳೆದಿದೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮೋಹನ್ ಕುಮಾರ್, ಒಂಟಿ ಕಾಡಾನೆ ಸೆರೆ ಕಾರ್ಯಾಚರಣೆಯ ಮೇಲುಸ್ತುವಾರಿ ವಹಿಸಿಕೊಂಡಿದ್ದ ನಾನು ಅದಕ್ಕೆ ರೇಡಿಯೊ ಕಾಲರ್‌ಗಳನ್ನು ಸರಿಪಡಿಸುತ್ತಿದ್ದ ವೇಳೆ ಅರ್ಜುನನ ಬಲಭಾಗಕ್ಕೆ ದೊಡ್ಡ ಗಾಯವಾಗಿದ್ದು ತೀವ್ರ ನೋವಿನಿಂದ ಬಳಲುತ್ತಿದ್ದುದನ್ನು ಗಮನಿಸಿದ್ದೆ ಎಂದು ಹೇಳಿದ್ದಾರೆ.

ಕಾಡಾನೆಯೊಂದಿಗೆ ಕಾದಾಡುವಾಗ ಚೂಪಾದ ಮರದ ತುಂಡನ್ನು ತುಳಿದು ಆನೆ ಗಾಯಗೊಂಡಿದೆ. ನಿರಂತರವಾಗಿ ರಕ್ತಸ್ರಾವವಾಗುತ್ತಿದ್ದರೂ ಅದು ತೀವ್ರವಾಗಿ ಹೋರಾಡುತ್ತಿತ್ತು. ಕಾರ್ಯಾಚರಣೆಯ ಸಮಯದಲ್ಲಿ ತಪ್ಪಾಗಿ ಗುಂಡೇಟು ಬಿದ್ದು ಅರ್ಜುನ ಆನೆ ಗಾಯಗೊಂಡು ಮೃತಪಟ್ಟಿದ್ದಲ್ಲ ಎಂದು ಸ್ಪಷ್ಟಪಡಿಸಿದರು.

ಕಾರ್ಯಾಚರಣೆ ವೇಳೆ ಅರಣ್ಯ ಅಧಿಕಾರಿಯೊಬ್ಬರು ದೂರದಲ್ಲಿ ನಿಂತು, ಕಾಡಾನೆಯನ್ನು ಭಯಪಡಿಸಲು ಗಾಳಿಯಲ್ಲಿ ಗುಂಡು ಹಾರಿಸಿದರು, ಆಗ ಅರ್ಜುನ ಆನೆ ತನ್ನ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿತು ಎನ್ನುತ್ತಾರೆ. ಇಂತಹ ಕಾರ್ಯಾಚರಣೆಯ ವೇಳೆ ಅರಣ್ಯ ಸಿಬ್ಬಂದಿ ಆತ್ಮರಕ್ಷಣೆಗಾಗಿ ಡಬಲ್ ಬ್ಯಾರಲ್ ಗನ್ ಅನ್ನು ಮಾತ್ರ ಕೊಂಡೊಯ್ಯುತ್ತಾರೆ ಮರಣೋತ್ತರ ಪರೀಕ್ಷೆಯ ಸಮಯದಲ್ಲಿ ಅರ್ಜುನನ ದೇಹದ ಯಾವುದೇ ಭಾಗದಲ್ಲಿ ಮದ್ದುಗುಂಡಿನ ಗಾಯಗಳು ವೈದ್ಯರಿಗೆ ಕಂಡುಬಂದಿಲ್ಲ ಎಂದು ಹೇಳಿದರು.

ಕ್ರಮಕ್ಕೆ ಆಗ್ರಹ: ಅರ್ಜುನನ ಮಾವುತ ವಿನು ನೀಡಿದ್ದ ಹೇಳಿಕೆಯ ನಂತರ ಕಾಡಾನೆಯೊಂದಿಗೆ ಕಾಳಗದ ವೇಳೆ ಅರಣ್ಯಾಧಿಕಾರಿಗಳ ಗುಂಡೇಟಿಗೆ ತೀವ್ರ ಗಾಯಗೊಂಡು ಮೃತಪಟ್ಟಿದೆ ಎಂದು ಪ್ರಾಣಿ ಪ್ರೇಮಿಗಳು ಆರೋಪಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದರು.

ಮೈಸೂರು ಮಿತ್ರ ಶುಕ್ರವಾರ 8 ಡಿಸೆಂಬರ್ 2023

ಮಡಿಕೇರಿ: ಸಶಸ್ತ್ರ ಪಡೆ ಧ್ವಜ ದಿನಾಚರಣೆ

ಜನರಲ್ ತಿಮ್ಮಯ್ಯ ಸ್ಮಾರಕ ಭವನದ ಯುದ್ಧ ಸ್ಮಾರಕಕ್ಕೆ ನಮನ





ಮಡಿಕೇರಿ, ಡಿ.7–ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನದ ಆವರಣದಲ್ಲಿ ಜಿಲ್ಲಾಡಳಿತ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ ಗುರುವಾರ ಸಶಸ್ತ್ರ ಪಡೆಗಳ ಧ್ವಜ ದಿನ ಆಚರಿಸಲಾಯಿತು.

ಪೊಲೀಸ್ ಇಲಾಖೆ ವತಿಯಿಂದ ಮೂರು ಸುತ್ತು ಕುಶಾಲತೋಪು ಹಾರಿಸಿ ಗೌರವ ವಂದನೆ ಸಲ್ಲಿಸಿ, ಮೌನಾಚರಿಸಲಾಯಿತು. ಜಿಪಂ ಸಿಇಓ ವರ್ಣಿತ್ ನೇಗಿ, ಸಶಸ್ತ್ರ ಪಡೆಗಳ ಧ್ವಜ ಬಿಡುಗಡೆ ಮಾಡಿದರು. ಪೊಲೀಸ್ ಇಲಾಖೆಯ ಎಆರ್ ಎಸ್ಐ ಚೆನ್ನಕೇಶವ ಗೌರವ ವಂದನೆ ನಡೆಸಿದರು. ಪೊಲೀಸ್ ಬ್ಯಾಂಡ್ ನೇತೃತ್ವ ವಹಿಸಿದ್ದ ಸಿದ್ದೇಶ್ ತಂಡದವರು ಪೊಲೀಸ್ ವಾದ್ಯದೊಂದಿಗೆ ನಮನ ಸಲ್ಲಿಸಿದರು.

ಬಳಿಕ ಏರ್ ಮಾರ್ಷಲ್ (ನಿವೃತ್ತ) ಕೆ.ಸಿ. ಕಾರ್ಯಪ್ಪ ಮಾತನಾಡಿ, ರಾಷ್ಟ್ರದ ಗಡಿ ಪ್ರದೇಶದಲ್ಲಿ ಹಗಲಿರುಳು ಶ್ರಮಿಸುವ ವೀರ ಯೋಧರ ಧೈರ್ಯ, ಸಾಹಸವನ್ನು ಪ್ರತಿಯೊಬ್ಬರೂ ಪ್ರಶಂಸಿಸಬೇಕು. ವೀರ ಸೇನಾನಿಗಳ ಕಷ್ಟಕ್ಕೆ ಸ್ಪಂದಿಸಬೇಕು ಹಾಗೂ ಹುತಾತ್ಮ ಯೋಧರನ್ನು ಸದಾ ಸ್ಮರಿಸಬೇಕು ಎಂದರು.

ಜನರಲ್ ತಿಮ್ಮಯ್ಯ ಸ್ಮಾರಕ ಭವನದ ಆವರಣದ ಯುದ್ಧ ಸ್ಮಾರಕಕ್ಕೆ ಕೊಡಿಗೆ ಸೈನಿಕ ಶಾಲೆಯ ಪ್ರಾಂಶುಪಾಲ ಕರ್ನಲ್ ಅಮರ್ ಜೀತ್‌ಸಿಂಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಎನ್‌ಸಿಸಿ ಅಧಿಕಾರಿ ಕರ್ನಲ್ ಜೆಫಿರಿನ್ ಅರಾನ್ಹಾ, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರರಾಜ್, ಏರ್ ಕಮಾಂಡರ್ (ನಿವೃತ್ತ) ಕಂಬಿರಂಡ ದೇವಯ್ಯ, ಲೆ.ಕರ್ನಲ್ (ನಿವೃತ್ತ) ಎಂ.ನಾಚಪ್ಪ, ಮೇಜರ್ (ನಿವೃತ್ತ) ಓ.ಎಸ್.ಚಿಂಗಪ್ಪ, ಮಡಿಕೇರಿ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕುಟ್ಟಪ್ಪ, ಆದಾಯ ತೆರಿಗೆ ಇಲಾಖೆ ಅಧಿಕಾರಿ ಗಿರೀಶ್, ಸೈನಿಕ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಾಲಸುಬ್ರಹ್ಮಣ್ಯಂ, ಎ.ಪಿ.ಸುಬ್ಬಯ್ಯ, ಸುಬೇದಾರ್ ಮೇಜರ್ ಗೌಡಂಡ ತಿಮ್ಮಯ್ಯ, ಉಪ ಪೊಲೀಸ್ ವರಿಷ್ಠಾಧಿಕಾರಿ ಜಗದೀಶ್, ರೆಡ್‌ಕ್ರಾಸ್ ಜಿಲ್ಲಾ ಉಪಾಧ್ಯಕ್ಷ ಎಚ್.ಟಿ.ಅನಿಲ್, ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ಪ್ರಮೋದ್ ಕುಮಾರ್ ರೈ, ಕಾರ್ಯದರ್ಶಿ ರತ್ನಾಕರ ರೈ ಪುಷ್ಪ ಗುಚ್ಛವಿರಿಸಿ, ನಮನ ಸಲ್ಲಿಸಿದರು. ಇದೇ ವೇಳೆ ಮಾಜಿ ಸೈನಿಕರು, ಪೊಲೀಸರು, ಸೈನಿಕ ಶಾಲೆಯ ಎನ್‌ಸಿಸಿ ವಿದ್ಯಾರ್ಥಿಗಳು ಗೌರವ ಸಲ್ಲಿಸಿದರು.

ಪೊಮ್ಮಾಲೆ ಕೊಡಗ್ ಚಿತ್ರಕ್ಕೆ 'ನಂದಿ ಅವಾರ್ಡ್'



ಮಡಿಕೇರಿ, ಡಿ.7– ಕೊಟ್ಟುಕತೀರ ಯಶೋದಾ ಪ್ರಕಾಶ್ ನಿರ್ಮಾಣ ಹಾಗೂ ಕೊಟ್ಟುಕತೀರ ಪ್ರಕಾಶ್ ಕಾರ್ಯಪ್ಪ ನಿರ್ದೇಶನದ 'ಪೊಮ್ಮಾಲೆ ಕೊಡಗ್' ಕೊಡವ ಚಿತ್ರಕ್ಕೆ ಸ್ಯಾಂಡಲ್‌ವುಡ್‌ನ ಪ್ರತಿಷ್ಠಿತ ನಂದಿ ಫಿಲ್ಮಂ ಅವಾರ್ಡ್–2023ರ 'ಮೆಚ್ಚುಗೆಯ ಚಿತ್ರ' ಪ್ರಶಸ್ತಿ ಲಭಿಸಿದೆ.

ಬೆಂಗಳೂರಿನಲ್ಲಿ ನಡೆದ ಪ್ರಶಸ್ತಿ ಸಮಾರಂಭದಲ್ಲಿ ಪೊಮ್ಮಾಲೆ ಕೊಡಗ್ ಚಿತ್ರದ ನಟಿ ಈರಮಂಡ ಹರಿಣಿ ವಿಜಯ್ ಅವರಿಗೆ ಕಾಂತಾರ ಖ್ಯಾತಿಯ ರಿಷಬ್ ಶೆಟ್ಟಿ ಪ್ರಶಸ್ತಿ ಪ್ರದಾನ ಮಾಡಿದರು. ನಿರ್ಮಾಪಕಿ ಕೊಟ್ಟುಕತೀರ ಯಶೋದಾ ಪ್ರಕಾಶ್ ಅವರ ಪರವಾಗಿ ಈರಮಂಡ ಹರಿಣಿ ವಿಜಯ್ ಪ್ರಶಸ್ತಿ ಸ್ವೀಕರಿಸಿದರು. ನಂದಿ ಪ್ರಶಸ್ತಿಯಲ್ಲಿ ಕನ್ನಡ ಚಿತ್ರಗಳು ಸೇರಿದಂತೆ ಪ್ರಾದೇಶಿಕ ಭಾಷೆಗಳಾದ ತುಳು, ಕೊಡವ, ಕೊಂಕಣಿ, ಬ್ಯಾರಿ ಹಾಗೂ ಬಂಜಾರ ಭಾಷೆಯ ಚಿತ್ರಗಳಿಗೆ ಪ್ರಾಮುಖ್ಯತೆ ನೀಡಲಾಗುತ್ತದೆ.

ಈಗಾಗಲೇ ಪೊಮ್ಮಾಲೆ ಕೊಡಗ್ ಚಿತ್ರ ಹಲವು ಪ್ರಶಸ್ತಿಗಳನ್ನು ಪಡೆದು ಖ್ಯಾತಿ ಗಳಿಸಿದ್ದು, ಇದೀಗ ನಂದಿ ಫಿಲ್ಮಂ ಅವಾರ್ಡ್‌ನಲ್ಲಿ ಮೆಚ್ಚುಗೆಯ ಚಿತ್ರ ಪ್ರಶಸ್ತಿಯನ್ನು ಗೆದ್ದಿರುವ ಬಗ್ಗೆ ಪ್ರಕಾಶ್ ಕಾರ್ಯಪ್ಪ, ಯಶೋದಾ ಪ್ರಕಾಶ್ ಹಾಗೂ ನಟಿ ಈರಮಂಡ ಹರಿಣಿ ವಿಜಯ್ ಹರ್ಷ ವ್ಯಕ್ತಪಡಿಸಿದ್ದಾರೆ.

ನಾಳೆ ವಿರಾಜಪೇಟೆಯಲ್ಲಿ ಲೋಕ್ ಅದಾಲತ್



ವಿರಾಜಪೇಟೆ, ಡಿ.7–ವಿರಾಜಪೇಟೆ ತಾಲೂಕು ನ್ಯಾಯಾಲಯದಲ್ಲಿ ಡಿ.9 ರಂದು ಬೆಳಗ್ಗೆ 10.30 ಗಂಟೆಗೆ ಮೆಗಾ ಲೋಕ್ ಅದಾಲತ್ ನಡೆಯಲಿದೆ ಎಂದು 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಎಸ್.ಸುಜಾತ ತಿಳಿಸಿದರು.

ಇಲ್ಲಿನ ವಕೀಲರ ಸಂಘದ ಸಭಾಂಗಣದಲ್ಲಿ ವಿರಾಜಪೇಟೆ ತಾಲೂಕು ಕಾನೂನು ಸೇವೆಗಳ ಸಮಿತಿ ವತಿಯಿಂದ ನಡೆದ ಮೆಗಾ ಲೋಕ್ ಅದಾಲತ್‌ನ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಬಾಕಿ ಹಾಗೂ ರಾಜಿ ಪ್ರಕರಣಗಳನ್ನು ಲೋಕ್ ಅದಾಲತ್‌ನಲ್ಲೇ ಇತ್ಯರ್ಥ ಪಡಿಸುವಂತಾಗಬೇಕು. ಅದಾಲತ್‌ನಲ್ಲಿ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಗೊಳಿಸಲು ವಕೀಲರು ಸಹಕರಿಸಬೇಕು ಎಂದು ಸಲಹೆ ನೀಡಿದರು.

ಪ್ರಧಾನ ಸಿವಿಲ್ ನ್ಯಾಯಾಧೀಶ ಸಂತೋಷ್ ಕೊಠಾರಿ ಮಾತನಾಡಿ, ರಾಜಿ ಆಗುವಂತ ವ್ಯಾಜ್ಯ ಪೂರ್ವ ಪ್ರಕರಣಗಳ ಎರಡು ಕಡೆಯವರನ್ನು ಕರೆಸಿ ಇತ್ಯರ್ಥ ಪಡಿಸಬೇಕು. ಪ್ರಕರಣಗಳನ್ನು ಇತ್ಯರ್ಥಪಡಿಸಲು ವಕೀಲರ ಸಹಕಾರ ಅಗತ್ಯವಾಗಿದೆ ಎಂದರು. ಅಪರ ಸಿವಿಲ್ ನ್ಯಾಯಾಧೀಶ ಪ್ರದೀಪ್ ಪೋತದಾರ್ ಮಾತನಾಡಿದರು. ವಕೀಲರ ಸಂಘದ ಅಧ್ಯಕ್ಷ ಕೆ.ಜಿ.ಅಪ್ಪಣ್ಣ, ಕಾರ್ಯದರ್ಶಿ ವಿ.ಜಿ.ರಾಕೇಶ್, ಹಿರಿಯ ವಕೀಲ ಎನ್.ಜಿ.ಕಾಮತ್, ಕೆ.ಎನ್. ವಿಶ್ವನಾಥ್, ಎಂ.ಕೆ.ದಿನೇಶ್, ಡಿ.ಸಿ.ಧ್ರುವಕುಮಾರ್, ರಂಜಿತ್‌ಕುಮಾರ್ ಹಾಜರಿದ್ದರು.

ಯುವಕನ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲು

ನಾಪೋಕ್ಲು, ಡಿ.7–ಸಮೀಪದ ಬೇತು ಗ್ರಾಮದಲ್ಲಿ 15 ವರ್ಷದ ಅಪ್ರಾಪ್ತೆಯ ಮೇಲೆ ಅತ್ಯಾಚಾರವೆಸಗಿದ್ದ ಯುವಕನ ವಿರುದ್ಧ ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಸ್ಸಾಂ ಮೂಲದ ಅನೀಫ್ ಎಂಬುವರ ಪುತ್ರ ಅಸಾರುದ್ದೀನ್ (25) ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಾಗಿದೆ. ಬೇತು ಗ್ರಾಮದ ಕಾಫಿ ಬೆಳೆಗಾರ ಕೊಂಡಿರ ಸುರೇಶ್ ಅವರ ಲೈನ್ ಮನೆಯಲ್ಲಿ ವಾಸವಾಗಿರುವ ಈಕೆಯ ತಂದೆ–ತಾಯಿ ಕೂಲಿಕಾರ್ಮಿಕರಾಗಿ ಎರಡು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ, ತಂದೆ–ತಾಯಿ ಸೋಮವಾರ ನಾಪೋಕ್ಲುವಿನ ಸಂತೆಗೆ ತೆರಳಿದರು. ಮನೆಯಲ್ಲಿ ಒಬ್ಬಳೇ ಇದ್ದ ಮಗಳನ್ನು ಅಸಾರುದ್ದೀನ್ ಪುಸಲಾಯಿಸಿ ಕಾಫಿ ತೋಟಕ್ಕೆ ಕರೆದುಕೊಂಡು ಹೋಗಿ ಅತ್ಯಾಚಾರವೆಸಗಿದ್ದಾನೆ ಈಕೆಯ ಎಂದು ಪೋಷಕರು ನಾಪೋಕ್ಲು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಆರೋಪಿ ಅಸಾರುದ್ದೀನ್ ತಲೆಮರೆಸಿಕೊಂಡಿದ್ದಾರೆ.

ಗಾಂಜಾ ಸೇವಿಸಿದ್ದ ಇಬ್ಬರ ಬಂಧನ

ನಾಪೋಕ್ಲು ಡಿ.7–ಪಾರಾಣೆ–ಬಲಮುರಿ ಸಂಪರ್ಕ ರಸ್ತೆಯ ಬಲಮುರಿ ಗ್ರಾಮದ ಸೇತುವೆ ಕೆಳಗೆ ಗಾಂಜಾ ಸೇವಿಸಿದ್ದ ಇಬ್ಬರನ್ನು ನಾಪೋಕ್ಲು ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಲಮುರಿ ಗ್ರಾಮದ ಆಟೋ ಚಾಲಕ ತೌಫಿಕ್ ಹಾಗೂ ಕಾಂತೂರು ಗ್ರಾಮದ ವ್ಯಾಪಾರಿ ತಿಮ್ಮಯ್ಯ ಬಂಧಿತರು. ಡಿ.4ರಂದು ಸಮೀಪದ ಬಲಮುರಿ ಗ್ರಾಮದ ಸೇತುವೆ ಬಳಿ ಗಾಂಜಾ ಸೇವಿಸಿದ್ದ ಇವರನ್ನು ಪೊಲೀಸರು ಬಂಧಿಸಿ, ವಿಚಾರಣೆ ನಡೆಸಿದರು. ನಂತರ ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿದಾಗ ಇಬ್ಬರೂ ಗಾಂಜಾ ಸೇವಿಸಿರುವುದು ದೃಢಪಟ್ಟಿದೆ.

ಆದ್ಯಾಗೆ ಎರಡು ಚಿನ್ನದ ಪದಕ



ವಿರಾಜಪೇಟೆ, ಡಿ.7–ಇತ್ತೀಚೆಗೆ ಮೈಸೂರಿನ ಶಾರದಾ ವಿಲಾಸ್ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ಸ್ಪೋರ್ಟ್ಸ್ ಅಸೋಸಿಯೇಷನ್ ಹಾಗೂ ಇಂಟರ್ ನ್ಯಾಷನಲ್ ಸ್ಪೋರ್ಟ್ಸ್ ಡ್ಯಾನ್ಸ್ ಫೆಡರೇಷನ್ ವತಿಯಿಂದ ನಡೆದ ವಲಯ ಮಟ್ಟದ ಸ್ಪೋರ್ಟ್ಸ್ ಡ್ಯಾನ್ಸ್ ಚಾಂಪಿಯನ್‌ಶಿಪ್‌ನಲ್ಲಿ ವಿರಾಜ ಪೇಟೆಯ ವಿ.ಆದ್ಯಾ ಎರಡು ಚಿನ್ನದ ಪದಕಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ವಿರಾಜಪೇಟೆ ಲಿಟಿಲ್‌ಸ್ಕಾಲರ್ ಅಕಾಡೆಮಿಯ ವಿದ್ಯಾರ್ಥಿನಿಯಾದ ಈಕೆ ಉಪನ್ಯಾಸಕ ವಿನೋದ್‌ಕುಮಾರ್ ಹಾಗೂ ಶಿಕ್ಷಕಿ ಉಷಾ ದಂಪತಿಯ ಪುತ್ರಿ. ಈಕೆ ವಿದುಷಿ ಹೇಮಾವತಿ ಕಾಂತರಾಜ್ ಅವರ ನಾಟ್ಯಾಂಜಲಿ ನೃತ್ಯಶಾಲೆಯಲ್ಲಿ ತರಬೇತಿ ಪಡೆಯುತ್ತಿದ್ದಾಳೆ.

ಪ.ಜಾತಿ, ಪಂಗಡದ ಉಪಯೋಜನೆಯ ಪ್ರಗತಿ ಸಾಧಿಸಿ



ಮಡಿಕೇರಿ, ಡಿ.7–ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಉಪಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅಧ್ಯಕ್ಷತೆ ಬುಧವಾರ ಡಿಸಿ ಕಚೇರಿಯಲ್ಲಿ ನಡೆಯಿತು.


ಜಿಲ್ಲಾಧಿಕಾರಿ ಮಾತನಾಡಿ, ಕೆಲ ಇಲಾಖೆಗಳು ಭೌತಿಕ ಪ್ರಗತಿ ಸಾಧಿಸಿದ್ದು, ಆರ್ಥಿಕ ಪ್ರಗತಿಯನ್ನು ಕೂಡಲೇ ಸಾಧಿಸಬೇಕು. ವೈಯಕ್ತಿಕ ಫಲಾನುಭವಿಗಳು ಆಯ್ಕೆ ಮಾಡದಿದ್ದಲ್ಲಿ ಕೂಡಲೇ ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಯಾವುದೇ ಕಾರಣಕ್ಕೂ ವಿಳಂಬ ಅನುಸರಿಸಬಾರದು. ಬಡವರಿಗಾಗಿ ಮೀಸಲಿಡುವ ಕಾರ್ಯಕ್ರಮವನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಬೇಕು. ಸರ್ಕಾರದ ಆಶಯಗಳನ್ನು ಅರ್ಥ ಮಾಡಿಕೊಂಡು ಕಾರ್ಯ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸಲಹೆ ಮಾಡಿದರು.

ಜಿಪಂ ಸಿಇಓ ವರ್ಣಿತ್ ನೇಗಿ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನಾ ಕಾರ್ಯಕ್ರಮವನ್ನು ಅರ್ಹರಿಗೆ ತಲುಪಿಸಬೇಕು. ವಿವಿಧ ಇಲಾಖೆ ಕಾರ್ಯಕ್ರಮಗಳು ನಿಗದಿಯಂತೆ ಕಾಲಮಿತಿಯೊಳಗೆ ಅನುಷ್ಠಾನಗೊಳಿಸುವಂತೆ ಸೂಚಿಸಿದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್, ಸಮಗ್ರ ಗಿರಿಜನ ಯೋಜನಾ ಸಮನ್ವಯಾಧಿಕಾರಿ ಎಸ್.ಹೊನ್ನೇಗೌಡ, ಬಿಸಿಎಂ ಇಲಾಖಾ ಅಧಿಕಾರಿ ಎನ್.ಮಂಜುನಾಥ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಎಂ.ಚಂದ್ರಕಾಂತ್, ಕೃಷಿ ಇಲಾಖೆಯ ಜಂಟಿನಿರ್ದೇಶಕ ಸೋಮಸುಂದರ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ವಿ.ಟಿ.ವಿಸ್ಮಯಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು, ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾದೇವಿ, ಸಣ್ಣ ನೀರಾವರಿ ಇಲಾಖೆಯ ಎಇಇ ಕುಮಾರಸ್ವಾಮಿ, ಅಲ್ಪಸಂಖ್ಯಾತರ ಇಲಾಖೆ ಅಧಿಕಾರಿ ದಿವಾಕರ, ಪಶುಪಾಲನಾ ಇಲಾಖೆ ಉಪನಿರ್ದೇಶಕ ಲಿಂಗರಾಜು ದೊಡ್ಡಮನಿ, ಕಾರ್ಮಿಕ ಅಧಿಕಾರಿ ಹರ್ಷವರ್ಧನ, ವಿಕಲಚೇತನರ ಅಧಿಕಾರಿ ವಿಮಲಾ, ಸಹಕಾರ ಇಲಾಖೆಯ ಉಪನಿಬಂಧಕ ಕೃಷ್ಣಪ್ರಸಾದ್, ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕ ಗುರುಸ್ವಾಮಿ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಅನಿತಾ ಭಾಸ್ಕರ್, ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಬಿ.ಬಸಪ್ಪ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಚಂದ್ರಕುಮಾರ್, ನಾಚಪ್ಪ ಇತರರು ಇದ್ದರು.

ಪುಚ್ಚಿಮಾಡ ವಸಂತ ತಿಮ್ಮಯ್ಯ ನಿಧನ

ಪೊನ್ನಂಪೇಟೆ, ಡಿ.7– ತಾಲೂಕಿನ ಮತ್ತೂರು ಗ್ರಾಮದ ನಿವಾಸಿ ಹಾಗೂ ಪೊನ್ನಂಪೇಟೆ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಪುಚ್ಚಿಮಾಡ ವಸಂತ ತಿಮ್ಮಯ್ಯ (80) ಮಂಗಳವಾರ ನಿಧನರಾದರು.



ಮೃತರು ಪತ್ನಿ ಪದ್ಮಿನಿ ತಿಮ್ಮಯ್ಯ, ಇಬ್ಬರು ಪುತ್ರಿಯರು, ಒಬ್ಬ ಪುತ್ರ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ಮತ್ತೂರಿನಲ್ಲಿ ಬುಧವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿಸಲಾಯಿತು.

ನಾಳೆ ವಿವಿಧ ನ್ಯಾಯಾಲಯಗಳಲ್ಲಿ ಲೋಕ್ ಅದಾಲತ್

ಜಿಲ್ಲಾ ಸೆಷನ್ಸ್ ನ್ಯಾಯಾಧೀಶೆ ಬಿ.ಎಸ್.ಭಾರತಿ ಮಾಹಿತಿ



ಚಾಮರಾಜನಗರ, ಡಿ.7–ಚಾಮರಾಜನಗರ ಸೇರಿದಂತೆ ಜಿಲ್ಲೆಯ ಗುಂಡ್ಲುಪೇಟೆ, ಯಳಂದೂರು ಮತ್ತು ಕೊಳ್ಳೇಗಾಲ ತಾಲೂಕು ನ್ಯಾಯಾಲಯಗಳಲ್ಲಿ ಡಿ.9ರಂದು ಮೆಗಾ ಲೋಕ್ ಅದಾಲತ್ ಅನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಸೆಷನ್ಸ್ ನ್ಯಾಯಾಧೀಶೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯದ ಎಡಿಆರ್ ಕಟ್ಟಡದ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ರಾಜ್ಯಾದ್ಯಂತ ಡಿ.9ರಂದು ಲೋಕ್ ಅದಾಲತ್ ನಡೆಸಲಾಗುತ್ತಿದೆ. ಜಿಲ್ಲೆಯ 4 ತಾಲೂಕು ಕೇಂದ್ರಗಳ ಆಯಾ ನ್ಯಾಯಾಲಯಗಳಲ್ಲಿ ಬೈಟಕ್‌ಗಳನ್ನು ಏರ್ಪಡಿಸಿ ಸಂಧಾನಕಾರರನ್ನು ನೇಮಿಸಿ ಲೋಕ್ ಅದಾಲತ್‌ನ್ನು ಹಮ್ಮಿಕೊಳ್ಳಲಾಗಿದೆ. ಹಿಂದಿನ ಲೋಕ್ ಅದಾಲತ್ ಅನ್ನು ವಕೀಲರು, ಕಕ್ಷಿದಾರರು, ವಿಮಾ ಕಂಪನಿಗಳು, ವಿವಿಧ ಇಲಾಖೆಯ ಸಹಕಾರದೊಂದಿಗೆ ಯಶಸ್ವಿಯಾಗಿ ನಡೆಸಿ 16 ಸಾವಿರ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿತ್ತು. ಈ ಬಾರಿಯ ಅದಾಲತ್‌ನಲ್ಲಿ ಇನ್ನೂ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥಪಡಿಸಲು ಗುರಿ ಹೊಂದಲಾಗಿದೆ ಎಂದರು.

ಅದಾಲತ್‌ಗೆ ಸಂಬಂಧಪಟ್ಟ ವಕೀಲರು, ಕಕ್ಷಿದಾರರು ತಮ್ಮ ಸಹಕಾರ ನೀಡಿದ್ದಲ್ಲಿ ಸಂಧಾನಕಾರರು ನೀಡುವ ಸಲಹೆಗಳನ್ನು ಆಲಿಸಿ, ಪಾಲಿಸಿದಲ್ಲಿ ಉಭಯ ಪಕ್ಷಗಾರರು ಪರಸ್ಪರ ಒಪ್ಪಿ ಪ್ರಕರಣವನ್ನು ಲೋಕ್ ಅದಾಲತ್‌ನಲ್ಲಿ ಬಗೆಹರಿಸಿಕೊಳ್ಳಬಹುದು. ಅದಾಲತ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳನ್ನು ಹೊರತುಪಡಿಸಿ, ಇತರೆ ಯಾವುದೇ ಸಿವಿಲ್ ಪ್ರಕರಣಗಳು, ದಾಂಪತ್ಯ ಹಕ್ಕುಗಳ ಪುನರ್ ಸ್ಥಾಪನೆ, ಜೀವನಾಂಶ, ಮಕ್ಕಳ ಸಂರಕ್ಷಣೆ, ವಾಹನ ಅಪಘಾತ, ಕೈಗಾರಿಕಾ ವಿವಾದ ಕಾಯ್ದೆ ಮತ್ತು ರಾಜಿ ಯೋಗ್ಯ ಕ್ರಿಮಿನಲ್, ವಿಶೇಷ ಕಾನೂನಿನಿಂದ ಶಿಕ್ಷಿಸಲ್ಪಡುವ ಅಪರಾಧಗಳಾದ ಚೆಕ್ಕು ಅಮಾನ್ಯ, ಕಾರ್ಮಿಕ ಕಾಯ್ದೆ, ವಿದ್ಯುತ್ ಕಳವಿಗೆ ಸಂಬಂಧ, ಅಕ್ರಮ ಕಲ್ಲು, ಮರಳು ಸಾಗಣಿಕೆ, ಇತರೆ ಯಾವುದೇ ಅಪರಾಧ ಸ್ವರೂಪದ ರಾಜಿ ಯೋಗ್ಯ ಪ್ರಕರಣ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಸಹ ಲೋಕ್ ಅದಾಲತ್‌ನಲ್ಲಿ ರಾಜಿ ಮಾಡಿಕೊಳ್ಳಬಹುದು ಎಂದು ಮಾಹಿತಿ ನೀಡಿದರು.

ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಹಾಗೂ ರಾಜಿ ಯೋಗ್ಯ ಪ್ರಕರಣಗಳಲ್ಲಿ ಪಕ್ಷಕಾರರು ಸಂಬಂಧಪಟ್ಟ ನ್ಯಾಯಾಲಯಕ್ಕೆ ಡಿ.9ರಂದು ನಡೆಯುವ ಲೋಕ್ ಅದಾಲತ್‌ಗೆ ಪ್ರಕರಣವನ್ನು ವರ್ಗಾಯಿಸಲು ಮನವಿ ಸಲ್ಲಿಸಿದ್ದಲ್ಲಿ ಬಾಕಿ ಪ್ರಕರಣಗಳನ್ನು ಅದಾಲತ್‌ಗೆ ಕಳುಹಿಸಲಾಗುವುದು. ನಿಗದಿ ಪ್ರಕರಣಗಳನ್ನು ಮುಂಗಡ ಅರ್ಜಿಯನ್ನು ಸಲ್ಲಿಸುವ ಮೂಲಕ ಅದಾಲತ್‌ನಲ್ಲಿ ತರಿಸಿಕೊಂಡು ವ್ಯಾಜ್ಯ ಇತ್ಯರ್ಥಕ್ಕೆ ಪ್ರಯತ್ನಿಸುವ ಅವಕಾಶವನ್ನೂ ಕಲ್ಪಿಸಲಾಗಿದೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್, ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇತ್ಯರ್ಥಪಡಿಸಿಕೊಳ್ಳಲು ಅವಕಾಶ

ಪೂರ್ವಭಾವಿ ಸಮಾಲೋಚನಾ ಕೇಂದ್ರಗಳಲ್ಲಿ ನ್ಯಾಯಾಲಯದಿಂದ ಸಾಕಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಬಿ.ಎಸ್.ಭಾರತಿ ತಿಳಿಸಿದರು. ಬ್ಯಾಂಕ್‌ಗಳು, ವಿಮಾ ಕಂಪನಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ನ್ಯಾಯಾಧೀಶರು ಹಾಗೂ ವಕೀಲರ ಜೊತೆಗೂಡಿ ಈಗಾಗಲೇ ಪ್ರಾಧಿಕಾರ ಹಾಗೂ ಎಲ್ಲಾ ನ್ಯಾಯಾಲಯಗಳಲ್ಲಿ ನಿತ್ಯ ಕಾರ್ಯಕಲಾಪಗಳು ಮುಗಿದ ಬಳಿಕ ಲೋಕ್ ಅದಾಲತ್ ಪೂರ್ವಭಾವಿ ಸಮಾಲೋಚನಾ ಸಭೆ ಏರ್ಪಡಿಸಿದ್ದು, ರಾಜಿ ಯೋಗ್ಯ ಪ್ರಕರಣಗಳಲ್ಲಿ ಎರಡೂ ಪಕ್ಷಕಾರರನ್ನು ಕರೆಸಿ ಪೂರ್ವ ಸಮಾಲೋಚನೆ ನಡೆಸಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಎಲ್ಲಾ ಪಕ್ಷಗಾರರು ಅದಾಲತ್ ಸೌಲಭ್ಯವನ್ನು ಪಡೆಯಬೇಕು ಎಂದರು.

ಆಕ್ಸಿಜನ್ ದುರಂತ ಕುಟುಂಬಗಳಿಗೆ ಸರ್ಕಾರಿ ನೌಕರಿ ನೀಡಿ: ಎಆರ್‌ಕೆ

ಚಾಮರಾಜನಗರ, ಡಿ.7– ಕೋವಿಡ್ 2ನೇ ಅಲೆ ವೇಳೆ ಚಾಮರಾಜನಗರ ಜಿಲ್ಲಾಸ್ಪತ್ರೆಯ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟ ಕುಟುಂಬಗಳಿಗೆ ಸರ್ಕಾರಿ ನೌಕರಿ ಹಾಗೂ ಪರಿಹಾರ ಹೆಚ್ಚಿಸುವಂತೆ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಬೆಳಗಾವಿಯ ಅಧಿವೇಶನದಲ್ಲಿ ಒತ್ತಾಯಿಸಿದರು.



ಅಧಿವೇಶನದ ಶೂನ್ಯ ವೇಳೆ ಮಾತನಾಡಿದ ಅವರು, ಆಕ್ಸಿಜನ್ ದುರಂತದಲ್ಲಿ 36ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು. ಅಂಕಿ ಅಂಶಗಳ ಪ್ರಕಾರ 11 ಜನರಿಗೆ ತಲಾ 2 ಲಕ್ಷ ರೂ. ಹಾಗೂ 13 ಜನರಿಗೆ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗಿದೆ. ಉಳಿದ 8 ಜನರಿಗೆ ಪರಿಹಾರ ನೀಡಿಲ್ಲ. ಆದ್ದರಿಂದ ಮೃತ ಕುಟುಂಬಗಳಿಗೆ ಕಾಯಂ ನೌಕರಿ ಜೊತೆಗೆ ಹೆಚ್ಚಿನ ಪರಿಹಾರ ನೀಡಬೇಕು. ಈ ಸಂಬಂಧ ಸರ್ಕಾರ ಹಾಗೂ ಆರೋಗ್ಯ ಸಚಿವರು ಗಮನಹರಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಚಾಮರಾಜನಗರದಲ್ಲಿ ನಡೆದ ಆಕ್ಸಿಜನ್ ದುರಂತ ಇಡೀ ದೇಶದಲ್ಲೇ ದೊಡ್ಡ ಸುದ್ದಿಯಾಗಿತ್ತು. ಈ ದುರಂತದಲ್ಲಿ 36 ಜನರು ಮೃತಪಟ್ಟಿದ್ದಾರೆ. ಈ ಸಂಬಂಧ ತನಿಖೆ ನಡೆದು ಆಕ್ಸಿಜನ್ ದುರಂತದಲ್ಲೇ ಮೃತಪಟ್ಟಿರುವುದಾಗಿ ವರದಿಯಾಗಿತ್ತು. ಈ ಕುಟುಂಬಗಳಿಗೆ ಸರ್ಕಾರಿ ನೌಕರಿ, ಪರಿಹಾರ ಹೆಚ್ಚಳ ಸಂಬಂಧ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದಾಗಿ ಭರವಸೆ ನೀಡಿದರು.


ಅಂಬೇಡ್ಕರ್ ಸಾಕ್ಷ್ಯಚಿತ್ರ ಪ್ರದರ್ಶನ

ಚಾಮರಾಜನಗರ, ಡಿ.7–ಅಂಬೇಡ್ಕರ್ ಪರಿನಿಬ್ಬಾಣ ದಿನಾಚರಣೆ ಅಂಗವಾಗಿ ನಗರದಲ್ಲಿ ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾ ಶಾಖೆ, ನಾಗರಿಕ ಹಿತರಕ್ಷಣಾ ಸಮಿತಿ, ಬುದ್ಧ ನಗರ, ಹೌಸಿಂಗ್ ಬೋರ್ಡ್ ಯಜಮಾನರು, ರಾಜ್ಯ ಎಸ್ಸಿ ಎಸ್ಟಿ ನೌಕರರ ಸಮನ್ವಯ ಸಮಿತಿ, ಮಾತಾ ರಮಾಬಾಯಿ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಮೊಂಬತ್ತಿ ಮೆರವಣಿಗೆ ಹಾಗೂ ಅಂಬೇಡ್ಕರ್ ಅವರ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು.

ನಗರದ ಸಾರನಾಥ ಬುದ್ಧವಿಹಾರದಲ್ಲಿ ಬುದ್ಧ, ಅಂಬೇಡ್ಕರ್ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ, ಸಾಮೂಹಿಕ ಬುದ್ಧವಂದನೆ ಸಲ್ಲಿಸಿ ನಂತರ ಮೊಂಬತ್ತಿ ಮೆರವಣಿಗೆ ಚಾಲನೆ ನೀಡಲಾಯಿತು. ಅಲ್ಲಿಂದ ಮೆರವಣಿಗೆ ಬೌದ್ಧವಿಹಾರ, ನ್ಯಾಯಾಲಯ ರಸ್ತೆ, ಡಿವೈಎಸ್‌ಪಿ ಕಚೇರಿ ರಸ್ತೆ, ಜೆಎಸ್‌ಎಸ್ ಆಸ್ಪತ್ರೆ ರಸ್ತೆ ಮೂಲಕ ಹೌಸಿಂಗ್ ಬೋರ್ಡ್‌ನ ಅಂಬೇಡ್ಕರ್ ಉದ್ಯಾನವರೆಗೆ ಮೆರವಣಿಗೆ ನಡೆಸಲಾಯಿತು. ಬಳಿಕ ಬುದ್ಧ ನಗರದಲ್ಲಿ ಸಮಾವೇಶಗೊಂಡ ಅಂಬೇಡ್ಕರ್ ಪರಿನಿಬ್ಬಾಣದ ಮೂಲ ಸಾಕ್ಷ್ಯಚಿತ್ರಗಳು, ಸ್ಮಾರಕಗಳ ಪ್ರದರ್ಶಿಸಿ ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾ ಶಾಖೆ, ನಾಗರಿಕ ಹಿತರಕ್ಷಣಾ ಸಮಿತಿ, ಬುದ್ಧನಗರ, ಹೌಸಿಂಗ್ ಬೋರ್ಡ್, ಕರಿನಂಜನಪುರದ ಯಜಮಾನರು, ರಾಜ್ಯ ಎಸ್ಸಿ ಎಸ್ಟಿ ನೌಕರರ ಸಮನ್ವಯ ಸಮಿತಿ, ಮಾತಾ ರಮಾಬಾಯಿ ಫೌಂಡೇಷನ್ ಪದಾಧಿಕಾರಿಗಳು, ಅಂಬೇಡ್ಕರ್ ಅಭಿಮಾನಿಗಳು, ಬೌದ್ಧ ಉಪಾಸಕರು ಭಾಗವಹಿಸಿದ್ದರು.

ಅಂಬೇಡ್ಕರ್ ತತ್ವದಡಿ ಸಂವಿಧಾನ ಬಲಿಷ್ಠಗೊಳಿಸೋಣ



ಕೊಳ್ಳೇಗಾಲ, ಡಿ.7–ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಾಮರಸ್ಯವನ್ನು ಪ್ರತಿಯೊಬ್ಬರು ಅಳವಡಿಸಿಕೊಂಡು ಜೀವನ ನಡೆಸೋಣ, ಅವರ ಸಂವಿಧಾನವನ್ನು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಸಜ್ಜಾಗೋಣ ಎಂದು ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಕಾರ್ಯದರ್ಶಿ ಜಿ.ಸಿ.ಕಿರಣ್ ಹೇಳಿದರು.

ಪಟ್ಟಣದ ಅಂಬೇಡ್ಕರ್ ಪ್ರತಿಮೆಗೆ ಪರಿನಿಬ್ಬಾಣದ ಅಂಗವಾಗಿ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ಮೌಲ್ಯಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಅವರು ಬೌದ್ಧ ಧರ್ಮ ತತ್ವವನ್ನು ಅಧ್ಯಯನ ನಡೆಸಿ, ಬೌದ್ಧ ಧರ್ಮ ಇತರ ಧರ್ಮಕ್ಕಿಂತ ಶ್ರೇಷ್ಠವಾದದ್ದು ಎಂದು ಪರಿಗಣಿಸಿ 1956ರಲ್ಲಿ ಬೌದ್ಧ ಧರ್ಮ ಸ್ವೀಕರಿಸಿದರು. ಇವರು ಇಡೀ ದೇಶದಲ್ಲಿ ಸಂಚರಿಸಿ, ಅವರ ಲಕ್ಷಾಂತರ ಅನುಯಾಯಿಗಳಿಗೆ ಬೌದ್ಧ ಧರ್ಮ ಸ್ವೀಕಾರ ಮಾಡಿಸಿದರು. ಬುದ್ಧ, ಬಸವ ತತ್ವಗಳನ್ನು ಅನುಸರಿಸಿಕೊಂಡು ಇಡೀ ಪ್ರಪಂಚವೇ ಮೆಚ್ಚುವಂತಹ ಸಂವಿಧಾನವನ್ನು ರಚಿಸಿದ್ದಾರೆ. ಎಲ್ಲಾ ವರ್ಗಗಳಿಗೂ ಸಮಾನವಾಗಿ ಸಿಗುವಂತಹ ಸಂವಿಧಾನ ನೀಡಿದ್ದಾರೆ. ಆದರೆ, ಈಗ ಕೋಮು ಸಂಘರ್ಷಗಳು ಹೆಚ್ಚಾಗುತ್ತಿವೆ. ಕೋಮುವಾದವನ್ನು ಬದಿಗಿಟ್ಟು ಅಂಬೇಡ್ಕರ್ ತತ್ವ ಅನುಸರಿಸೋಣ ಎಂದು ತಿಳಿಸಿದರು.

ಈ ವೇಳೆ ನಗರಸಭೆ ಸದಸ್ಯೆ ಜಯಮರಿ, ದೊಡ್ಡಿಂದುವಾಡಿ ಗ್ರಾಪಂ ಸದಸ್ಯ ಸಿದ್ದಯ್ಯ, ಮುಖಂಡರಾದ ದೊಡ್ಡಿಂದುವಾಡಿ ಕೆಂಪರಾಜು, ಶಿವಮೂರ್ತಿ, ಮಧುವನಹಳ್ಳಿ ಬಸವಲಿಂಗಪ್ಪ, ದೊಡ್ಡಿಂದುವಾಡಿ ಪ್ರಸನ್ನ ಕುಮಾರ್, ಬಾಬು ಜಗಜೀವನ್ ರಾವ್ ಸಂಘದ ಬಾಲರಾಜು ಇನ್ನಿತರರಿದ್ದರು.

ಇಬ್ಬರು ಬೇಟೆಗಾರರ ಬಂಧನ



ಹನೂರು, ಡಿ.7–ಮಲೆಮಹದೇಶ್ವರಬೆಟ್ಟ ವನ್ಯಜೀವಿ ವಲಯ ವ್ಯಾಪ್ತಿಯ ಸಿಪಿಟಿ–56ರ ದೇವರಮಡು ಅರಣ್ಯ ಪ್ರದೇಶದಲ್ಲಿ ಉರುಳುಗಳನ್ನು ಹಾಕಿ ಕಾಡುಪ್ರಾಣಿಗಳನ್ನು ಬೇಟೆಯಾಡುತ್ತಿದ್ದ ಇಬ್ಬರು ಬೇಟೆಗಾರರನ್ನು ಗುರುವಾರ ಅರಣ್ಯಾಧಿಕಾರಿಗಳು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಮಲೆಮಹದೇಶ್ವರ ಬೆಟ್ಟದ ಅಣೆಹೊಲದ ದಡಬಂಡಿ ಮಾದಯ್ಯ (68) ಹಾಗೂ ನಾಗ ತಂಬಡಿ (53) ಬಂಧಿತ ಆರೋಪಿಗಳು. ಈ ಇಬ್ಬರು ದೇವರಮಡು ಅರಣ್ಯದಲ್ಲಿ ಉರುಳುಗಳನ್ನು ಹಾಕಿ ವನ್ಯಜೀವಿಗಳನ್ನು ಬೇಟೆಯಾಡುತ್ತಿದ್ದರು. ಈ ವೇಳೆ ಗಸ್ತಿನಲ್ಲಿದ್ದ ಅರಣ್ಯಾಧಿಕಾರಿಗಳು ಬಂಧಿಸಿ, ಉರುಳು, ಬ್ಯಾಟರಿಗಳು, ಕುಡುಗೋಲು ಹಾಗೂ ಎರಡು ಪಾತ್ರೆಗಳು ಸೇರಿದಂತೆ ಬೇಟೆಗೆ ಬಳಸುತ್ತಿದ್ದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ನಂತರ ನ್ಯಾಯಾಂಗ ವಶಕ್ಕೆ ನೀಡಲಾಗಿದೆ. ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ಭಾರತಿ ನಂದಿಹಳ್ಳಿ, ಉಪ ವಲಯ ಅರಣ್ಯಾಧಿಕಾರಿ ಶಿವರಾಜ ತಳವಾರ, ಗಸ್ತು ಅರಣ್ಯ ಪಾಲಕ ನಬಿಸಾಬ ಪೀರಸಾಬ ಮುಲ್ಲಾ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ರೈತ ಸಂಘ ಕಾರ್ಯಕರ್ತರಿಂದ ಪ್ರತಿಭಟನೆ



ಚಾಮರಾಜನಗರ, ಡಿ.7–ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಅವರನ್ನು ಅವಾಚ್ಯ ಪದಗಳಿಂದ ನಿಂದಿಸಿ, ಹಲ್ಲೆಗೆ ಯತ್ನಿಸಿದ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಆಗ್ರಹಿಸಿ ರೈತ ಸಂಘ ಹಾಗೂ ಹಸಿರುಸೇನೆ ಜಿಲ್ಲಾ ಘಟಕದಿಂದ ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಭುವನೇಶ್ವರಿ ವೃತ್ತದ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಮೆರವಣಿಗೆ ಹೊರಟು ಜಿಲ್ಲಾಡಳಿತ ಭವನದ ಮುಖ್ಯ ದ್ವಾರದಲ್ಲಿ ಕುಳಿತು ಪ್ರತಿಭಟಿಸಿದರು. ನಂತರ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು. ರೌಡಿಶೀಟರ್ ಇಂಗಲಗುಪ್ಪೆ ಗ್ರಾಮದ ಕೃಷ್ಣಗೌಡ ಮತ್ತು ಆತನ ಸಹಚರರು ಮಂಡ್ಯದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಬಡಗಲಪುರ ನಾಗೇಂದ್ರ ಅವರ ಮೇಲೆ ಹಲ್ಲೆಗೆ ಯತ್ನಿಸಿರುವುದು ಖಂಡನೀಯ.

ಈ ಸಂಬಂಧ ಮಂಡ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ರೈತ ಹೋರಾಟಗಾರರ ಮೇಲೆ ಸುಳ್ಳು ಆರೋಪ ಮಾಡಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಮಾಡಿ, ಶಾಂತಿ ಭಂಗಕ್ಕೆ ಪ್ರಯತ್ನಿಸಿರುವುದರಿಂದ ಸೂಕ್ತ ಕ್ರಮ ಜರುಗಿಸುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಟಿ.ಎಸ್.ಶಾಂತಮಲ್ಲಪ್ಪ, ರೈತ ಮುಖಂಡರಾದ ಮಹೇಶ್‌ಪ್ರಭು, ಶಿವಪುರ ಮಹದೇವಪ್ಪ, ಗೌಡೇಗೌಡ, ಮಹದೇವಸ್ವಾಮಿ, ಮಾದಮ್ಮ, ಶಿವಮಲ್ಲು, ಪೆರಿಯನಾಯಗಂ ಇತರರು ಭಾಗವಹಿಸಿದ್ದರು.

ನೀಲಗಾರ ಸಣ್ಣಶೆಟ್ಟಿ ನಿಧನ

ಚಾಮರಾಜನಗರ, ಡಿ.7–ತಾಲೂಕಿನ ದೊಡ್ಡಮೋಳೆ ಗ್ರಾಮದ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಾಗೂ ಜನಪ್ರಿಯ ಜಾನಪದ ಕಲಾವಿದ ನೀಲಗಾರ ಸಣ್ಣಶೆಟ್ಟಿ (64) ಗುರುವಾರ ನಿಧನರಾದರು.



ಮೃತರು ಮಲೆಮಹದೇಶ್ವರ, ಮಂಟೇಸ್ವಾಮಿ, ಬಿಳಿರಂಗಸ್ವಾಮಿ ಕಾವ್ಯ ಗಳನ್ನು ಶುಶ್ರಾವ್ಯವಾಗಿ ಹಾಡುತ್ತಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು, ಒಬ್ಬ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ(ಶುಕ್ರವಾರ) ಬೆಳಗ್ಗೆ ಮೃತರ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಮೈಸೂರು ಮಿತ್ರ

ಅಂತರ ಕಾಲೇಜು ಚರ್ಚಾ, ಪ್ರಬಂಧ, ಶಾಸ್ತ್ರೀಯ ಸಂಗೀತ ವಾದ್ಯ ಸ್ಪರ್ಧೆಗಳು

ಮೈಸೂರು,ಡಿ.7–ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಅನಾಥಾಲಯದ ಸಾಹಿತ್ಯ ಸಂಘದ ವಾರ್ಷಿಕೋತ್ಸವ ಅಂಗವಾಗಿ ಡಿ.19ರಂದು ಬೆಳಗ್ಗೆ 9 ಗಂಟೆಗೆ ಸದ್ವಿದ್ಯಾ ಶಿಕ್ಷಣ ಸಂಸ್ಥೆ ಆವರಣದಲ್ಲಿ ಲೋಕಸೇವಾನಿರತ ವಿ.ನಾರಾಯಣರಾವ್ ಸ್ಮಾರಕ ರಾಜ್ಯ ಮಟ್ಟದ ಅಂತರ ಕಾಲೇಜು ಕನ್ನಡ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಡಿ.17ರಂದು ಬೆಳಗ್ಗೆ 9 ಗಂಟೆಗೆ ಅನಾಥಾಲಯದ ಅನ್ನಪೂರ್ಣ ನಿಲಯ ದಲ್ಲಿ 28ನೇ ವಾರ್ಷಿಕ ಕನ್ನಡ ಚರ್ಚಾ ಸ್ಪರ್ಧೆ ನಡೆಯಲಿದ್ದು, ವಿಜೇತರಿಗೆ ಪ್ರಥಮ ಬಹುಮಾನ ರೂ. 8000, ದ್ವಿತೀಯ ಬಹುಮಾನ ರೂ. 5000 ಮತ್ತು ತೃತೀಯ ಬಹುಮಾನ 3000 ರೂ. ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 8431101056, 73492 17926 ಸಂಪರ್ಕಿಸಬಹುದು.

ಒಂದನೇ ಪುಟದಿಂದ

ರೈತರ ಕಾಪಾಡಿ...ಕಾಪಾಡಿ...

ಪರಿಹಾರಕ್ಕೆ ರಾಜ್ಯದ ಹಣವನ್ನು ವ್ಯಯಿಸಿ ನಂತರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತಿದ್ದವು. ಆದರೆ ಬರ ನಿರ್ವಹಣೆಗೆ ರಾಜ್ಯ ಸರ್ಕಾರದಲ್ಲಿ ಹಣವಿಲ್ಲದ ಕಾರಣದಿಂದ ಕೇಂದ್ರ ಸರ್ಕಾರ ಪರಿಹಾರ ಬಿಡುಗಡೆ ಮಾಡುತ್ತಿಲ್ಲ ಎಂದು ದೂರುತ್ತಿದ್ದೀರಿ. ಬಾಯಿಗೆ ಬಂದಂತೆ ಟೀಕಿಸುತ್ತಿದ್ದೀರಿ. ಇದೆಲ್ಲವನ್ನೂ ಸಹಿಸಿಕೊಂಡು ಕೇಂದ್ರದವರು ಹೇಗೆ ತಾನೇ ಸಹಾಯ ಮಾಡುತ್ತಾರೆ. ರಾಜ್ಯದ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರದೊಂದಿಗೆ ಉತ್ತಮ ಬಾಂಧವ್ಯ ಕಾಪಾಡಿಕೊಳ್ಳಬೇಕು. ಮುಂದಾದರೂ ಈ ಬಗ್ಗೆ ಗಮನಹರಿಸಿ ಎಂದು ಸಲಹೆ ನೀಡಿದರು.

ಕರೆಂಟ್ ಕಣ್ಣಾಮುಚ್ಚಾಲೆ: ಹಿಂದಿನ ಸರ್ಕಾರಗಳ ಅವಧಿಯಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ನಿತ್ಯ 7 ಘಂಟೆ ವಿದ್ಯುತ್ ನೀಡುತ್ತಿದರು. ಆದರೆ ಈಗ 3– 4 ಗಂಟೆಯೂ ಪೂರೈಕೆಯಾಗುತ್ತಿಲ್ಲ. ಕನಿಷ್ಠ 5 ಗಂಟೆಯಾದರೂ ವಿದ್ಯುತ್ ನೀಡುತ್ತೇವೆಂದು ಹೇಳಿ ಅದನ್ನೂ ಕಾರ್ಯಗತಗೊಳಿಸಲಿಲ್ಲ. ರಾಜ್ಯದೆಲ್ಲೆಡೆ ರೈತರು ಪ್ರತಿಭಟನೆ ಮಾಡಿದ್ದರಿಂದ 7 ಘಂಟೆ ವಿದ್ಯುತ್ ನೀಡುವುದಾಗಿ ಘೋಷಣೆ ಮಾಡಿ, ಪೂರೈಸುವ ಸಮಯದ ಬಗ್ಗೆ ಗೊಂದಲ ಸೃಷ್ಟಿ ಮಾಡಿದ್ದೀರಿ. ಇಂಧನ ಸಚಿವರೇ ರಾಜ್ಯದಲ್ಲಿ 1,300 ಮೆಗಾ ವ್ಯಾಟ್ ವಿದ್ಯುತ್ ಕೊರತೆ ಇದೆ ಎಂದಿದ್ದಾರೆ. ಸೆಂಟ್ರಲ್ ಗ್ರೀಡ್‌ನಲ್ಲಿ ವಿದ್ಯುತ್ ಲಭ್ಯವಿದ್ದರೂ ಅದನ್ನು ಖರೀದಿಸಲು ಸರ್ಕಾರದಲ್ಲಿ ಹಣವಿಲ್ಲ. ನನ್ನ ಕ್ಷೇತ್ರದ ಚಿಕ್ಕಕಾನ್ಯ, ದೊಡ್ಡಕಾನ್ಯ, ದೂರ, ಎಡಹಳ್ಳಿ ಭಾಗದಲ್ಲಿ ಹುಲಿ, ಚಿರತೆ ಹಾವಳಿ ಹೆಚ್ಚಾಗಿದೆ. ರಾತ್ರಿ ವೇಳೆ ಜಮೀನಿಗೆ ಹೋಗಲು ಸಾಧ್ಯವಾಗುತ್ತಿಲ್ಲ. ಹಗಲಲ್ಲಿ ವಿದ್ಯುತ್ ನೀಡುವಂತೆ ಜನ ಆಗ್ರಹಿಸುತ್ತಿದ್ದಾರೆ ಎಂದು ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ರೈತರು ಹೈರಾಣಾಗಿರುವುದನ್ನು ಸದನದ ಗಮನಕ್ಕೆ ತಂದರು. ಈ ಹಿಂದೆ 20 ಸಾವಿರ ರೂ. ಪಾವತಿಸಿದರೆ ಕೃಷಿ ಪಂಪ್ ಸೆಟ್‌ಗಳಿಗೆ ಟ್ರಾನ್ಸ್‌ಫಾರ್ಮರ್, ಕಂಬ, ವೈರ್ ಎಲ್ಲವನ್ನು ನೀಡುತ್ತಿದ್ದರು. ಆದರೆ ಈಗ 100 ಕೆವಿ ಟ್ರಾನ್ಸ್‌ಫಾರ್ಮರ್‌ಗೆ 2.50 ಹಾಗೂ 63 ಕೆವಿ ಟ್ರಾನ್ಸ್‌ಫಾರ್ಮರ್‌ಗೆ 1.15 ಲಕ್ಷ ಮತ್ತು 25 ಕೆವಿ ಟ್ರಾನ್ಸ್‌ಫಾರ್ಮರ್ ಹಾಕಿಸಲು 80 ಸಾವಿರ ಖರ್ಚಾಗುತ್ತದೆ. ಅಲ್ಲದೆ 1 ಕಿ.ಮೀ. ವೈರ್‌ಗೆ 60 ಸಾವಿರ ವೆಚ್ಚವಾಗುತ್ತಿದೆ. ರೈತರು ಇಷ್ಟೊಂದು ಹಣ ಹೊಂದಿಸುವುದು ಕಷ್ಟ, ಹಾಗಾಗಿ ಈ ಹಿಂದಿನ ದರದಲ್ಲೇ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲು ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ರೈತರಿಗೆ ಎಟಿಎಂ ಆಗಲಿಲ್ಲ: ಪ್ರಧಾನಿ ಮೋದಿ ಅವರು ಕರ್ನಾಟಕ ಕಾಂಗ್ರೆಸ್ ಅನ್ನು ಕಾಂಗ್ರೆಸ್ ಹೈಕಮಾಂಡ್‌ನ ಎಟಿಎಂ ಎಂದಿದ್ದರು. ಹಾಗೆಯೇ ರಾಜ್ಯ ಕಾಂಗ್ರೆಸ್, ಹೈಕಮಾಂಡ್ ಜೊತೆಗೆ ಪಂಚರಾಜ್ಯ ಚುನಾವಣೆಗಳಿಗೂ ಎಟಿಎಂ ರೀತಿ ನೆರವಾಯಿತು. ಆದರೆ ಈವರೆಗೆ ಒಮ್ಮೆಯೂ ರೈತರ ಕಷ್ಟಕ್ಕೆ, ಅವರ ಪಾಲಿಗೆ ಈ ಸರ್ಕಾರ ಎಟಿಎಂ ಆಗಲಿಲ್ಲ ಎಂದು ಜಿಟಿಡಿ, ಚಾಟಿ ಬೀಸಿದರು.

ಯುವಕನಿಂದ ತೀವ್ರ ಹಲ್ಲೆ

ಹೊರಗೆ ಹೋಗುವಂತೆ ಸೂಚಿಸಿದ್ದಾರೆ. ತರುವಾಯ ನಂದಕುಮಾರ್ ವಲಯ ಆಯುಕ್ತರ ಛೇಂಬರ್‌ನಲ್ಲಿ ಚರ್ಚೆ ನಡೆಸುತ್ತಿದ್ದ ವೇಳೆ ಸ್ಥಳಕ್ಕೆ ಬಂದ ಧನುಷ್ ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದಾನೆ. ಸರ್ಕಾರಿ ಅಧಿಕಾರಿಯಾಗಿರುವ ನನ್ನ ಬಗ್ಗೆ ಈ ರೀತಿ ಮಾತನಾಡುವುದು ತಪ್ಪು ಎಂದು ನಂದಕುಮಾರ್ ತಿಳಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಧನುಷ್ ಅವಾಚ್ಯ ಶಬ್ಧಗಳಿಂದ ಬೈಯುತ್ತಲ್ಲೇ, ಏಕಾಏಕಿ ನಂದಕುಮಾರ್ ಮೇಲೆ ಹಲ್ಲೆ ನಡೆಸಿದ್ದಾನೆ. ಈ ಸಂದರ್ಭದಲ್ಲಿ ತಡೆಯಲು ಹೋದ ಇತರೆ ನೌಕರರ ಮೇಲೂ ಪಾನಮತ್ತನಾಗಿದ್ದ ಧನುಷ್ ಹಲ್ಲೆಗೆ ಮುಂದಾಗಿದ್ದಾನೆ. ತರುವಾಯ ನಂದಕುಮಾರ್, ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಧನುಷ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಕರ್ತವ್ಯದಲ್ಲಿದ್ದ ವೇಳೆ ಧನುಷ್ ನನ್ನ ಮೇಲೆ ಹಲ್ಲೆ ನಡೆಸಿದ್ದು, ಕೊಲೆ ಬೆದರಿಕೆ ಕೂಡ ಹಾಕಿದ್ದಾನೆ. ಈತನ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ನಂದಕುಮಾರ್ ನೀಡಿರುವ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ನಡೆಸುತ್ತಿದ್ದಾರೆ. ಈ ಪ್ರಕರಣ ಮಂಗಳವಾರ ನಡೆದಿದ್ದರೂ ಇನ್ನು ಕೂಡ ಪೊಲೀಸರು ಆರೋಪಿಯನ್ನು ಬಂಧಿಸಿಲ್ಲ ಎಂದು ನಗರ ಪಾಲಿಕೆ ನೌಕರರು ಆಕ್ರೋಶ ವ್ಯಕ್ತಪಡಿಸಿದ್ದರು. ಮೈಸೂರು ನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ವೆಂಕಟರಾಮ್ ಭೇಟಿ ಮಾಡಿದ ನಂದಕುಮಾರ್ ಹಾಗೂ ಇತರೆ ನೌಕರರು, ಆರೋಪಿ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸ್ ಆಯುಕ್ತರ ಮೇಲೆ ಒತ್ತಡ ಹಾಕುವಂತೆ ಮನವಿ ಮಾಡಿದ್ದರು.

ಆರೋಪಿ ಧನುಷ್ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸರಿಗೆ ಮನವರಿಕೆ ಮಾಡಿಕೊಡುವಂತೆ ನಗರ ಪಾಲಿಕೆ ಆಡಳಿತಾಧಿಕಾರಿ ಡಾ.ಪ್ರಕಾಶ್ ಹಾಗೂ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಅವರಲ್ಲಿಯೂ ಮನವಿ ಮಾಡಿದ್ದೇವೆ. ನಮ್ಮ ಬೇಡಿಕೆ ಈಡೇರದಿದ್ದರೆ ಮುಂದೆ ಯಾವ ರೀತಿಯ ಹೋರಾಟ ಮಾಡಬೇಕೆಂದು ನೌಕರರೆಲ್ಲಾ ಸೇರಿ ತೀರ್ಮಾನ ಮಾಡುತ್ತೇವೆ ಎಂದು ವೆಂಕಟರಾಮ್ ಎಚ್ಚರಿಸಿದ್ದರು. ಈ ಪ್ರಕರಣ ಬೇರೆ ತಿರುವು ಪಡೆಯುತ್ತಿರುವುದರಿಂದ ಎಚ್ಚೆತ್ತ ಪೊಲೀಸರು ಇಂದು ರಾತ್ರಿ ಧನುಷ್‌ನನ್ನು ಬಂಧಿಸಿದ್ದಾರೆ.

ಪುಂಡರ ಅಟ್ಟಹಾಸಕ್ಕೆ ಇನ್ನೂ ಕ್ರಮವಿಲ್ಲ!

ಯಕ್ಷ ಪ್ರಶ್ನೆಯಾಗಿದೆ. ಇತ್ತೀಚಿಗೆ ಮೈಸೂರಲ್ಲಿ ಪುಂಡ–ಪೋಕರಿಗಳ ಹಾವಳಿ ವ್ಯಾಪಕಗೊಳ್ಳುತ್ತಿದೆ. ಅವರಿಗೆ ಪೊಲೀಸರ ಭಯವೇ ಇಲ್ಲದಂತಾಗಿದೆ. ಪೊಲೀಸ್ ಅಧಿಕಾರಿಗಳು ವರ್ಗಾವಣೆಗೊಂಡು ಬಂದು ಅಧಿಕಾರ ವಹಿಸಿಕೊಂಡಾಗ ಗೊತ್ತುಗುರಿ ಇಲ್ಲದಿದ್ದರೂ, ಸಕಾರಣ ಇಲ್ಲದೆ ಹೋದರೂ ಅವರಿಗೆ ಸನ್ಮಾನಿಸಿ, ಅಭಿನಂದಿಸುವ ಪರಿಪಾಠ ಹೆಚ್ಚಾಗುತ್ತಿದೆ. ಇದು ಒಂದು ರೀತಿ ಸಾರ್ವಜನಿಕರಲ್ಲಿ ಪೊಲೀಸರ ಗಾಂಭೀರ್ಯತೆ ಕುಗ್ಗಲು ಕಾರಣವಾಗುತ್ತಿದೆ ಎಂಬ ಮಾತುಗಳು ವ್ಯಾಪಕವಾಗಿ ಕೇಳಿ ಬರುತ್ತಿವೆ. ಒಂದು ರೀತಿ ಮುಲಾಜಿಗೆ ಒಳಗಾಗಿ, ನಿಷ್ಪಕ್ಷಪಾತ ಕಾರ್ಯ ನಿರ್ವಹಣೆ ಸಾಧ್ಯವಾಗದೆ ಇರಬಹುದು. ಇದರಿಂದ ಅವರಿಗೆ ಪೊಲೀಸರ ಬಗ್ಗೆ ಹೆದರಿಕೆ ಹೋಗಿದೆ ಎಂಬುದು ಜನರ ಅಭಿಪ್ರಾಯ.

ಮಾರುಕಟ್ಟೆ ಜಾಗ ಖಾಸಗಿ ವ್ಯಕ್ತಿ ವಶಕ್ಕೆ

ಪ್ರಾಧಿಕಾರಕ್ಕೆ ಸೇರಿದ್ದು ಎಂದು ಪ್ರತಿಪಾದಿಸಿದ ಕಾರಣ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತ್ತು. ಸುದೀರ್ಘ ಕಾಲ ನಡೆದ ಪ್ರಕರಣದ ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ಕಳೆದ ಅ.22ರಂದು ತೀರ್ಪು ನೀಡಿದ್ದು, ಈ ತೀರ್ಪಿನಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ 80 ಎಕರೆ ಭೂಮಿ ಮಾತ್ರ ಸೇರಿದೆ ಎಂದು ಸ್ಪಷ್ಟವಾಗಿ ತೀರ್ಪಿನಲ್ಲಿ ತಿಳಿಸಿದ್ದಾರೆ.

ಹೈಕೋರ್ಟ್ ಆದೇಶವೊಂದನ್ನು ಉಲ್ಲೇಖಿಸಿ ವಿಜಯಕುಮಾರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಓ. ಶ್ಯಾಂಭಟ್ ಅವರ ವಾದವನ್ನು ಪುರಸ್ಕರಿಸಿದ ನ್ಯಾಯಾಧೀಶರು 145 ಎಕರೆ 13 ಗುಂಟೆ ಭೂಮಿ ಪೈಕಿ ಕರ್ನಾಟಕ ವಸ್ತುಪ್ರದರ್ಶನಕ್ಕೆ ಸೇರಿದ 80 ಎಕರೆ ಹೊರತುಪಡಿಸಿ ಉಳಿದ ಭೂಮಿ ಮೈಸೂರು ಮಹಾರಾಜರಿಗೆ ಸೇರಿದ್ದಾಗಿದ್ದು, ರಾಜವಂಶಸ್ಥರಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಆದಾಯ ತೆರಿಗೆ ಬಾಕಿ ವಸೂಲಾತಿಗಾಗಿ ಆದಾಯ ತೆರಿಗೆ ಇಲಾಖೆ ಹರಾಜು ಮಾಡಿದ ಭೂಮಿಯನ್ನು ಖರೀದಿಸಿದ ವಿಜಯಕುಮಾರ್ ಅವರು 2 ಎಕರೆ ಭೂಮಿಯ ಹಕ್ಕು ಬಾಧ್ಯತೆ ಹೊಂದಿದ್ದಾರೆ. ಸಂವಿಧಾನದ ಕಲಂ 363ರಂತೆ ವಿಜಯ ಕುಮಾರ್ ಅವರಿಗೆ ಈ ಎರಡು ಎಕರೆ ಭೂಮಿಯ ಮೇಲಿರುವ ಹಕ್ಕುಬಾಧ್ಯತೆಯನ್ನು ರಾಜ್ಯ ಸರ್ಕಾರ ಸೇರಿದಂತೆ ಯಾವುದೇ ಸಂಸ್ಥೆಯೂ ಪ್ರಶ್ನಿಸುವಂತಿಲ್ಲ ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಇದೇ ರೀತಿ ರಾಜವಂಶಸ್ಥರಿಂದ ಮೈಸೂರಿನ ಹೋಟೆಲ್ ಉದ್ಯಮಿ ಧರ್ಮಪ್ರಕಾಶ್ ಅವರು ಖರೀದಿಸಿರುವ ಆಸ್ತಿ ಕೂಡ ಮಹಾರಾಜರದ್ದಾಗಿದ್ದು, ಈ ಆಸ್ತಿ ಮೇಲೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ ಯಾವುದೇ ರೀತಿಯ ಹಕ್ಕಿಲ್ಲ. ಹೀಗಾಗಿ ಆಸ್ತಿಯನ್ನು ರಾಜವಂಶಸ್ಥರಿಂದ ಖರೀದಿಸಿರುವ ಧರ್ಮಪ್ರಕಾಶ್ ಅವರೇ ಸದರಿ ಆಸ್ತಿಯ ಹಕ್ಕುಬಾಧ್ಯತೆ ಹೊಂದಿದ್ದಾರೆ ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಇವೆರಡೂ ಪ್ರಕರಣಗಳಲ್ಲಿ, ವಿಜಯ ಕುಮಾರ್ ಮತ್ತು ಧರ್ಮಪ್ರಕಾಶ್ ಪರವಾಗಿ ಹಿರಿಯ ವಕೀಲ ಓ. ಶ್ಯಾಂಭಟ್ ವಾದ ಮಂಡಿಸಿದ್ದರು.

ಬೈಸಿಕಲ್ ವಿತರಣೆ: ಶೀಘ್ರ ನಿರ್ಧಾರ

ವಿದ್ಯಾರ್ಥಿಗಳಿಗೆ ಕೇಂದ್ರ ಪ್ರಾಯೋಜಿತ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ ಅಡಿಯಲ್ಲಿ ತಮ್ಮ ವ್ಯಾಪ್ತಿಯನ್ನು ಮೀರಿದ ಶಾಲೆಗಳಿಗೆ ಕ್ರಮಿಸಲು ಪ್ರತಿ ವಿದ್ಯಾರ್ಥಿಗೆ ಮಾಹೆಯಾನ 600 ರೂ.ಗಳಂತೆ ಆರು ತಿಂಗಳಿಂದ ಸಾರಿಗೆ ಭತ್ಯೆ ನೀಡಲಾಗುತ್ತಿದೆ ಎಂದರು.

ಶೂ, ಸಾಕ್ಸ್ ವಿತರಣೆ: ರಾಜ್ಯದಲ್ಲಿ 1ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರಕಾರಿ ಶಾಲಾ ಮಕ್ಕಳಿಗೆ ವಿದ್ಯಾ ವಿಕಾಸ ಯೋಜನೆ ಅಡಿ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್ ಉಚಿತವಾಗಿ ನೀಡಲಾಗುತ್ತಿದೆ ಎಂದರು.

ಕೊಠಡಿ ನಿರ್ಮಾಣ: 2020–21ರಿಂದ 2022–23ನೇ ಸಾಲಿನವರೆಗೆ 7,098 ಶಾಲೆಗಳಿಗೆ 9,604 ಕೊಠಡಿಗಳ ನಿರ್ಮಾಣ ಹಾಗೂ ಇತರೆ ಕಾಮಗಾರಿಗಳಿಗೆ ಒಟ್ಟು 12,9768.90 ಲಕ್ಷ ರೂ. ನಿಗದಿಯಾಗಿದ್ದು, ರೂ.9450.139 ಲಕ್ಷ ಬಿಡುಗಡೆ ಮಾಡಿ ಕ್ರಮವಹಿಸಲಾಗಿದೆ ಎಂದರು. ಯು.ಬಿ. ವೆಂಕಟೇಶ್ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕೊಠಡಿಗಳ ನಿರ್ಮಾಣಕ್ಕೆ ಕೊರತೆ ಅನುದಾನವನ್ನು 2023–24ನೇ ಸಾಲಿನಲ್ಲಿ ಒದಗಿಸಲು ಕ್ರಮವಹಿಸಲಾಗಿದೆ ಎಂದರು.

ಜೆಎಸ್‌ಎಸ್ ಮೆಡಿಕಲ್ ಕಾಲೇಜಿನಲ್ಲಿ ವಿಧಿ ವಿಜ್ಞಾನ ವಸ್ತುಪ್ರದರ್ಶನ ಆರಂಭ

ನಗರ ಪೊಲೀಸ್ ಆಯುಕ್ತರಿಂದ ಉದ್ಘಾಟನೆ, ಸಾವಿರಾರು ವಿದ್ಯಾರ್ಥಿಗಳಿಂದ ವೀಕ್ಷಣೆ





ಮೈಸೂರು, ಡಿ.7(ಆರ್‌ಕೆ)– ಮೈಸೂರಿನ ಶ್ರೀ ಶಿವರಾತ್ರೀಶ್ವರ ನಗರದಲ್ಲಿರುವ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಎರಡು ದಿನಗಳ ಫೊರೆನ್ಸಿಕ್ (ವಿಧಿ ವಿಜ್ಞಾನ) ವಸ್ತು ಪ್ರದರ್ಶನ ಇಂದಿನಿಂದ ಆರಂಭವಾಯಿತು.

ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮೈಸೂರು ನಗರ ಸಂಚಾರ ಪೊಲೀಸ್, ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ, ಫಾರ್ಮಸಿ ಕಾಲೇಜು, ಕ್ಲಿನಿಕಲ್ ಫಾರ್ಮಸಿ ವಿಭಾಗ ಹಾಗೂ ಪ್ರಾದೇಶಿಕ ವಿಧಿ ವಿಜ್ಞಾನ ಪ್ರಯೋಗಾಲಯಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಫೋರೆನ್ಸಿಕ್ ಫೇರ್ ಅನ್ನು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಉದ್ಘಾಟಿಸಿದರು.

ಕೊಲೆ, ಸುಲಿಗೆ, ದರೋಡೆ, ಆತ್ಮಹತ್ಯೆಯಂತಹ ಅಪರಾಧ ಕೃತ್ಯಗಳು ಸಂಭವಿಸಿದಾಗ ಸ್ಥಳದಲ್ಲಿ ಲಭ್ಯವಾಗುವ ಸುಳಿವಿನ ಸಾಕ್ಷ್ಯಾಧಾರಗಳನ್ನು ಬಳಸಿ ತನಿಖೆಗೆ ಅನುಕೂಲವಾಗುವಂತಹ ಉಪಕರಣಗಳು, ಪರೀಕ್ಷಾ ವಿಧಾನಗಳ ಬಗ್ಗೆ ವರದಿ ಸಿದ್ಧಪಡಿಸುವ ಕ್ರಮದ ಕುರಿತಂತೆ ಪ್ರಾದೇಶಿಕ ವಿಧಿ ವಿಜ್ಞಾನ ಪ್ರಯೋಗಾಲಯವು ಮಾಹಿತಿ ನೀಡುತ್ತಿದೆ.

ಪೊಲೀಸ್ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಬಳಸುವ ಶಸ್ತ್ರಾಸ್ತ್ರಗಳು, ಗುಂಡುಗಳು, ಮನುಷ್ಯನ ದೇಹದೊಳಗೆ ಹೊಕ್ಕಿದ ಗುಂಡುಗಳ ವಿಶಿಷ್ಟ ಲಕ್ಷಣಗಳು, ಶಸ್ತ್ರಾಸ್ತ್ರಗಳನ್ನು ಬಳಸುವ ವಿಧಾನದ ಬಗ್ಗೆ ಹಾಗೂ ತರಬೇತಿ ಅವಧಿಯಲ್ಲಿ ನೀಡಲಾಗುವ ಪ್ರಾತ್ಯಕ್ಷಿಕೆ ಬಗೆಗೆ ಕರ್ನಾಟಕ ಪೊಲೀಸ್ ಅಕಾಡೆಮಿಯ ಅಧಿಕಾರಿಗಳು ವಸ್ತುಪ್ರದರ್ಶನದಲ್ಲಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುತ್ತಿದ್ದಾರೆ.

ಸೈಬರ್ ಕ್ರೈಂ, ಆನ್‌ಲೈನ್ ವಂಚನೆ ಪ್ರಕರಣಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಆರೋಪಿಗಳನ್ನು ಪತ್ತೆ ಮಾಡಿ ಹಣ ವಶಪಡಿಸಿಕೊಳ್ಳುವ ವಿಧಾನದ ಬಗ್ಗೆ ಸೆನ್ ಪೊಲೀಸ್ ಠಾಣೆ ಅಧಿಕಾರಿಗಳು ಸಾರ್ವಜನಿಕರಿಗೆ ಅರಿವು ಮೂಡಿಸುತ್ತಿದ್ದು, ಯಾವುದೇ ಅಪರಿಚಿತ ವ್ಯಕ್ತಿಗಳು ಕೇಳಿದರೂ ನಿಮ್ಮ ವೈಯಕ್ತಿಕ ಮಾಹಿತಿಗಳನ್ನು ಕೊಡಬೇಡಿ. ಪಾಸ್‌ವರ್ಡ್, ಪಾನ್ ಸಂಖ್ಯೆ, ಪಿನ್ ನಂಬರ್, ಆಧಾರ್ ಸಂಖ್ಯೆ, ಬ್ಯಾಂಕ್ ಅಕೌಂಟ್ ನಂಬರ್, ಕ್ರೆಡಿಟ್, ಡೆಬಿಟ್ ಕಾರ್ಡ್ ಮಾಹಿತಿ ನೀಡಬೇಡಿ ಎಂಬ ಸಂದೇಶವನ್ನು ವಸ್ತುಪ್ರದರ್ಶನದಲ್ಲಿ ನೀಡುತ್ತಿದ್ದಾರೆ.

ದಂತ ಸಾಕ್ಷ್ಯಾಧಾರ, ಅಪರಾಧ ಸ್ಥಳದ ಪರೀಕ್ಷೆ, ಬೆರಳಚ್ಚು ಮುದ್ರೆ, ಹಸ್ತಾಕ್ಷರ ವೀಕ್ಷಣೆ, ವಿಧಿ ವಿಜ್ಞಾನ, ಆಹಾರ ಕಲಬೆರಕೆಯಾಗುವುದು, ಪತ್ತೆ ಮಾಡುವ ವಿಧಾನವನ್ನು ಆಹಾರ, ಪೌಷ್ಟಿಕತೆ ಮತ್ತು ಪಥ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಸ್ಥಳದಲ್ಲೇ ಪ್ರಾತ್ಯಕ್ಷಿಕೆ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ.

ವಸ್ತುಪ್ರದರ್ಶನ ಉದ್ಘಾಟಿಸಿದ ಬಿ. ರಮೇಶ್ ಅವರು ಎಲ್ಲಾ 9 ಮಳಿಗೆಗಳಿಗೂ ತೆರಳಿ ಪ್ರಾಧ್ಯಾಪಕರು, ಪೊಲೀಸರು ಹಾಗೂ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದುಕೊಂಡರು. ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಹೆಚ್.ಬಸವನಗೌಡಪ್ಪ, ನ್ಯಾ. ವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಹೆಚ್.ವಿ.ಚಂದ್ರಕಾಂತ್, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ. ಬಿ.ಮಂಜುನಾಥ್, ಪ್ರಾಧ್ಯಾಪಕರಾದ ಡಾ. ಎಂ.ಅರುಣ್, ಡಾ. ಜಿ.ಬಿ.ಅರವಿಂದ್, ಡಾ. ಸ್ಮಿತಾರಾಣಿ, ಎನ್.ಆರ್. ಉಪ ವಿಭಾಗದ ಎಸಿಪಿ ಸಿ.ಕೆ. ಅಶ್ವತ್ಥನಾರಾಯಣ, ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ್ ತಳವಾರ, ಸೆನ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನ ಕುಮಾರ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು. ಮೈಸೂರಿನ ವಿವಿಧ ಶಾಲೆಗಳ ಸಾವಿರಾರು ವಿದ್ಯಾರ್ಥಿಗಳು ವಸ್ತು ಪ್ರದರ್ಶನಕ್ಕೆ ಭೇಟಿ ನೀಡಿ ವೀಕ್ಷಿಸಿ ಮಾಹಿತಿ ಪಡೆದುಕೊಂಡರು. ನಾಳೆ (ಡಿ. 8) ಸಂಜೆ 4 ಗಂಟೆಗೆ ವಸ್ತುಪ್ರದರ್ಶನ ಅಂತ್ಯಗೊಳ್ಳಲಿದೆ.



ಡಿ.10ರಂದು ಕ್ಯಾರಲ್ ಗೀತೆಗಳ ಗಾಯನ ಸ್ಪರ್ಧೆ



ಮೈಸೂರು,ಡಿ.7(ಎಂಟಿವೈ)– ಮೈಸೂರಿನ ಸಿದ್ಧಾರ್ಥನಗರದ ಟೆರೆಷಿಯನ್ ಕಾಲೇಜು ಸಭಾಂಗಣದಲ್ಲಿ ಡಿ. 10ರಂದು ಬೆಳಗ್ಗೆ 8.30ಕ್ಕೆ ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಕ್ಯಾರಲ್ ಗೀತೆಗಳ ಗಾಯನ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಕಾರ್ಮೆಲ್ ಕ್ಯಾಥೊಲಿಕ್ ಸಂಸ್ಥೆಯ ಸದಸ್ಯ ಸದೆ ಬೋಸ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ವತಿಯಿಂದ ಹಲವು ವರ್ಷಗಳಿಂದ ಕ್ರಿಸ್‌ಮಸ್ ಅಂಗವಾಗಿ ಕ್ಯಾರಲ್ ಗೀತ ಗಾಯನ ಸ್ಪರ್ಧೆ ನಡೆಸುತ್ತಾ ಬಂದಿದೆ. ಈ ಬಾರಿ 30 ರಿಂದ 40 ಮಂದಿ ಗಾಯಕರು ಒಳಗೊಂಡ 100 ಕ್ಕೂ ಹೆಚ್ಚು ತಂಡಗಳು ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿವೆ. 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರು' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಧರ್ಮಸಭೆಯ ರೆ. ಡಾ.ಬರ್ನಾರ್ಡ್ ಮೊರಾಸ್, ಸಿಸಿಎ ಸಲಹೆಗಾರ ರೆ.ಫಾ.ರಿಜೊ ಥಾಮಸ್ ಹಾಗೂ ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಅಧ್ಯಕ್ಷ ಪ್ರೊ.ಜೋಸೆಫ್ ಮ್ಯಾಥ್ಯೂ ಉಪಸ್ಥಿತರಿರುತ್ತಾರೆ ಎಂದರು.

ಅಂದು ಸಂಜೆ 6.30ಕ್ಕೆ ಸ್ಪರ್ಧೆಯ ಸಮಾರೋಪ ಸಮಾರಂಭ ನಡೆಯಲಿದ್ದು, ಮೈಸೂರು ವಿವಿ ಕುಲಪತಿ ಪ್ರೊ.ಕೆ.ಎಸ್. ಲೋಕನಾಥ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಮಂಡ್ಯ ಬಿಷಪ್ ಸೆಬಾಸ್ಟಿಯನ್ ಅಡ್ಯಾಂತರತ್ ಕ್ರಿಸ್ಮಸ್ ಸಂದೇಶ ನೀಡಲಿದ್ದಾರೆ. ಸಂಘದ ಅಧ್ಯಕ್ಷ ಪ್ರೊ. ಜೋಸೆಫ್ ಮ್ಯಾಥ್ಯೂ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಿಸಿಎ ಅಧ್ಯಕ್ಷ ಪ್ರೊ. ಜೋಸೆಫ್ ಮ್ಯಾಥ್ಯೂ, ಪದಾಧಿಕಾರಿಗಳಾದ ಜಾನ್ಸನ್ ಚೌರಶೀರಿ, ಎಂ.ಕೆ. ಜಾನಿ, ಜೋಸೆಫ್ ಚಾಕೋ ಇದ್ದರು.

ನಾಳೆ 'ಒಡಲು ಟ್ರಸ್ಟ್' ಉದ್ಘಾಟನೆ



ಮೈಸೂರು,ಡಿ.7(ಎಂಟಿವೈ)– ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಡಿ.9ರಂದು ಬೆಳಗ್ಗೆ 10.30ಕ್ಕೆ ನೂತನವಾಗಿ ಸ್ಥಾಪಿಸಿರುವ 'ಒಡಲು ಟ್ರಸ್ಟ್' ಉದ್ಘಾಟನೆ ಹಾಗೂ 'ವಿಚಾರ ಮಂಥನ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಒಡಲು ಟ್ರಸ್ಟ್ ಕಾರ್ಯದರ್ಶಿ ಕೆ.ಎನ್.ಶಿವಲಿಂಗಯ್ಯ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶೋಷಿತ ಸಮುದಾಯ ಹಾಗೂ ಬಡಕುಟುಂಬದ ಜನರಿಗೆ ಸಂವಿಧಾನದ ಆಶಯದೊಂದಿಗೆ ಸಾಮಾಜಿಕ ನ್ಯಾಯ ಒದಗಿಸಲು ನೂತನವಾಗಿ ಒಡಲು ಟ್ರಸ್ಟ್ ಸ್ಥಾಪಿಸಲಾಗಿದೆ. ಟ್ರಸ್ಟ್ ವಿವಿಧ ಕಾರ್ಯಕ್ರಮದ ಮೂಲಕ ಬಡ ಕುಟುಂಬದ ಜನ ಹಾಗೂ ಶೋಷಿತ ಸಮುದಾಯ ಪರ ಹೋರಾಟ ನಡೆಸಲಿದೆ. ಉತ್ತಮ ಉದ್ದೇಶದಿಂದ ಸ್ಥಾಪಿಸಿರುವ ಒಡಲು ಟ್ರಸ್ಟ್ ಅನ್ನು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಲ್.ನಾರಾಯಣಸ್ವಾಮಿ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಪ್ರಾತಿಪರ ಚಿಂತಕಿ ಡಾ.ಕವಿತಾ ರೈ 'ಮಹಿಳಾ ಮೀಸಲಾತಿ–ಸವಾಲು ಮತ್ತು ಸಾಧ್ಯತೆಗಳು' ಕುರಿತು ವಿಷಯ ಮಂಡಿಸಲಿದ್ದಾರೆ. ಜಾತಿ ಜನಗಣತಿ–ಅನಿವಾರ್ಯತೆ ಮತ್ತು ಸಾಮಾಜಿಕ ನ್ಯಾಯ ವಿಷಯ ಕುರಿತು ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಕೆ.ಎನ್.ಲಿಂಗಪ್ಪ ಮಾತನಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಟ್ರಸ್ಟ್ ಅಧ್ಯಕ್ಷ ಆರ್.ಎಸ್.ದೊಡ್ಡಣ್ಣ ವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಒಡಲು ಟ್ರಸ್ಟ್ ಅಧ್ಯಕ್ಷ ಆರ್.ಎಸ್. ದೊಡ್ಡಣ್ಣ, ಧರ್ಮದರ್ಶಿ ಕುಪ್ಪೆ ನಾಗರಾಜು, ಸಂಸ್ಥಾಪಕ ಧರ್ಮದರ್ಶಿಗಳಾದ ಪ್ರೊ. ಕುಮಾರಸ್ವಾಮಿ, ಹೆಚ್.ಎಂ.ಪುಟ್ಟಮಾದಯ್ಯ ಇದ್ದರು.

ಎಂ.ಬಿ.ಅನಂತಸ್ವಾಮಿ ಜನ್ಮ ಶತಮಾನೋತ್ಸವ



ಮೈಸೂರು,ಡಿ.7(ಎಂಟಿವೈ)– ಮೈಸೂರಿನ ಪುರಭವನದಲ್ಲಿ ಡಿ.10ರಂದು ಬೆಳಗ್ಗೆ 10.30ಕ್ಕೆ ಎಂ.ಬಿ. ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್‌ನ ದ್ವಿತೀಯ ವಾರ್ಷಿಕೋತ್ಸವ ಹಾಗೂ ಎಂ.ಬಿ. ಅನಂತಸ್ವಾಮಿ ಜನ್ಮ ಶತಮಾನೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನಿರ್ದೇಶಕಿ ಛಾಯಾದೇವಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಮಂಡಿಮೊಹಲ್ಲಾದಲ್ಲಿ ಕಚೇರಿ ಹೊಂದಿರುವ ಎಂ.ಬಿ. ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್ ಕಳೆದ ಎರಡು ವರ್ಷದಿಂದ ವಿವಿಧ ಕಾರ್ಯಕ್ರಮ ನಡೆಸುತ್ತಾ ಬಂದಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸೇವಾ ಕಾರ್ಯಕ್ರಮ ರೂಪಿಸಲಾಗುತ್ತದೆ. ಡಿ.10ರಂದು ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ. ಈ ವೇಳೆ ಯೋಗನರಸಿಂಹಸ್ವಾಮಿ ದೇವಾಲಯ ಸಂಸ್ಥಾಪಕರಾದ ಡಾ. ಭಾಷ್ಯಂ ಸ್ವಾಮೀಜಿ, ಸಂಸದ ಪ್ರತಾಪ್‌ಸಿಂಹ, ಶಾಸಕ ಕೆ.ಹರೀಶ್‌ಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಿ. ಸುದರ್ಶನ್, ಮಾಜಿ ಮೇಯರ್ ಶಿವಕುಮಾರ್, ಅಂಧ ಮಕ್ಕಳ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ ಸತೀಶ್ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ನಾಟಕ ನಿರ್ದೇಶಕ ನಾಗೇಂದ್ರ ಪ್ರಸಾದ್, ನಾದಸ್ವರ ವಾದಕ ರಂಗಸ್ವಾಮಿ, ಮೃದಂಗ ಕಲಾವಿದ ಎಂ.ಆರ್.ಮಂಜುನಾಥ್, ವೀಣಾವಾದಕ ಆರ್. ಕೆ.ಪದ್ಮನಾಭ, ತಬಲಾ ವಾದಕ ರಮೇಶ್ ಧನೂರ್, ಕೀಬೋರ್ಡ್ ವಾದಕ ಗಣೇಶ್ ಭಟ್ ಹಾಗೂ ಹರಿಕಥೆ ವಿದ್ವಾಂಸ ಬಿಳಿಕೆರೆ ಬಿ.ಎಸ್.ಗಂಗಾಧರ ಆಚಾರ್ ಅವರನ್ನು ಸನ್ಮಾನಿಸಲಾಗುತ್ತದೆ. ಬಳಿಕ ಸಂಜೆ 7.30ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಂ.ಬಿ. ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್ ಅಧ್ಯಕ್ಷ ಕಾಂತರಾಜು, ಚಂದ್ರು, ಜಯಲಕ್ಷ್ಮಿ, ಸುಗುಣ, ನವೀನ್ ಇದ್ದರು.

ಇಂದಿನಿಂದ ಪಂಚಭೂತ ನವಗ್ರಹ ಧ್ಯಾನ ಶಿಬಿರ

ಮೈಸೂರು,ಡಿ.7(ಎಂಟಿವೈ)– ಮೈಸೂರು ಬೃಂದಾವನ ಸ್ಕೈ ಟ್ರಸ್ಟ್‌ನ 25ನೇ ವಾರ್ಷಿಕೋತ್ಸವದ ಅಂಗವಾಗಿ ಡಿ.8ರಿಂದ 15 ರವರೆಗೆ ಸಾರ್ವಜನಿಕರಿಗೆ ಉಚಿತವಾಗಿ ಪಂಚಭೂತ ನವಗ್ರಹ ಧ್ಯಾನ ಆಯೋಜಿಸಲಾಗಿದೆ ಎಂದು ಟ್ರಸ್ಟ್‌ನ ಸದಸ್ಯೆ ಪ್ರೊ. ಶಿವಕಾಮೇಶ್ವರಿ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೋಗಾದಿ ಬಡಾವಣೆಯಲ್ಲಿನ ಮೈಸೂರು ಬೃಂದಾವನ ಸ್ಕೈ ಟ್ರಸ್ಟ್ ವತಿಯಿಂದ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾ ಭವನದ ಪಕ್ಕದಲ್ಲಿರುವ ಶಿವಾನಂದ ಜ್ಞಾನಾಲಯದಲ್ಲಿ ಡಿ.8ರಿಂದ 15ರವರೆಗೆ ಪ್ರತಿದಿನ ಸಂಜೆ 5.30 ರಿಂದ ರಾತ್ರಿ 8ರವರೆಗೆ ಪಂಚಭೂತ ನವಗ್ರಹ ಧ್ಯಾನ ಶಿಬಿರ ನಡೆಯಲಿದೆ. ಈ ಶಿಬಿರದಲ್ಲಿ ವಿಶ್ವ ಸಮುದಾಯ ಸೇವಾ ಸಂಘದ ಕರ್ನಾಟಕ ವಲಯ ಅಧ್ಯಕ್ಷ ಡಾ.ಪಿ.ಧನಪತಿ, ಉಪಾಧ್ಯಕ್ಷೆ ಡಾ.ವಿಜಯ ಧನಪತಿ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರೊ.ಪಿ. ಧನಪತಿ, ಪ್ರೊ. ವಿಜಯಾ ಧನಪತಿ, ಶ್ರೀನಿವಾಸ್ ಅಯ್ಯರ್, ಪ್ರೊ. ದೇವರಾಜು, ಪ್ರೊ. ಕನಕಲತ ಇದ್ದರು.

ಕೃತಕ ಬುದ್ಧಿಮತ್ತೆ ಪರಿಚಯವಾದರೆ ವೈದ್ಯಕೀಯ ಚಿಕಿತ್ಸಾ ಕ್ಷೇತ್ರಕ್ಕೆ ಭಾರಿ ವೇಗ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮುಖ್ಯಸ್ಥ ಸಂಜಯ್ ಕುಮಾರ್ ವರ್ಷ್ನಿ ಅಭಿಪ್ರಾಯ

ಮೈಸೂರು, ಡಿ.7(ಬಿಎಲ್‌ಯು)– ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಪೂರ್ಣ ಪರಿಚಯವಾದರೆ ವೈದ್ಯಕೀಯ ಚಿಕಿತ್ಸಾ ಕ್ಷೇತ್ರ ಭಾರಿ ವೇಗ ಪಡೆಯಲಿದೆ ಎಂದು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮುಖ್ಯಸ್ಥ ಸಂಜಯ್ ಕುಮಾರ್ ವರ್ಷ್ನಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಇಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಸ್ಕೂಲ್ ಆಫ್ ಸೈನ್ಸ್ ಹಾಗೂ ಲೈಫ್ ಸೈನ್ಸಸ್ ವಿಭಾಗ ಆಯೋಜಿಸಿದ್ದ ಜೈವಿಕ ತಂತ್ರಜ್ಞಾನದ ಸುಸ್ಥಿರ ಅಭಿವೃದ್ಧಿಯಲ್ಲಿ ಒಂದು ಆರೋಗ್ಯ ಕುರಿತ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ವೈದ್ಯಕೀಯ ಚಿಕಿತ್ಸಾ ಕ್ಷೇತ್ರದ ಕಾರ್ಯ ವಿಧಾನದಲ್ಲಿ ಸಮಯ ವ್ಯರ್ಥವಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕೃತಕ ಬುದ್ಧಿಮತ್ತೆ ಪರಿಚಯವಾದರೆ ವೈದ್ಯಕೀಯ ಚಿಕಿತ್ಸೆಯಲ್ಲಿ ಬಹಳಷ್ಟು ಬದಲಾವಣೆಯಾಗಲಿದೆ ಎಂದು ಅಭಿಪ್ರಾಯಪಟ್ಟರು.



ಕೃತಕ ಬುದ್ಧಿಮತ್ತೆ ಪರಿಚಯವಾದರೆ ವೈದ್ಯಕೀಯ ಕ್ಷೇತ್ರ ವೇಗ ಪಡೆಯುತ್ತದೆ. ಆ ವೇಳೆ ವೈದ್ಯಕೀಯ ಕ್ಷೇತ್ರದಲ್ಲಿ ಏನೆಲ್ಲಾ ಬದಲಾವಣೆ ಆಗುತ್ತದೆ ಎಂಬುದನ್ನು ಕಾತುರದಿಂದ ಎಲ್ಲರೂ ಎದುರು ನೋಡುತ್ತಿದ್ದೇವೆ ಎಂದು ಹೇಳಿದರು.

ಮನುಷ್ಯ ವೈದ್ಯಕೀಯ ಚಿಕಿತ್ಸಾ ಕ್ಷೇತ್ರವನ್ನು ತನಗೆ ಸೀಮಿತಗೊಳಿಸಿ ನೋಡಬಾರದು. ಪ್ರಾಣಿಗಳನ್ನು ಒಳಗೊಂಡಂತೆ ಸಂಶೋಧಿಸಬೇಕು. ಉದಾಹರಣೆಗೆ ಹೇಳುವುದಾದರೆ, ಕೊರೊನಾ ಸಮಯದಲ್ಲಿ ವೈದ್ಯಕೀಯ ಚಿಕಿತ್ಸೆಯ ಸಂಶೋಧನೆಯನ್ನು ಮನುಷ್ಯ ತನಗೆ ಸೀಮಿತಗೊಳಿಸಿ ನೋಡದೆ, ಪ್ರಾಣಿಗಳನ್ನು ಒಳಗೊಂಡಂತೆ ಸಂಶೋಧಿಸಿದನು. ಈ ಮೂಲಕ ಮಾರಣಾಂತಿಕ ರೋಗಗಳಿಂದ ಪ್ರಾಣಿಗಳನ್ನು ಕಾಪಾಡುವ ನಿಟ್ಟಿನಲ್ಲಿ ಸಂಶೋಧನೆ ಅತ್ಯವಶ್ಯವಿದೆ ಎಂದು ಸಲಹೆ ನೀಡಿದರು.

ಜೈವಿಕ ತಂತ್ರಜ್ಞಾನ ಕುರಿತಂತೆ ಸರ್ಕಾರ ಹಲವು ಕಾರ್ಯಕ್ರಮ ರೂಪಿಸುತ್ತದೆ. ಆದರೆ ಇದು ಸರ್ಕಾರದ ಕಾರ್ಯಕ್ರಮವಾಗದೆ, ಇಡೀ ಸಮಾಜದ ಕಾರ್ಯಕ್ರಮವಾಗಬೇಕು. ಈ ಕಾರ್ಯಕ್ರಮ ಅನುಷ್ಠಾನಗೊಳ್ಳಲು ಜನರು ಕೈ ಜೋಡಿಸಬೇಕು ಎಂದು ಸಂಜಯ್ ಕುಮಾರ್ ವರ್ಷ್ನಿ ಸಲಹೆ ನೀಡಿದರು.

ಬೆಂಗಳೂರಿನ ಐಬಿಎಂ ಉಪಾಧ್ಯಕ್ಷ ಇಮಾಂಶು ಗೋಯಲ್, ಡೆನ್ಮಾರ್ಕ್‌ನ ಕೋಪೆಂಗನ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ.ಹ್ಯಾನ್ಸ್ ಜೋರ್ಗೆನ್ ಲಿಂಗ್ಸ್ ಜೋರ್ಗೆನ್ಸನ್, ಬೆಂಗಳೂರಿನ ಐಐಎಸ್ಸಿ ಆರೋಗ್ಯ ರಕ್ಷಣೆಯ ಸಲಹೆಗಾರ ಪ್ರೊ. ವಿಜಯ್ ಚಂದ್ರ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಜೆಎಸ್‌ಎಸ್ ಅಕಾಡೆಮಿಯ ಲೈಫ್ ಸೈನ್ಸಸ್ ವಿಭಾಗದ ಡೀನ್ ಪ್ರೊ.ಕೆ.ಎ.ರವೀಶ್, ಸಂಘಟನಾ ಕಾರ್ಯದರ್ಶಿಗಳಾದ ಡಾ.ಟಿ.ಎಸ್. ಗೋಪಿನಾಥ್, ಡಾ.ಎಂ.ಎನ್.ಕಿರಣ್ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

> "ವೈದ್ಯಕೀಯ ಚಿಕಿತ್ಸೆಯಲ್ಲಿ ಕೃತಕ ಬುದ್ಧಿಮತ್ತೆ ಪಾತ್ರದ ಬಗ್ಗೆ ವಿಶ್ವದಲ್ಲಿ ಬಹಳಷ್ಟು ಸಂಶೋಧನೆ ನಡೆಯುತ್ತಿದೆ. ಈ ಸಂಶೋಧನೆ ಯಶಸ್ವಿಯಾದರೆ ಅನಿರೀಕ್ಷಿತವಾದ ಬದಲಾವಣೆಗಳಾಗುತ್ತದೆ. ಈ ಕಾರಣದಿಂದ ಸಂಶೋಧನೆಯ ನಂತರ ಬರುವ ಫಲಿತಾಂಶದ ಬಗ್ಗೆ ಎಲ್ಲರಿಗೂ ಕಾತುರವಿದೆ.
> -ಸಂಜಯ್ ಕುಮಾರ್ ವರ್ಷ್ನಿ, ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮುಖ್ಯಸ್ಥ



ರಶ್ಮಿಕಾ ಮಂದಣ್ಣರ ಅನಿಮಲ್

ಸಂದೀಪ್‌ರೆಡ್ಡಿ ವಂಗಾ ನಿರ್ದೇಶನದ, ರಣ್‌ಬೀರ್ ಕಪೂರ್, ಕನ್ನಡತಿ ರಶ್ಮಿಕಾ ಮಂದಣ್ಣ ಪ್ರಮುಖ ಪಾತ್ರದಲ್ಲಿ ನಟಿಸಿರುವ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾ 'ಅನಿಮಲ್' ಚಿತ್ರದ ಪ್ರಮೋಷನ್‌ಗಾಗಿ ಕೆ.ವಿ.ಎನ್.ಸಂಸ್ಥೆ ವತಿಯಿಂದ ಸುದ್ದಿಗೋಷ್ಠಿ ಏರ್ಪಡಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಚಿತ್ರತಂಡ ಬೆಂಗಳೂರಿಗೆ ಆಗಮಿಸಿ ಚಿತ್ರದ ಬಗ್ಗೆ ಮಾಹಿತಿ ಹಂಚಿಕೊಂಡಿತು. ನಟ ರಣಬೀರ್ ಕಪೂರ್ ಮಾತನಾಡಿ, ಇದೊಂದು ವಿಭಿನ್ನವಾದ ಸಿನಿಮಾ. ತಂದೆ-ಮಗನ ಬಾಂಧವ್ಯದ ಜೊತೆಗೆ ಹಿಂಸೆ ಮತ್ತು ಕ್ರೌರ್ಯಕ್ಕೆ ಒತ್ತು ನೀಡಿದ್ದಾರೆ. ನಿರ್ದೇಶಕ ಸಂದೀಪ್‌ರೆಡ್ಡಿ ವಂಗಾ. ಸೆಂಟಿಮೆಂಟ್ ಅಥವಾ ಹಿಂಸೆಗೆ ಎಷ್ಟು ಪ್ರಾಧಾನ್ಯತೆ ನೀಡಲಾಗಿದೆ ಎಂಬುದನ್ನು ಚಿತ್ರದಲ್ಲಿ ನೋಡಬೇಕು ಎಂದರು. ಹಿರಿಯ ನಟರಾದ ಅನಿಲ್‌ಕಪೂರ್ ಮತ್ತು ಬಾಬಿ ಡಿಯೋಲ್ ಅವರ ಜೊತೆ ನಟನೆ ಮಾಡಿದ್ದು ಒಳ್ಳೆಯ ಅನುಭವ. ಜೊತೆಗೆ ರಶ್ಮಿಕಾ ಮಂದಣ್ಣ ಪಾತ್ರಕ್ಕೆ ಜೀವ ತುಂಬಿದ್ದಾರೆ ಎಂದು ಹೇಳಿದರು. ನಟಿ ರಶ್ಮಿಕಾ ಮಂದಣ್ಣ ಮಾತನಾಡಿ, 'ಅನಿಮಲ್' ಚಿತ್ರದಲ್ಲಿ ನಾನು ರಣಬೀರ್ ಕಪೂರ್ ಅವರ ಹೆಂಡತಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಇದೊಂದು ವಿಭಿನ್ನವಾದ ಪಾತ್ರ. ನಿರ್ದೇಶಕರ ಕಲ್ಪನೆಗೆ ತಕ್ಕಂತೆ, ಅವರು ಹೇಳಿದಂತೆ ಕೆಲಸ ಮಾಡಿದ್ದೇನೆ ಎಂದರು.



'ಗಂಗೆ ಗೌರಿ' ಅಕ್ಕ ತಂಗಿ ಕಥೆ

ಮಲೆನಾಡಿನ ಪುಟ್ಟ ಹಳ್ಳಿಯಲ್ಲಿರುವ 'ಗಂಗೆ ಗೌರಿ' ಸೋದರ ಬಾಂಧವ್ಯಕ್ಕೆ ಮತ್ತೊಂದು ಹೆಸರು. ಯಾರಿಗೂ ಜಗ್ಗದ, ಬಗ್ಗದ, ಮಾತಿಗಿಂತ ಏಟೇ ಸರಿ ಎನ್ನುವ ತಂಗಿ ಗಂಗೆ, ಸವಿಮಾತಲ್ಲೇ ಎಲ್ಲರ ಮನಗೆಲ್ಲುವ ಮೃದು ಸ್ವಭಾವದ ಅಕ್ಕ ಗೌರಿ. ಈ ಸೋದರಿಯರ ಸ್ವಭಾವ ಬೇರೆ, ಬೇರೆಯಾದರೂ, ಇವರಲ್ಲಿ ಒಬ್ಬರನ್ನೊಬ್ಬರು ಬಿಟ್ಟು ಅಗಲಿರಲಾರದಷ್ಟು ಅನ್ಯೋನ್ಯತೆ ಇರುತ್ತದೆ. ಇಂಥವರ ನಡುವೆ ಹುಡುಗನೊಬ್ಬ ಬಂದಾಗ ಏನಾಗಬಹುದು? ಅವರ ಜೀವನದಲ್ಲಿ ಏನೆಲ್ಲ ಬದಲಾವಣೆಗಳಾಗುತ್ತವೆ, ತಂಗಿಗೋಸ್ಕರ ಅಕ್ಕ ಗೌರಿ ತನ್ನ ಪ್ರೀತಿಯನ್ನು ತ್ಯಾಗ ಮಾಡುತ್ತಾಳಾ ಅಥವಾ ಅಕ್ಕ ಮತ್ತು ಪ್ರೀತಿಯ ನಡುವೆ ಗಂಗೆಯ ಆಯ್ಕೆ ಏನು? ಇದನ್ನೆಲ್ಲವನ್ನೂ ಮೀರಿ ದೈವೇಚ್ಛೆ ಏನಾಗಿತ್ತು ಎಂಬುದನ್ನು ಕುತೂಹಲಕರ ಕಥೆಯೊಂದಿಗೆ ಹೇಳುವ ಪ್ರಯತ್ನ ಮಾಡಿದ್ದಾರೆ ನಿರ್ದೇಶಕ ವಿನೋದ್ ದೋಂಡಾಳೆ.

ಕಳಸದ ಹಸಿರು ಪರಿಸರದ ನಡುವೆ, ಮಲೆನಾಡಿನ ಸುಂದರ ಗ್ರಾಮೀಣ ಬದುಕಿನ ಹಿನ್ನೆಲೆಯಲ್ಲಿ ನಡೆಯುವ ಕಥೆಯಿದಾಗಿದ್ದು, ಡಿ.11ರಿಂದ ಉದಯ ಟಿವಿಯಲ್ಲಿ ಪ್ರಸಾರವಾಗಲಿದೆ. ವೃದ್ಧಿ ಕ್ರಿಯೇಶನ್ಸ್ ಮೂಲಕ ವರ್ಧನ್‌ಹರಿ ಅವರು ಈ ಧಾರಾವಾಹಿಯನ್ನು ನಿರ್ಮಿಸಿದ್ದಾರೆ. ದರ್ಶ್‌ಚಂದ್ರಪ್ಪ, ಶ್ರೀವಿದ್ಯಾಶಾಸ್ತ್ರಿ, ದರ್ಶಿನಿ ಗೌಡ, ರೇಣುಕಾಬಾಲಿ, ಹೇಮಾ ಬೆಳ್ಳೂರು, ಅಪೂರ್ವ ಭಾರದ್ವಾಜ್, ರೋಹಿತ್, ಅಭಿಜಿತ್, ಲಕ್ಷ್ಮೀಸಿದ್ದಯ್ಯ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. 'ಗಂಗೆ ಗೌರಿ' ಬೇರೆಲ್ಲ ಧಾರಾವಾಹಿಗಳಿಗಿಂತ ವಿಭಿನ್ನವಾಗಿದ್ದು, ಮಲೆನಾಡಿನ ಸುಂದರ ತಾಣಗಳಲ್ಲಿ ಚಿತ್ರೀಕರಿಸಿದ್ದೇವೆ. ಜೊತೆಗೆ ಕನ್ನಡದ ಜನಪ್ರಿಯ ಭಾವಗೀತೆಗಳನ್ನು ಸಹ ಬಳಸಿದ್ದೇವೆ. ಕನ್ನಡತನ ಎದ್ದು ಕಾಣಿಸುತ್ತೆ ಎಂದು ನಿರ್ಮಾಪಕ ವರ್ಧನ್‌ಹರಿ ಹೇಳಿದ್ದಾರೆ.



ಕಾಣೆಯಾಗಿದ್ದಾಳೆ ಹುಡುಕಿಕೊಟ್ಟವರಿಗೆ ಬಹುಮಾನ!

ಇತ್ತೀಚೆಗೆ ಕನ್ನಡದಲ್ಲಿ ಚಿತ್ರ ವಿಚಿತ್ರ ಶೀರ್ಷಿಕೆ ಹೊತ್ತ ಚಿತ್ರಗಳು ಮೂಡಿಬರುತ್ತಿದ್ದು, ಅಂಥಾ ಚಿತ್ರಗಳಲ್ಲಿ ಕಾಣೆಯಾಗಿದ್ದಾಳೆ ಹುಡುಕಿಕೊಟ್ಟವರಿಗೆ ಬಹುಮಾನ! ಕೂಡ ಒಂದು. ಆರ್‌ಕೆ(ರಾಜು) ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ವಿನಯ್‌ಕಾರ್ತಿ, ಕೀರ್ತಿಭಟ್ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ಈ ಚಿತ್ರದ ಹಾಡುಗಳ ಪ್ರದರ್ಶನ ಹಾಗೂ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿರ್ದೇಶಕ ಆರ್‌ಕೆ ಸೋಷಿಯಲ್ ಮೀಡಿಯಾವನ್ನು ನಾವು ಸರಿಯಾಗಿ ಬಳಸಿಕೊಳ್ಳಬೇಕು. ಇಲ್ಲದಿದ್ದರೆ ಅದರಿಂದ ನಮ್ಮ ಜೀವನವೇ ಹಾಳಾಗಿಬಿಡುತ್ತದೆ. ಈಗಿನ ಕಾಲದ ಯುವಕರು ತಮ್ಮ ಮನೆಯ ಹೆಣ್ಣು ಮಕ್ಕಳ ಬಗ್ಗೆ ಸಾಕಷ್ಟು ಕಾಳಜಿ ವಹಿಸಬೇಕು ಎಂದು ಚಿತ್ರದ ಮೂಲಕ ಹೇಳಲು ಪ್ರಯತ್ನಿಸಿದ್ದೇವೆ. ಅದೇ ರೀತಿ ಸಾಮಾಜಿಕ ಜಾಲತಾಣಗಳನ್ನು ಹೆಣ್ಣು ಮಕ್ಕಳು ನಿಯಮಿತವಾಗಿ ಬಳಸಬೇಕು. ಇಲ್ಲದಿದ್ದರೆ ಅಪಾಯ ಕಟ್ಟಿಟ್ಟಬುತ್ತಿ ಎಂಬ ವಿಷಯವನ್ನು ಚಿತ್ರದ ಮೂಲಕ ಹೇಳಿದ್ದೇವೆ. ಕರ್ನಾಟಕದ ನಲವತ್ತಕ್ಕೂ ಹೆಚ್ಚು ಸುಂದರ ಸ್ಥಳಗಳಲ್ಲಿ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದ್ದು, ಇದೇ ತಿಂಗಳಲ್ಲಿ ಬಿಡುಗಡೆ ಮಾಡುವ ಯೋಜನೆಯಿದೆ ಎಂದು ಹೇಳಿದರು.

ನಾಯಕ ವಿನಯ್ ಕಾರ್ತಿ ಮಾತನಾಡುತ್ತಾ, ಇದು ನನ್ನ ಮೊದಲ ಚಿತ್ರವಾಗಿದ್ದು, ಕಾಲೇಜು ಹುಡುಗನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ತಾಯಿ ಮಗನ ಬಾಂಧವ್ಯದ ಸನ್ನಿವೇಶಗಳು ಈ ಚಿತ್ರದ ಹೈಲೈಟ್ ಎಂದರು. ನಾಯಕಿ ಕೀರ್ತಿಭಟ್ ಮಾತನಾಡುತ್ತಾ, ಹಳ್ಳಿಯಿಂದ ನಗರಕ್ಕೆ ಬಂದು ಅನೇಕ ತೊಂದರೆಗಳನ್ನು ಎದುರಿಸುವ ಹುಡುಗಿಯಾಗಿ ನಾನು ನಟಿಸಿದ್ದೇನೆ. ನಿರ್ದೇಶಕರು ತುಂಬಾ ಚೆನ್ನಾಗಿ ಈ ಕಥೆಯನ್ನು ಮಾಡಿಕೊಂಡಿದ್ದಾರೆ ಎಂದು ಹೇಳಿದರು.

ಈ ಚಿತ್ರದಲ್ಲಿ ಎಲ್ಲಾ ಕಲಾವಿದರು ತುಂಬಾ ಉತ್ತಮವಾಗಿ ಅಭಿನಯಿಸಿದ್ದಾರೆ ಎಂದ ಹಿರಿಯ ನಟಿ ಗಿರಿಜಾ ಲೋಕೇಶ್, ನಾನು ನಾಯಕನ ತಾಯಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಯಶೋಧೆ ಹಾಗೂ ಕೃಷ್ಣನ ರೀತಿಯ ಈ ತಾಯಿ-ಮಗ ಪ್ರೀತಿಯಿಂದ ಇರುತ್ತಾರೆ ಎಂದರು. ಐಟಂ ಹಾಡಲ್ಲಿ ಕಾಣಿಸಿಕೊಂಡಿರುವ ನಟಿ ಹರ್ಷಿತಾ ಕಲಿಂಗಲ್, ಕಾರ್ಯಕಾರಿ ನಿರ್ಮಾಪಕ ಸಂತೋಷ್ ಇವರೆಲ್ಲ ಸಿನಿಮಾ ಕುರಿತಂತೆ ಮಾತನಾಡಿದರು.




'ಲೇಡಿಸ್ ಬಾರ್'ನಲ್ಲಿ ಹಾಡುಗಳ ಕಲರವ!

ತನ್ನ ವಿಭಿನ್ನ ಶೀರ್ಷಿಕೆಯ ಮೂಲಕವೇ ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿರುವ ಚಿತ್ರ 'ಲೇಡಿಸ್ ಬಾರ್'. ಹರೀಶ್‌ರಾಜ್, ಶಿವಾನಿ ಅಭಿನಯದ, ಟಿ.ಎಂ.ಸೋಮರಾಜು ಅವರ ನಿರ್ಮಾಣ ಹಾಗೂ ಮುತ್ತು ಅವರ ನಿರ್ದೇಶನವಿರುವ ಈ ಚಿತ್ರದ ಆಡಿಯೋ ಹಾಗೂ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಈ ಸಂದರ್ಭದಲ್ಲಿ ನಿರ್ದೇಶಕ ಮುತ್ತು ಮಾತನಾಡುತ್ತಾ, ಚಿತ್ರದ ಶೀರ್ಷಿಕೆ ಕೇಳಿದಾಗ ಕುಡಿತದ ಕಾನ್ಸೆಪ್ಟ್ ಇಟ್ಟುಕೊಂಡು ಮಾಡಿರುವ ಚಿತ್ರವೇನೋ ಅನ್ನಿಸುವುದು ಸಹಜ. ಆದರೆ ನಮ್ಮ ಚಿತ್ರದಲ್ಲಿ ಬರೀ ಕುಡಿತವನ್ನಷ್ಟೇ ತೋರಿಸಿಲ್ಲ. ಸಮಾಜಕ್ಕೆ ಒಂದು ಉತ್ತಮ ಸಂದೇಶವನ್ನು ಹೇಳಲು ಪ್ರಯತ್ನಿಸಿದ್ದೇವೆ. ಬೆಂಗಳೂರಿನಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣ ನಡೆಸಲಾಗಿದ್ದು, ಚಿತ್ರವೀಗ ಬಿಡುಗಡೆಯ ಹಂತದಲ್ಲಿದೆ. ಬರುವ ಜನವರಿಯಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆಯಿದೆ ಎಂದರು.

ನಂತರ ನಿರ್ಮಾಪಕ ಟಿ.ಎಂ.ಸೋಮರಾಜು ಮಾತನಾಡುತ್ತಾ, ನಾನೊಬ್ಬ ಉದ್ಯಮಿ ಹಾಗೂ ರೈತನಾಗಿದ್ದು, ನನಗೆ ಸಿನಿಮಾರಂಗದ ಪರಿಚಯವೇ ಇದ್ದಿಲ್ಲ. ಗೆಳೆಯ ರಾಜಶೇಖರ್ ನನ್ನನ್ನು ಈ ರಂಗಕ್ಕೆ ಕರೆತಂದಿದ್ದಾರೆ. ನಿರ್ದೇಶಕರು ಹೇಳಿದ ಕಥೆ ಹಾಗೂ ಅದರಲ್ಲಿರುವ ಕಾನ್ಸೆಪ್ಟ್ ನನಗೆ ತುಂಬಾ ಇಷ್ಟವಾಯಿತು. ಹಾಗಾಗಿ ಚಿತ್ರನಿರ್ಮಾಣಕ್ಕೆ ಮುಂದಾದೆ. ಜೊತೆಗೆ ಚಿತ್ರದ ಪ್ರಮುಖ ಪಾತ್ರದಲ್ಲೂ ಸಹ ನಟಿಸಿದ್ದೇನೆ ಎಂದು ಹೇಳಿದರು. ಸಹ ನಿರ್ಮಾಪಕ ರಾಜಶೇಖರ್ ಮಾತನಾಡುತ್ತಾ, 'ಲೇಡಿಸ್ ಬಾರ್' ಚಿತ್ರ ಸಾಗಿ ಬಂದ ಹಾದಿಯ ಬಗ್ಗೆ ಮಾಹಿತಿ ನೀಡಿದರು. ಚಿತ್ರದಲ್ಲಿ ಸುಂದರ ಹಾಡುಗಳನ್ನು ಮಾಡಿದ ಸಂಗೀತ ನಿರ್ದೇಶಕ ಹರ್ಷ ಕಾಗೋಡ್, ಸುಂದರವಾಗಿ ದೃಶ್ಯಗಳನ್ನು ಕಟ್ಟಿಕೊಟ್ಟ ಛಾಯಾಗ್ರಾಹಕ ವೀನಸ್‌ಮೂರ್ತಿ, ಸಾಹಸ ನಿರ್ದೇಶಕ ಜಗ್ಗು ಹಾಗೂ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಹರೀಶ್‌ರಾಜ್, ಶಿವಾನಿ, ಮಾಧುರಿ, ಗಣೇಶ್‌ರಾವ್ ಕೇಸರಕರ್, ಆರಾಧ್ಯ ಮುಂತಾದವರು ಲೇಡಿಸ್‌ಬಾರ್ ಚಿತ್ರದಲ್ಲಿನ ತಮ್ಮ ಪಾತ್ರಗಳ ಬಗ್ಗೆ ಹೇಳಿಕೊಂಡರು.

ಸಿರಿಮ್ಯೂಸಿಕ್ ಮೂಲಕ ಲೇಡಿಸ್‌ಬಾರ್ ಚಿತ್ರದ ಹಾಡುಗಳು ರಿಲೀಸಾಗಿವೆ.

ಸಿನಿಪದಬಂಧ-503



ಹೆಸರು

ವಿಳಾಸ

ದೂರವಾಣಿ ಸಂಖ್ಯೆ



ವಿಜೇತರು: ಅನು ಡಿ. ದ್ವಿತೀಯ ಪಿಯುಸಿ (ಕಾಮರ್ಸ್)
ಸರ್ಕಾರಿ ಪದವಿಪೂರ್ವ ಕಾಲೇಜು, ತಿ.ನರಸೀಪುರ.



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 502ರ ಉತ್ತರ

ಭ	ಕ್ತ	ಕ	ನ	ಕ	ದಾ	ಸ		ರ	ಸಿ	ಕ
ರಾ			ವ		ದಾ		ಪ			ವ
ಟೆ		ಶು	ಭಾ		ಸಾ	ವಿ	ರ	ಮೆ	ಟ್ಟಿ	ಲು
			ರ		ಹೇ		ಸಂ			ದಾ
ಪಾ	ರಿ	ಜಾ	ತ		ಬ್		ಗ		ಗು	ರಿ
ಪು	ಟ್ಟಿ		ಒಂ		ಕ		ಪಂ	ಚಾ	ಮೃ	ತ
ಣ್ಯ			ದೇ		ಲ್ಲು		ಚ			
ಪು	ರಂ	ದ	ರ	ದಾ	ಸ		ಮ	ಕ್ಷಿ		ಚಾ
ರು			ಕ್ತ		ಕ್ಕ		ವೇ			ಣ
ಷ	ರೋ	ನಿ		ಮ	ರೆ	ಯ	ದ	ಮಾ	ಣಿ	ಕ್ಯ

ಎಡದಿಂದ ಬಲಕ್ಕೆ


1. ಸುಮನ ಕಿತ್ತೂರು ಅವರ ಮಾರ್ಕೆಟ್ ಖದೀಮರದು! 5
4. ಪ್ರಭಾಕರ್ ಕಟ್ಟಿದ ನಮ್ಮ ದೇಶ ಯೋಗ್ಯವಾದುದು 5
5. ಸತ್ಯಹರಿಶ್ಚಂದ್ರ ಚಿತ್ರದ ಪಾತ್ರವೊಂದಕ್ಕೆ ದುನಿಯಾ ವಿಜಿಗೂ ಏನೀ ಸಂಬಂಧ! 4
7. ಮಲ್ಲಿಗೆ ಊರಿನ ಈ ಗಾಯಕ ಬರೀ ನೆನಪು! 5
9. _ _ಮಾಧವರಾವ್ 2
10. ಅರ್ಜುನ್ ಸರ್ಜಾ-ಸೌಂದರ್ಯ ಅಭಿನಯದ ಭಕ್ತಿ ಪ್ರಧಾನ ಚಿತ್ರ 5
11. ಪುಷ್ಪ ಪುಷ್ಪ ಹಾಡಿನ ಶಿವಣ್ಣನ ಚಿತ್ರ 2
13. ಆರತಿ ಅಭಿನಯದ ಪವಿತ್ರ ಗಿಡದ ಎಸಳು 5
16. ಮದುವೆ, ವಿವಾಹ, ಲಗ್ನಕ್ಕೆ ಹೀಗೊಂದು ಹೆಸರು 4
17. ಡಾ. ರಾಜ್ ಅಭಿನಯದಲ್ಲಿ ಮೂಡಿ ಬಂದ ನೂತನ ಪ್ರಭೆ 5
18. ಬಿ.ಆರ್.ಪಂತಲು ನಿರ್ದೇಶಿಸಿ ನಿರ್ಮಿಸಿದ ಪುತ್ರಿಗೆ ಡಾ. ರಾಜ್‌ಕುಮಾರ್ ಅಭಿನಯವಿದೆ 5

ಮೇಲಿನಿಂದ ಕೆಳಕ್ಕೆ

1. ನಿರ್ಜೀವ ವಸ್ತುವಿನಲ್ಲಿ ತಿಪಟೂರು ರಘು ನಾದ ಹೊರ ಹೊಮ್ಮಿಸಿದ್ದಾರೆ 8
2. ಬುಲ್ ಬುಲ್ ಚಿತ್ರದ ನಿಶಾ ಪಾತ್ರಧಾರಿಣಿ 4
3. ವೀರಪ್ಪನ್ ಎಂದೊಡನೆ ಥ್ರಿಲ್ಲರ್ ಮಂಜು ಚಿತ್ರ ಪ್ರತ್ಯಕ್ಷ! 5
4. ಕೃಷ್ಣ ನೀ ಬೇಗನೇ ಬಾರೋ ಚಿತ್ರದ ನಾಯಕಿ 2
6. ಶ್ರೀನಾಥ್-ಮಂಜುಳಾ ಸ್ನೇಹದ ಕಡಲಲ್ಲಿ.. ನೆನಪಿನದೋಣಿಯಲಿ ಸಾಗಿದ ಚಿತ್ರ 5
7. ರಾಗಸುಧಾ ಅಭಿನಯದ ಸರ್ಪ ಸ್ತ್ರೀ 5
8. ಶ್ರುತಿ ಮತ್ತು ನಿರೋಷ ಇವರ ಅಂತಕರಣ ಅಂಬಿ ಪಾಲಿಗೆ ಸ್ಪಂದಿಸಿವೆ 8
12. ವಿಜಯ ರಾಘವೇಂದ್ರ - ಹರ್ಷಿಕಾ ಪೂಣ್ಣಚ್ಚ ಅಭಿನಯದಲ್ಲಿನ ಒಡವೆ 5
14. ಭಕ್ತ ಕುಂಬಾರ ಚಿತ್ರದ ಹಾಡಿನಲ್ಲಿ ವಿಷ್ಣುವಿನ ಹೆಸರು ಚೆಂದ 4
15. ತಿಮ್ಮನಿಗೆ ಕವಿದ ಹೆಡ್ಡತನ 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

'ರೋಜಿ' ಚಿತ್ರದಲ್ಲಿ ಶ್ರೀನಗರಕಿಟ್ಟಿ



ಲೂಸ್‌ಮಾದ ಯೋಗಿ ಅಭಿನಯದ 50ನೇ ಚಿತ್ರ 'ರೋಜಿ' ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ. ಲಿಯೋ ಖ್ಯಾತಿಯ ಸ್ಯಾಂಡಿಮಾಸ್ಟರ್ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿರುವ ಈ ಚಿತ್ರದಲ್ಲಿ ನಟ ಶ್ರೀನಗರ ಕಿಟ್ಟಿ ಅವರು ರಗಡ್ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ. ಇತ್ತೀಚೆಗೆ ಶ್ರೀನಗರ ಕಿಟ್ಟಿ ಅವರ ಪಾತ್ರ ಪರಿಚಯಿಸುವ ನೂತನ ಪೋಸ್ಟರ್‌ನ್ನು ಚಿತ್ರತಂಡ ಬಿಡುಗಡೆ ಮಾಡಿದೆ. ಶಾಂತಿನಗರ ಆಟದ ಮೈದಾನದಲ್ಲಿ ಶ್ರೀನಗರ ಕಿಟ್ಟಿ ಅವರ ಮೂವತ್ತು ಅಡಿಯ ಬೃಹತ್ ಪೋಸ್ಟರನ್ನು ಬಿಡುಗಡೆ ಮಾಡಿ, ಕಿಟ್ಟಿ ಅವರನ್ನು ಚಿತ್ರಕ್ಕೆ ವಿಶೇಷವಾಗಿ ಬರಮಾಡಿಕೊಳ್ಳಲಾಯಿತು. ಪೋಸ್ಟರ್ ಬಿಡುಗಡೆಯ ನಂತರ ಚಿತ್ರತಂಡ ಸಿನಿಮಾ ಬಗ್ಗೆ ಮಾಹಿತಿ ಹಂಚಿಕೊಂಡಿತು.

ವೇದಿಕೆಯಲ್ಲಿ ನಟ ಶ್ರೀನಗರ ಕಿಟ್ಟಿ ಮಾತನಾಡುತ್ತ ಈ ಪಾತ್ರದ ಕುರಿತಂತೆ ನಿರ್ದೇಶಕ ಶೂನ್ಯ ಅವರು ಹೇಳಿದಾಗ ಕಾನ್ಸೆಪ್ಟ್ ತುಂಬಾ ಚೆನ್ನಾಗಿದೆ ಅನಿಸಿತು. ಈಗ ಪೋಸ್ಟರ್ ನೋಡಿ ಇನ್ನು ಹೆಚ್ಚು ಖುಷಿಯಾಗಿದೆ.

ಶೈಕ್ಷಣಿಕ ಪ್ರವಾಸದ ವೇಳೆ ವಿದ್ಯಾರ್ಥಿನಿಯರ ಮೇಲೆ ದೌರ್ಜನ್ಯ ಪ್ರಕರಣ

ಬೀಚನಹಳ್ಳಿ ಶಾಲೆಗೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಭೇಟಿ

ದೌರ್ಜನ್ಯಕ್ಕೊಳಗಾದ ಮಕ್ಕಳು, ಶಿಕ್ಷಕರಿಂದ ಘಟನೆಯ ಸಂಪೂರ್ಣ ಮಾಹಿತಿ ಸಂಗ್ರಹ



ಹೆಚ್.ಡಿ.ಕೋಟೆ, ಡಿ.7– ಶಾಲಾ ಶೈಕ್ಷಣಿಕ ಪ್ರವಾಸದ ವೇಳೆ ವಿದ್ಯಾರ್ಥಿನಿಯರೊಂದಿಗೆ ಅಸಭ್ಯವಾಗಿ ವರ್ತಿಸಿದ ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಅಟೆಂಡರ್ ರಮೇಶ್ ಅವರ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಶ್ರೀಮತಿ ಎಸ್.ಮಂಜು ಆನಂದ್ ಅವರು ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ಶಿಕ್ಷಕರು ಮತ್ತು ಮಕ್ಕಳಿಂದ ಅಗತ್ಯ ಮಾಹಿತಿ ಸಂಗ್ರಹಿಸಿದರು.

ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಾಗಿದ್ದು, ಆರೋಪಿಗಳಾದ ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಅಟೆಂಡರ್ ರಮೇಶ್ ಅವರು ಇನ್ನೂ ತಲೆಮರೆಸಿಕೊಂಡಿದ್ದು, ಪ್ರಕರಣದ ತನಿಖೆ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿಲ್ಲ ಎಂಬ ಆರೋಪದ ಹಿನ್ನೆಲೆಯಲ್ಲಿ ಇಂದು ಖುದ್ದಾಗಿ ಶಾಲೆಗೆ ಭೇಟಿ ನೀಡಿ ದೌರ್ಜನ್ಯಕ್ಕೊಳಗಾದ ಮಕ್ಕಳು ಮತ್ತು ಶಾಲೆಯ ಶಿಕ್ಷಕರುಗಳನ್ನು ಭೇಟಿ ಮಾಡಿ ಮಾಹಿತಿ ಪಡೆದುಕೊಂಡು ಪ್ರಕರಣ ಕುರಿತು ಸಮಗ್ರ ತನಿಖೆಯಾಗಿ ಆರೋಪಿಗಳಿಗೆ ಶಿಕ್ಷೆಯಾಗಬೇಕು ಎಂದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಮಟ್ಟದ ಅಧಿಕಾರಿಗಳು ಮತ್ತು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಕಾರ್ಯ ಒತ್ತಡದ ನೆಪವೊಡ್ಡಿ ನಿಖರ ಮಾಹಿತಿ ನೀಡಲು ಹಿಂದೇಟು ಹಾಕಿದ್ದರಿಂದ ಖುದ್ದಾಗಿ ನಾನೇ ಇಲ್ಲಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದು, ರಾಜ್ಯದಲ್ಲಿ ಯಾವುದೇ ಕಡೆ ಇಂತಹ ಹೀನ ಘಟನೆ ಸಂಭವಿಸಬಾರದು ಎಂದ ಅವರು, ಮಕ್ಕಳು ಹಕ್ಕು ಉಲ್ಲಂಘನೆಯಾಗಲು ಆಯೋಗ ಅವಕಾಶ ನೀಡುವುದಿಲ್ಲ ಎಂದರು.

ಶೈಕ್ಷಣಿಕ ಪ್ರವಾಸದ ವೇಳೆ ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಸಿಬ್ಬಂದಿ ರಮೇಶ್ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಎಸಗಿರುವುದು ಮೇಲ್ನೋಟಕ್ಕ ಕಂಡುಬಂದಿದ್ದರೂ ದೂರು ದಾಖಲಿಸುವಲ್ಲಿ ವಿಳಂಬ ಮಾಡಿದ್ದಾರೆ ಹಾಗೂ ಜಿಲ್ಲಾ ತಾಲೂಕು ರಾಜ್ಯ ಮಟ್ಟದ ಅಧಿಕಾರಿಗಳು ಸಮರ್ಪಕವಾದ, ನಿಖರವಾದ ಮಾಹಿತಿಗಳನ್ನು ಆಯೋಗಕ್ಕೆ ಮತ್ತು ಸರ್ಕಾರಕ್ಕೆ ನೀಡದೇ ಇರುವುದು ಬೇಸರದ ಸಂಗತಿ ಎಂದ ಅವರು, ಘಟನೆ ಕುರಿತು ಆಯೋಗಕ್ಕೆ ವರದಿ ನೀಡಲಾಗುವುದು ಎಂದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಜೊತೆ ಸಮಾಲೋಚನೆ ನಡೆಸಿ ಸಮಗ್ರ ಮಾಹಿತಿ ಪಡೆದಿದ್ದೇನೆ. ಸರ್ಕಾರಕ್ಕೆ ಮತ್ತು ಆಯೋಗದ ಅಧ್ಯಕ್ಷರಿಗೆ ವರದಿ ಸಲ್ಲಿಸುವೆ. ರಾಜ್ಯದ ಯಾವುದೇ ಭಾಗಗಳಲ್ಲಿ ಶೈಕ್ಷಣಿಕ ಪ್ರವಾಸದ ವೇಳೆ ಹಾಗೂ ಶಾಲಾ ಕಾಲೇಜಿನಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಮೇಲೆ ದೌರ್ಜನ್ಯ ಆಗಬಾರದು. ಈ ಘಟನೆಯಿಂದ ಶಿಕ್ಷೆಗೆ ಒಳಗಾದವರ ವಿಚಾರ ಮತ್ತೊಬ್ಬರಿಗೆ ಪಾಠವಾಗಿ ಮಾರ್ಪಡಬೇಕು ಎಂದರು.

ಮಕ್ಕಳ ಹಕ್ಕು ವಿಚಾರವಾಗಿ ಆಯೋಗ ಸದಾ ಕರ್ತವ್ಯ ನಿರ್ವಹಿಸುವಲ್ಲಿ ಮುಂದಾಗಿದೆ. ಅನ್ಯಾಯಕ್ಕೆ ಒಳಗಾದಂತವರು ನಮಗೆ ಪತ್ರ ಅಥವಾ ದೂರವಾಣಿ ಮುಖಾಂತರ ಧೈರ್ಯವಾಗಿ ವಿಚಾರ ಮುಟ್ಟಿಸುವಂತೆ ಸೂಚಿಸಿದರು. ಇದೇ ಸಂದರ್ಭದಲ್ಲಿ ಮಕ್ಕಳಿಗೆಲ್ಲರಿಗೂ ಧೈರ್ಯ ಹಾಗೂ ಸಾಂತ್ವನ ಹೇಳಿ ವಿದ್ಯಾಭ್ಯಾಸದಲ್ಲಿ ಮುಂದೆ ಬಂದು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ. ಯಾರೇ ಅನ್ಯಾಯ ಎಸಗಿದರು ಅಂತವರ ವಿರುದ್ಧ ಕ್ರಮ ಖಚಿತ. ಈ ಪ್ರಕರಣ ಮುಚ್ಚಿ ಹಾಕಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

ಇದೇ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಜಿಲ್ಲಾ ಸದಸ್ಯರಾದ ಚಂದ್ರಕಾಂತ್, ಕ್ಷೇತ್ರ ಶಿಕ್ಷಣಾಧಿಕಾರಿ ಮಾರಯ್ಯ, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ನಾಗೇಶ್, ಅಂತರಸಂತೆ ಪೊಲೀಸ್ ಠಾಣೆಯ ಎಸ್‌ಐ ರವಿಶಂಕರ್, ಬೀಚನಹಳ್ಳಿ ಗ್ರಾಮ ಪಂಚಾಯತಿ ಸದಸ್ಯರಾದ ಭಾಸ್ಕರ್, ಗೋವಿಂದರಾಜು, ಗ್ರಾಮದ ಮುಖಂಡ ಹೇಮಂತ, ಸಿಆರ್‌ಪಿಗಳಾದ ಜ್ಞಾನೇಶ್ವರಿ ಬಾಯಿ, ಪ್ರಕಾಶ್, ಶಿಕ್ಷಕರುಗಳಾದ ಗೋಕಿಲ, ಸುಮಾ, ಚನ್ನನಾಯಕ, ವಾತ್ಸಲ್ಯ, ರಘು, ಕ್ಲರ್ಕ್ ಮೇರಿ, ಪೊಲೀಸ್ ಸಿಬ್ಬಂದಿಗಳ ನಾಗೇಗೌಡ, ರಾಮಕೃಷ್ಣ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮುಖ್ಯ ಶಿಕ್ಷಕ ರಕ್ಷಣೆಗೆ ಯತ್ನ, ಹಾಗಾದರೆ ಅಟೆಂಡರ್ ಬಲಿಪಶುವೇ...

ಶೈಕ್ಷಣಿಕ ಪ್ರವಾಸದ ವೇಳೆ ಶಾಲಾ ವಿದ್ಯಾರ್ಥಿನಿಯರೊಂದಿಗೆ ಅಸಭ್ಯವಾಗಿ ವರ್ತಿಸಿದ ಆರೋಪದ ಮೇಲೆ ಪೋಕ್ಸೋ ಕಾಯ್ದೆಯಡಿ ಪ್ರಕರಣ ಎದುರಿಸುತ್ತಿರುವ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ನಾಗಣ್ಣ ಅವರನ್ನು ರಕ್ಷಿಸಲು, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಅಧಿಕಾರಿಗಳು ಸೇರಿದಂತೆ ಕೆಲವು ಜನಪ್ರತಿನಿಧಿಗಳು ಹುನ್ನಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ.

ಈ ಪ್ರಕರಣದ ಮತ್ತೊಬ್ಬ ಆರೋಪಿ ಅಟೆಂಡರ್ ರಮೇಶ್‌ನನ್ನು ಸಿಲುಕಿಸಿ, ಮುಖ್ಯ ಶಿಕ್ಷಕ ನಾಗಣ್ಣ ಅವರನ್ನು ಅಮಾಯಕ ಎಂದು ಬಿಂಬಿಸುವ ಪ್ರಯತ್ನ ನಡೆದಿದೆಯಂತೆ. ದೌರ್ಜನ್ಯವನ್ನು ನೀನು ಒಪ್ಪಿಕೋ, ನಿನಗೆ ಏನು ಬೇಕೋ ಅದನ್ನು ಮಾಡುತ್ತೇವೆ. ಕೇಸಿನಿಂದ ಪಾರು ಮಾಡುತ್ತೇವೆ ಎಂದು ಹೇಳುವ ಮೂಲಕ ಅಟೆಂಡರ್ ಬಲಿಪಶು ಮಾಡಲು ಪ್ರಯತ್ನಗಳು ನಡೆದಿದೆ. ವಾಸ್ತವವಾಗಿ ಹಿರಿಯ ರಾಜಕಾರಣಿಯೊಬ್ಬರ ಕೃಪಾಶೀರ್ವಾದ ಇರುವ ಮುಖ್ಯಶಿಕ್ಷಕ, ತಿಂಗಳಲ್ಲಿ ಬೆರಳೆಣಿಕೆಯಷ್ಟು ದಿನ ಮಾತ್ರ ಶಾಲೆಗೆ ಬರುತ್ತಿದ್ದು, ಉಳಿದ ಅವಧಿಯಲ್ಲಿ ಅಟೆಂಡರ್ ರಮೇಶನೇ ಮುಖ್ಯ ಶಿಕ್ಷಕನಂತೆ ವರ್ತಿಸುತ್ತಿದ್ದನಂತೆ. ಇಡೀ ಶಾಲೆಯೇ ಅವನ ಕಂಟ್ರೋಲ್‌ನಲ್ಲಿ ಇತ್ತಂತೆ ಎಂದು ಈಗೀಗ ಚರ್ಚಿತವಾಗುತ್ತಿದೆ.

ಇವರಿಬ್ಬರು ಕೆಲವು ಅಧಿಕಾರಿಗಳ ಜೊತೆ ಸಂಪರ್ಕದಲ್ಲಿ ಇದ್ದಾರೆ. ಪೊಲೀಸ್ ಇಲಾಖೆಗೂ ಇವರಿಬ್ಬರೂ ತಲೆಮರೆಸಿಕೊಂಡಿರುವ ಸ್ಥಳ ಗೊತ್ತಿದ್ದರೂ ಇನ್ನು ಹುಡುಕುವ ನಾಟಕವಾಡುತ್ತಿದ್ದಾರೆ ಎಂದು ಸಾರ್ವಜನಿಕರು ಮಾತಾಡಿಕೊಳ್ಳುತ್ತಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಜಪಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮರೀಚಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಸ್‌ಟ್ರಾ (ತೆ)	4 ಪ್ರದರ್ಶನಗಳು
ರಾಜಕಮಲ್	
ಕಂಜೂರಿಂಗ್ ಕಣ್ಣಪ್ಪನ್ (ತ)	4 ಪ್ರದರ್ಶನಗಳು
ಸಂಗಂ	
ಮರೀಚಿ (ಕ) –2 ಪ್ರದರ್ಶನಗಳು, ಸಿಂಗಂ (ತ)	2 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜಪಾನ್ (ತ)	4 ಪ್ರದರ್ಶನಗಳು
ಪ್ರಭಾ	
ಪಾಲಿಟಿಕ್ಸ್ ಕಲ್ಯಾಣ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಶುಗರ್ ಫ್ಯಾಕ್ಟರಿ (ಕ):** ಮ.1.25ಕ್ಕೆ, ಸಂ.4.15ಕ್ಕೆ, **ನೆಪೋಲಿಯನ್ (ಇಂ):** ರಾ.7ಕ್ಕೆ, ರಾ.10.05ಕ್ಕೆ
ಸ್ಕ್ರೀನ್ 2	**ಬ್ಯಾಡ್ ಮ್ಯಾನರ್ಸ್ (ಕ):** ಬೆ.10.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ):** ಮ.1.20ಕ್ಕೆ, **ಕಾಥಲ್ ದಿ ಕೋರ್ (ಮ):** ರಾ.9.55ಕ್ಕೆ.
ಸ್ಕ್ರೀನ್ 3	**ಕಾಥಲ್ ದಿ ಕೋರ್ (ಮ):** ಬೆ.10.45ಕ್ಕೆ, **ಫೆರ್ರಿ (ಹಿಂ):** ಮ.1.05ಕ್ಕೆ, **ವಿಶ್ (3ಡಿ) (ಇಂ):** ಮ.3.20ಕ್ಕೆ, ಸಂ.5.25ಕ್ಕೆ, **ಸ್ವಾತಿ ಮುತ್ತಿನ ಮಳೆ ಹನಿಯೇ (ಕ):** ರಾ.7.30ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ):** ರಾ.9.45ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಮ.1.30ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಅನಿಮಲ್ (ಹಿಂ):** ಬೆ.10.15ಕ್ಕೆ, ಮ.2.20ಕ್ಕೆ, ಸಂ.6.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	**ಅನಿಮಲ್ (ಹಿಂ):** ಬೆ.9.45ಕ್ಕೆ, ಮ.1.50ಕ್ಕೆ, ಸಂ.5.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	**ಸ್ಯಾಮ್ ಬಹದ್ದೂರ್ (ಹಿಂ):** ಬೆ.9.25ಕ್ಕೆ, ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ):** ಮ.3.55ಕ್ಕೆ.
ಸ್ಕ್ರೀನ್ 4	**ಅನಿಮಲ್ (ಹಿಂ):** ಬೆ.8.05ಕ್ಕೆ, ಮ.12.10ಕ್ಕೆ, **ಅರ್ಧಂ ಬರ್ಧ ಪ್ರೇಮ ಕಥೆ (ಕ):** ಸಂ.4.15ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ರಾ.7.10ಕ್ಕೆ, **ಪಾರ್ಕಿಂಗ್ (ತ):** ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, ಸಂ.4.10ಕ್ಕೆ, **ರಾಜಯೋಗ (ಕ):** ಮ.1.05ಕ್ಕೆ, ಸಂ.6.15ಕ್ಕೆ, **ಟಗರುಪಲ್ಯ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, **ಟೈಗರ್ 3 (ಹಿಂ):** ಸಂ.4.20ಕ್ಕೆ.
ಸ್ಕ್ರೀನ್ 3	**ಟೈಗರ್ 3(ಹಿಂ):** ಬೆ.11ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**ಟಗರುಪಲ್ಯ (ಕ):** ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, **ಟೈಗರ್ 3 (ಹಿಂ):** ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಣಿಯನಹುಂಡಿ ಹೊಸೂರಲ್ಲಿ ವೈಭವದ ಕಾರ್ತಿಕ ಉತ್ಸವ



ಹೆಚ್.ಡಿ. ಕೋಟೆ ತಾಲೂಕು ಕಣಿಯನಹುಂಡಿ ಹೊಸೂರು ಗ್ರಾಮದ ಶ್ರೀ ಕಾರ್ಗಳ್ಳಿ ಬಸವೇಶ್ವರ ದೇವಸ್ಥಾನದಲ್ಲಿ 7ನೇ ವರ್ಷದ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವದ ಅಂಗವಾಗಿ ವೈಭವದ ಮೆರವಣಿಗೆ ನಡೆಯಿತು. ಸಾವಿರಾರು ಭಕ್ತರು ಪಾಲ್ಗೊಂಡು ಸ್ವಾಮಿಯ ಕೃಪೆಗೆ ಪಾತ್ರರಾದರು. ಎಲ್ಲರಿಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಜಿಪಂ ಮಾಜಿ ಸದಸ್ಯ ಶ್ರೀಕೃಷ್ಣ, ಶ್ರೀ ಕಾರ್ಗಳ್ಳಿ ಬಸವೇಶ್ವರ ದೇವಸ್ಥಾನದ ಸೇವಾ ಸಮಿತಿ ಅಧ್ಯಕ್ಷ ಬಸವರಾಜು, ಕಾರ್ಯದರ್ಶಿ ಕುಮಾರ್, ಚಂದ್ರು, ಈರೇಗೌಡ, ಜಿಜೆಪಿ ಮುಖಂಡ ಕೆ.ಎಂ. ಅನುರಾಜ್, ಪುಟ್ಟೇಗೌಡ ಇತರರು ಈ ವೇಳೆ ಉಪಸ್ಥಿತರಿದ್ದರು.

ಹುಣಸೂರಲ್ಲಿ ಅಂಬೇಡ್ಕರ್ ಪರಿನಿರ್ವಾಣ ದಿನ ಆಚರಣೆ



ಹುಣಸೂರು.ಡಿ.7– ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಮಹಾ ಪರಿನಿರ್ವಾಣ ದಿನ ಅಂಗವಾಗಿ ಹುಣಸೂರಿನ ಕಾಂಗ್ರೆಸ್ ಮುಖಂಡರುಗಳು ಹಾಗೂ ಸ್ನೇಹಜೀವಿ ಅಭಿಮಾನಿಗಳು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮೇಣದ ಬತ್ತಿಯೊಂದಿಗೆ ಮೌನ ಮೆರವಣಿಗೆ ನಡೆಸಿ ಸಂವಿಧಾನ ಶಿಲ್ಪಿಗೆ ಗೌರವ ಸಮರ್ಪಿಸಿದರು.

ಈ ವೇಳೆ ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷ, ವಕೀಲ ಪುಟ್ಟರಾಜು ಮಾತನಾಡಿ, ಡಾ. ಬಿ.ಆರ್.ಅಂಬೇಡ್ಕರ್ ತಮ್ಮ ಸತತ ಪ್ರಯತ್ನದಿಂದ ನ್ಯಾಯ ಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ ಹಾಗೂ ಸಮಾಜ ಸುಧಾರಕರಾಗಿ, ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ, ಅಸ್ಪೃಶ್ಯತೆ, ಅಸಮಾನತೆಯ ವಿರುದ್ಧ ದಿಟ್ಟತನದಿಂದ ಹೋರಾಡಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗುವಂತೆ ಮಾಡಿದ ಮಹಾನ್ ಮಾನವತಾವಾದಿಯಾಗಿದ್ದರು ಎಂದರು.

ಮಾಜಿ ಕಾಂಗ್ರೆಸ್ ಅಧ್ಯಕ್ಷ ಬಿಳಿಕೆರೆ ಬಸವರಾಜ್, ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಗರನಹಳ್ಳಿ ಕುಮಾರ್, ತಾ. ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕಲ್ಕುಣಿಕೆ ರಾಘು, ಅಕ್ರಮ ಸಕ್ರಮ ಸಮಿತಿ ಮಾಜಿ ಸದಸ್ಯ ಚಿಕ್ಕಸ್ವಾಮಿ, ನಾಯಕ ಸಮಾಜದ ಯುವ ಮುಖಂಡ ಮಯೂರ, ದಸಂಸ ಶಿವರಾಜ್, ಜೆ.ಮಹದೇವು, ದೇವರಾಜ್ ಹಾಗೂ ಮಹಿಳಾ ಮುಖಂಡರು ಸೇರಿದಂತೆ ನೂರಾರು ದಲಿತ ಮುಖಂಡರು ಭಾಗವಹಿಸಿದ್ದರು



ಸರಗೂರಲ್ಲಿ ಅಂಬೇಡ್ಕರ್ ಪರಿನಿರ್ವಾಣ ದಿನ ಆಚರಣೆ

ಸರಗೂರು: ಪಟ್ಟಣದ ಆದಿ ಕರ್ನಾಟಕ ಸಮಾಜದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣ ದಿನ ಆಚರಿಸಲಾಯಿತು. 4ನೇ ವಾರ್ಡಿನ ಸಮಾಜದ ಯಜಮಾನರು, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮೇಣದ ಬತ್ತಿ ಹಚ್ಚಿ ಗೌರವ ಸಮರ್ಪಿಸಿದರು. 4ನೇ ವಾರ್ಡ್ ಹಾಗೂ ಬಿಡಗಲು 11ನೇ ವಾರ್ಡ್ ಆದಿ ಕರ್ನಾಟಕ ಸಮಾಜದ ವತಿಯಿಂದ ಸಮಾಜದ ಬಂಧುಗಳು ಹಾಗೂ ಅಂಬೇಡ್ಕರ್ ಯುವಕ ಸಂಘದವರು ಮೇಣದ ಬತ್ತಿ ಮೆರವಣಿಗೆ ನಡೆಸಿ ನಮನ ಸಲ್ಲಿಸಿದರು. ಸಮಾಜದ ಯಜಮಾನರು, ಮುಖಂಡರು, ಯುವಕ ಸಂಘದವರು, ಮಕ್ಕಳು ಭಾಗವಹಿಸಿದ್ದರು.

ವಾಲ್ಮೀಕಿ ನಾಯಕರ ಯುವ ವೇದಿಕೆಗೆ ನೇಮಕ



ಹೆಚ್.ಡಿ.ಕೋಟೆ, ಡಿ.7– ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ರತ್ನಾಕರ ವಾಲ್ಮೀಕಿ ನಾಯಕರ ಯುವ ವೇದಿಕೆಯ ನೂತನ ಅಧ್ಯಕ್ಷರಾಗಿ ನಿಲುವಾಗಿಲು ವೆಂಕಟಾಚಲ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವೇದಿಕೆಯ ನಿಕಟಪೂರ್ವ ಅಧ್ಯಕ್ಷ ಹೆಬ್ಬಲಗುಪ್ಪೆ ರಾಜು ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮುಂದಿನ ಒಂದು ವರ್ಷದ ಅವಧಿಗೆ ವೇದಿಕೆಯ ಗೌರವಾಧ್ಯಕ್ಷರಾಗಿ ಸ್ವಾಮಿನಾಯಕ, ಉಪಾಧ್ಯಕ್ಷರಾಗಿ ಜಮಾಜು, ಕಾರ್ಯದರ್ಶಿಯಾಗಿ ಸಣ್ಣಸ್ವಾಮಿ ನಾಯಕ, ಖಜಾಂಚಿಯಾಗಿ ರವಿಕುಮಾರ್, ಪತ್ರಿಕಾ ಕಾರ್ಯದರ್ಶಿಯಾಗಿ ನಿಂಗರಾಜು, ನಿರ್ದೇಶಕರಾಗಿ ಬಸಪ್ಪ ಗೋವಿಂದ ನಾಯಕ, ವೀರಭದ್ರನಾಯಕ, ವೇಣುಗೋಪಾಲ್ ಅವರನ್ನು ನೇಮಕ ಮಾಡಲಾಗಿದೆ.

ನಂ.ಗೂಡು ನಗರಸಭೆ 20ನೇ ವಾರ್ಡ್ ಉಪ ಚುನಾವಣಾ ವೇಳಾಪಟ್ಟಿ ಪ್ರಕಟ

ನಂಜನಗೂಡು, ಡಿ.7– ನಂಜನಗೂಡು ನಗರಸಭೆಯಲ್ಲಿ ತೆರವಾಗಿರುವ 20ನೇ ವಾರ್ಡಿಗೆ ಉಪ ಚುನಾವಣಾ ವೇಳಾಪಟ್ಟಿ ಪ್ರಕಟವಾಗಿದೆ.

ಡಿ.8ರ ಶುಕ್ರವಾರ ಜಿಲ್ಲಾಧಿಕಾರಿಗಳು ಅಧಿಸೂಚನೆ ಹೊರಡಿಸಲಿದ್ದಾರೆ. ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನ ಡಿ.15. ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಡಿ.16, ಡಿ.18 ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಕೊನೆಯ ದಿನ. ಅವಶ್ಯವಿದ್ದರೆ ಡಿ.27 ಚುನಾವಣೆ ನಡೆಯಲಿದೆ. ಡಿ.30 ರಂದು ಬೆಳಗ್ಗೆ 8 ಗಂಟೆಯಿಂದ ಮತಗಳ ಎಣಿಕಾ ಕಾರ್ಯ ನಡೆಯಲಿದೆ. ಚುನಾವಣಾ ನೀತಿ ಸಂಹಿತೆಯು ಡಿ.8 ರಿಂದ ನಂಜನಗೂಡು ನಗರಸಭಾ ವ್ಯಾಪ್ತಿಯ 20ನೇ ವಾರ್ಡ್ ವ್ಯಾಪ್ತಿಯಲ್ಲಿ ಡಿ.30 ರವರೆಗೆ ಜಾರಿಯಲ್ಲಿರುತ್ತದೆ.

ಚುನಾವಣಾ ಪ್ರಕ್ರಿಯೆ ಹಾಗೂ ಮತದಾನ ಶಾಂತಿಯುತವಾಗಿ ಮತ್ತು ಸುವ್ಯವಸ್ಥೆಯಿಂದ ನಡೆಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಸಾರ್ವಜನಿಕರು ಮತ್ತು ಮತದಾರರು ಈ ಚುನಾವಣೆಯನ್ನು ಮುಕ್ತವಾಗಿ ನಿಷ್ಪಕ್ಷಪಾತವಾಗಿ ಶಾಂತಿಯುತವಾಗಿ ನಡೆಸಲು ಸಹಕಾರ ನೀಡುವಂತೆ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ.ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ತಿ.ನರಸೀಪುರ ತಾಲೂಕಿನ ಉಕ್ಕಲಗೆರೆ ಗ್ರಾಮದಲ್ಲಿ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 67ನೇ ಪರಿನಿಬ್ಬಾಣ ದಿನವನ್ನು ಮೇಣದಬತ್ತಿ ಹಚ್ಚುವ ಮೂಲಕ ಆಚರಿಸಿದರು. ಅಂಬೇಡ್ಕರ್ ಸಂಘದ ಯುವಕರು ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು

ಇಂದು ಗ್ರಾಮದೇವತೆ ಉತ್ಸವ



ಪಿರಿಯಾಪಟ್ಟಣ, ಡಿ.7– ತಾಲೂಕಿನ ಬೆಟ್ಟದಪುರದ ಗ್ರಾಮದೇವತೆ ಶಾಂತ ವೀರಮ್ಮನವರ ವಾರ್ಷಿಕ ಹಬ್ಬ ಶುಕ್ರವಾರ (ಡಿ.8) ಬೆಳಿಗ್ಗೆ ದೇವಿಯ ಉತ್ಸವ ನಂತರ ರಾತ್ರಿ ತಂಬಿಟ್ಟು ಉತ್ಸವ, ಕೊಂಡೋತ್ಸವ ನಡೆಯಲಿದೆ.

ಗ್ರಾಮದ ಎಲ್ಲಾ ಸಮಾಜದ ಮುಖಂಡರು ಒಂದೊಂದು ಕಾರ್ಯಗಳನ್ನು ಮಾಡಿ ಪ್ರತಿ ವರ್ಷ ಕಾರ್ತಿಕ ಮಾಸದ ಮೂರನೆಯ ಶುಕ್ರವಾರ ಈ ಹಬ್ಬವನ್ನು ನಡೆಸಿಕೊಂಡು ಬರುವುದು ಇಲ್ಲಿನ ವಾಡಿಕೆ. ಅಂತೆಯೇ ಗ್ರಾಮ ದೇವತೆ ಹಬ್ಬವನ್ನು ಗ್ರಾಮಸ್ಥರು ಸಡಗರ ಸಂಭ್ರಮದಿಂದ ಆಚರಿಸಲಿದ್ದಾರೆ.

ನೂರಾರು ಮಂದಿಗೆ ಉಚಿತ ಆರೋಗ್ಯ ತಪಾಸಣೆ



ತಿ.ನರಸೀಪುರ.ಡಿ.7– ಪಟ್ಟಣದ ನಂಜನಗೂಡು ರಸ್ತೆಯಲ್ಲಿರುವ ಎಸ್.ಆರ್. ಗ್ಯಾಸ್ ಸರ್ವೀಸ್ ಗ್ರಾಹಕರ ಆರೋಗ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಮೊಹಿತಾ ವಿಜನ್ ಕೇರ್ ಸಂಯುಕ್ತಾಶ್ರಯದಲ್ಲಿ ಗುರುವಾರ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ಹಾಗೂ ಕಣ್ಣಿನ ತಪಾಸಣಾ ಕಾರ್ಯಕ್ರಮದಲ್ಲಿ ನೂರಾರು ಮಂದಿ ಗ್ರಾಹಕರು ಹಾಗೂ ಸಾರ್ವಜನಿಕರು ಆರೋಗ್ಯ ತಪಾಸಣೆಗೊಳಗಾಗಿ ಶಿಬಿರದ ಪ್ರಯೋಜನ ಪಡೆದುಕೊಂಡರು.

ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಬಿಪಿಸಿಲ್ (ಎಲ್‌ಪಿಜಿ) ರಾಜ್ಯ ಮುಖ್ಯಸ್ಥ ರಾಜೇಶ್ ಕುಂಬಾರೆ, ಗ್ರಾಹಕರ ಆರೋಗ್ಯದ ಬಗ್ಗೆ ಕಾಳಜಿ ಹೊಂದಿರುವ ಗ್ಯಾಸ್ ಏಜೆನ್ಸಿ ಮಾಲೀಕರ ಕಾರ್ಯಕ್ಷಮತೆಯು ಶ್ಲಾಘನೀಯವಾಗಿದ್ದು, ಇನ್ನೂ ಹೆಚ್ಚಿನ ಸಮಾಜ ಸೇವೆಯನ್ನು ರಿಯಾಜ್ ಅಹಮದ್ ದಂಪತಿಗಳು ಹಮ್ಮಿಕೊಳ್ಳುವಂತಾಗಲಿ ಎಂದರು.

ಎಸ್.ಆರ್.ಗ್ಯಾಸ್ ಸರ್ವೀಸ್ ಮಾಲೀಕರು ಆರೋಗ್ಯ ಶಿಬಿರ ಹಮ್ಮಿಕೊಳ್ಳುವ ಮೂಲಕ ಹೆಚ್ಚಿನ ಗ್ರಾಹಕರನ್ನು ಸೆಳೆಯುವಂತಾಗಲಿ ಎಂದ ಅವರು, ತಿ.ನರಸೀಪುರ ಪಟ್ಟಣದಲ್ಲಿ ಎಲ್‌ಪಿಜಿ ಗ್ಯಾಸ್ ಸಿಲಿಂಡರನ್ನು ಸಮರ್ಪಕವಾಗಿ ಪೂರೈಸುತ್ತಿರುವ ದಂಪತಿಗಳ ಕಾರ್ಯ ಮೆಚ್ಚುವಂತದ್ದಾಗಿದೆ ಎಂದು ಸಿಲಿಂಡರ್ ಪೂರೈಕೆಯ ಕ್ರಮವನ್ನು ಪ್ರಶಂಸಿಸಿದರು.

ಎಸ್.ಆರ್.ಗ್ಯಾಸ್ ಸರ್ವೀಸ್ ಮಾಲೀಕರು ಕೇವಲ ವ್ಯಾಪಾರ ಲಾಭಕ್ಕಾಗಿ ಸಿಲಿಂಡರ್ ಪೂರೈಸದೇ ಆರೋಗ್ಯ ತಪಾಸಣೆಯಂತಹ ಜನಪರ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಗ್ರಾಹಕರು ಹಾಗೂ ಮಾಲೀಕರ ನಡುವೆ ಉತ್ತಮ ಬಾಂಧವ್ಯ ಇರುವುದನ್ನು ನಾನು ಗಮನಿಸಿದ್ದೇನೆ. ಗ್ರಾಹಕರಿಂದ ಯಾವುದೇ ದೂರುಗಳು ಬಾರದ ರೀತಿಯಲ್ಲಿ ಮನೆ ಮನೆಗೆ ನಿಗದಿತ ಸಮಯಕ್ಕೆ ಸಿಲಿಂಡರ್ ಪೂರೈಕೆ ಮಾಡುವ ಮೂಲಕ ರಿಯಾಜ್ ಅಹಮದ್ ದಂಪತಿಗಳು ಈ ಭಾಗದ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುತ್ತಿದ್ದಾರೆ ಎಂದರು.

ಎಸ್‌ಆರ್ ಗ್ಯಾಸ್ ಸರ್ವೀಸ್ ಮಾಲೀಕ ರಿಯಾಜ್ ಅಹಮದ್ ಮಾತನಾಡಿ, ಭಾರತ್ ಗ್ಯಾಸ್ ಎಲ್‌ಪಿಜಿಯ ಗ್ರಾಹಕರನ್ನು ನಾವು ನಮ್ಮ ಕುಟುಂಬದಂತೆ ನೋಡುತ್ತೇವೆ. ಹಾಗಾಗಿ ಅವರ ಆರೋಗ್ಯ ನಮಗೆ ಬಹುಮುಖ್ಯವಾಗಿರುವುದರಿಂದ ಉಚಿತ ಆರೋಗ್ಯ ತಪಾಸಣೆ, ಕಣ್ಣಿನ ಪರೀಕ್ಷೆಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಮುಂದೆ ಪ್ರತಿ ವರ್ಷವೂ ಈ ರೀತಿಯ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಕೊಳ್ಳಲು ಉದ್ದೇಶ ಹೊಂದಿದ್ದೇವೆ ಎಂದರು.

ಇದೇ ವೇಳೆ ಕಳೆದ 24 ವರ್ಷಗಳಿಂದಲೂ ಭಾರತ್ ಗ್ಯಾಸ್ ಗ್ರಾಹಕರಾಗಿರುವ ಮಹದೇವ್, (ಚಿಳ್ಳು) ಜೆಎಸ್‌ಎಸ್‌ನ ಆನಂದ್, ಶಾಂತಮ್ಮ, ಬುಡಾನ್ ಸಾಬ್ ಹಾಗೂ ನೂರ್ ಜಹಾನ್ ಅವರಿಗೆ ಬಹುಮಾನ ನೀಡಿ ಸನ್ಮಾನಿಸಲಾಯಿತು.

ನೂರಾರು ಮಂದಿ ಗ್ರಾಹಕರು ಉಚಿತ ಆರೋಗ್ಯ ತಪಾಸಣೆಗೆ ಒಳಗಾಗಿ ಕಣ್ಣು, ಬಿಪಿ, ಶುಗರ್ ಪರೀಕ್ಷೆ ಮಾಡಿಸಿಕೊಂಡರು.

ಬಿಪಿಸಿಲ್‌ನ ಪ್ರದೇಶ ವ್ಯವಸ್ಥಾಪಕ ಬಿವಾಶ್ ಮೊಂಡಲ್,ಮಾರುಕಟ್ಟೆ ಅಧಿಕಾರಿ ನಿತಿನ್ ಥಾಮ್ಸನ್, ಷಹನಾಜ್ ರಿಯಾಜ್, ತಾಯೂರು ಪ್ರಕಾಶ್ ಹಾಜರಿದ್ದರು.

ನಾಗರತ್ನಮ್ಮ ನಿಧನ



ಸರಗೂರು, ಡಿ.7– ತಾಲೂಕಿನ ನಿವಾಸಿ ನಾಗರತ್ನಮ್ಮ (90) ಅವರು ಇಂದು ನಿಧನರಾಗಿದ್ದಾರೆ. ವೀರಶೈವ ಸಮಾಜದ ಯಜಮಾನರಾದ ಲೇಟ್ ಶಿವಣ್ಣನವರ ಧರ್ಮಪತ್ನಿಯಾದ ನಾಗರತ್ನಮ್ಮ ಅವರು ಮೈಸೂರಿನ ಶಂಕರ ಮಠದ ರಸ್ತೆ ನಿವಾಸದಲ್ಲಿ ವಾಸವಾಗಿದ್ದು, ಗುರುವಾರ ನಿಧನರಾಗಿದ್ದಾರೆ. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಮೈಸೂರಿನ ವಿದ್ಯಾರಣ್ಯಪುರಂ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಶಂಭಮ್ಮ ನಿಧನ



ತಿ.ನರಸೀಪುರ, ಡಿ.7– ತಾಲೂಕಿನ ಸಿದ್ದನಹುಂಡಿ ಗ್ರಾಮದ ಶ್ರೀಮತಿ ಶಂಭಮ್ಮ(96) ಅವರು ಇಂದು ನಿಧನರಾಗಿದ್ದಾರೆ. ಮೃತರು ಬಿಜೆಪಿ ಹಿರಿಯ ಮುಖಂಡ ಹಾಗೂ ವಕೀಲ ಎಂ.ದಾಸಯ್ಯ ಸೇರಿದಂತೆ ಮೂವರ ಪುತ್ರರು, ಐವರು ಪುತ್ರಿಯರನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಶುಕ್ರವಾರ (ಡಿ.8) ಬೆಳಿಗ್ಗೆ 11.30ಕ್ಕೆ ಸ್ವಗ್ರಾಮದಲ್ಲಿ ಸಿದ್ದನಹುಂಡಿ ಗ್ರಾಮದ ತೋಟದಲ್ಲಿ ನೆರವೇರಿಸಲಾಗುತ್ತದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ತಾಯಿ ಮಡಿಲು ಸೇರಿದ ಚಿರತೆ ಮರಿಗಳು



ತಾಯಿ ಚಿರತೆಯೊಂದಿಗೆ ಮೂರು ಮರಿಗಳನ್ನು ಬೋನ್‌ನಲ್ಲಿ ಅರಣ್ಯ ಭವನಕ್ಕೆ ತರಲಾಯಿತು.

ಮೈಸೂರು, ಡಿ.7(ಎಸ್‌ಬಿಡಿ)– ಕಬ್ಬಿನ ಗದ್ದೆಯಲ್ಲಿ ರಕ್ಷಿಸಲಾಗಿದ್ದ ಮೂರು ಚಿರತೆ ಮರಿಗಳನ್ನು ತಾಯಿ ಮಡಿಲಿಗೆ ಸೇರಿಸುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ. ಇವುಗಳಲ್ಲಿ ಒಂದು ಕಪ್ಪು ಬಣ್ಣದ್ದಾಗಿದೆ.

ಮೈಸೂರು ತಾಲೂಕು ಆಯರಹಳ್ಳಿ ಗ್ರಾಮದ ದ್ಯಾವಣ್ಣನಾಯಕ ಎಂಬುವರ ಕಬ್ಬಿನ ಗದ್ದೆಯಲ್ಲಿ ಕಟಾವು ಮಾಡುವ ವೇಳೆ ಅಪರೂಪದ ಕಪ್ಪು ಬಣ್ಣದ ಮರಿ ಸೇರಿ ಮೂರು ಚಿರತೆ ಮರಿಗಳು ಪತ್ತೆಯಾಗಿದ್ದವು. ಕಾರ್ಮಿಕರು ಹಾಗೂ ಗ್ರಾಮಸ್ಥರು ಮೂರು ಮರಿಗಳನ್ನು ರಕ್ಷಿಸಿ, ಅವುಗಳನ್ನು ಬಾಕ್ಸ್‌ನಲ್ಲಿಟ್ಟು ಅರಣ್ಯ ಸಿಬ್ಬಂದಿ ವಶಕ್ಕೆ ನೀಡಿದ್ದರು.

ಹಾಲು ಕುಡಿಯುವ ಸ್ಥಿತಿಯಲ್ಲಿದ್ದ ಚಿಕ್ಕ ಮರಿಗಳನ್ನು ತಾಯಿಯ ಮಡಿಲಿಗೆ ಸೇರಿಸಲು ಅರಣ್ಯ ಇಲಾಖೆ ಸಿಬ್ಬಂದಿ ನಿರ್ಧರಿಸಿ, ಬುಧವಾರ ರಾತ್ರಿಯಿಡೀ ಕಬ್ಬಿನ ಗದ್ದೆಯಲ್ಲಿ ಮೂರು ಮರಿಗಳನ್ನಿಟ್ಟು ಕಾವಲು ಕಾದಿದ್ದರು. ಆದರೆ ಅಂದು ರಾತ್ರಿ ತಾಯಿ ಚಿರತೆ ಸ್ಥಳಕ್ಕೆ ಬಂದಿರಲಿಲ್ಲ. ಈ ಹಿನ್ನೆಲೆಯಲ್ಲಿ ಗುರುವಾರ ಕಾರ್ಯಾಚರಣೆಯ ಸ್ವರೂಪ ಬದಲಿಸಿ, 3 ಮರಿಗಳನ್ನು ಬೋನಿನಲ್ಲಿಟ್ಟು ಕಬ್ಬಿನ ಗದ್ದೆಯಲ್ಲಿ ಇಡಲಾಗಿತ್ತು.

ಸದ್ಯ ಇಂದು ಸಂಜೆ ಮರಿಗಳಿದ್ದ ಬೋನಿಗೆ ತಾಯಿ ಚಿರತೆ ಬಂದು ಸೇರಿದೆ. ಸೆರೆಸಿಕ್ಕ ತಾಯಿ ಚಿರತೆ ಹಾಗೂ ಮೂರು ಮರಿಗಳನ್ನು ಮೈಸೂರಿನ ಅರಣ್ಯ ಭವನಕ್ಕೆ ತಂದು ಅವುಗಳ ಆರೋಗ್ಯ ಸ್ಥಿತಿ ಪರಿಶೀಲಿಸಲಾಗುತ್ತಿದೆ. ಚಿಕ್ಕ ಮರಿಗಳಾಗಿರುವುದರಿಂದ ತಾಯಿಯ ಆರೈಕೆ ಬಹಳ ಮುಖ್ಯವಾಗಿದೆ. ಈ ಕಾರಣದಿಂದ ಹಿರಿಯ ಅಧಿಕಾರಿಗಳ ಅನುಮತಿ ಪಡೆದು ತಾಯಿ ಚಿರತೆಯೊಂದಿಗೆ ಮರಿಗಳನ್ನೂ ಸುರಕ್ಷಿತ ಅರಣ್ಯ ಪ್ರದೇಶದಲ್ಲಿ ಬಿಡಲು ನಿರ್ಧರಿಸಿರುವುದಾಗಿ ತಿಳಿದುಬಂದಿದೆ.

ಬಂಡೀಪುರ ಅಭಯಾರಣ್ಯದಲ್ಲಿ ಕೊಳೆತ ಸ್ಥಿತಿಯಲ್ಲಿ ಆನೆ ಕಳೇಬರ ಪತ್ತೆ



ಮೈಸೂರು, ಡಿ.7(ಎಸ್‌ಬಿಡಿ)– ಕಂಡಿ ಅರಣ್ಯ ಪ್ರದೇಶದಲ್ಲಿ ಗಂಡಾನೆಯೊಂದರ ಕಳೇಬರ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಬಂಡೀಪುರ ಹುಲಿ ಯೋಜನೆ, ಗುಂಡ್ಲುಪೇಟೆ ಉಪ ವಿಭಾಗ, ಓಂಕಾರ ವನ್ಯಜೀವಿ ವಲಯ ವ್ಯಾಪ್ತಿಯ ನಾಗಣಾಪುರ ಬ್ಲಾಕ್–02 ಗಸ್ತಿನ, ಹುಣಸೆತಾಳ ಕಂಡಿ ಅರಣ್ಯ ಪ್ರದೇಶದಲ್ಲಿ ಬುಧವಾರ ಸಂಜೆ ಉಪ ವಲಯ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿ ಗಸ್ತಿನಲ್ಲಿದ್ದ ಸಂದರ್ಭದಲ್ಲಿ ಕೊಳೆತ ವಾಸನೆ ಬಂದಿದೆ. ಈ ಹಿನ್ನೆಲೆಯಲ್ಲಿ ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ಪರಿಶೀಲನೆ ನಡೆಸಿದಾಗ 40–45 ವರ್ಷದ ಗಂಡಾನೆ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ.

ವಲಯ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿ, ಪರಿಶೀಲಿಸಿದ ಬಳಿಕ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶಕರಿಗೆ ಮಾಹಿತಿ ನೀಡಿ, ಗುರುವಾರ ಪಶುವೈದ್ಯಾಧಿಕಾರಿಗಳಿಂದ ವೈದ್ಯಕೀಯ ಪರೀಕ್ಷೆ ನಡೆಸಿದಾಗ ಅದು ಸ್ವಾಭಾವಿಕವಾಗಿ ಮೃತಪಟ್ಟಿರುವುದಾಗಿ ದೃಢಪಟ್ಟಿದೆ. ಬಳಿಕ ಕಳೇಬರದಿಂದ ದಂತಗಳನ್ನು ಬೇರ್ಪಡಿಸಿ, ಇಲಾಖೆಯ ವಶಕ್ಕೆ ಪಡೆದ ನಂತರ ಕಳೇಬರವನ್ನು ನಿಯಮಾನುಸಾರ ಅರಣ್ಯ ಪ್ರದೇಶದಲ್ಲೆ ಬಿಡಲಾಯಿತು.

ಈ ಸಂದರ್ಭದಲ್ಲಿ ಬಂಡೀಪುರ ಹುಲಿ ಯೋಜನೆಯ ಅರಣ್ಯ ಸಂರಕ್ಷಣಾಧಿಕಾರಿ, ಕ್ಷೇತ್ರ ನಿರ್ದೇಶಕ ರಮೇಶ್ ಕುಮಾರ್, ಗುಂಡ್ಲುಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ.ರವೀಂದ್ರ, ಓಂಕಾರ ವನ್ಯಜೀವಿ ವಲಯದ ವಲಯ ಅರಣ್ಯಾಧಿಕಾರಿ ಕೆ.ಪಿ.ಸತೀಶ್ ಕುಮಾರ್, ಉಪ ವಲಯ ಅರಣ್ಯಾಧಿಕಾರಿ ಕೆ.ಪಿ.ಅಮರ್(ಪ್ರಭಾರ), ಗಸ್ತು ವನಪಾಲಕರಾದ ಬಿ.ಸಂತೋಷ, ಮಿರ್ಜಾ ವಾಸೀಂ, ಇಲಾಖಾ ಪಶುವೈದ್ಯಾಧಿಕಾರಿ ರಘುರಾಂ, ಸರ್ಕಾರೇತರ ಸಂಸ್ಥೆ ಸದಸ್ಯರು ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ. ನವೀನ ಎಚ್ ಆರ್ ರವರು ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಸುಮಾರು 71 ವರ್ಷ ವಯಸ್ಸಿನ ದಿವಂಗತ ಎಸ್ ಎಸ್ ಸಿಂಧಿಯಾರವರ ಹೆಂಡತಿಯಾದ ಶ್ರೀಮತಿ. ಕಸ್ತೂರಿ ಸಿಂಧಿಯಾ ರವರಿಂದ ಖರೀದಿಸಲು ಇಚ್ಚೆಯುಳ್ಳವರಾಗಿದ್ದು, ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾವುದೇ ವ್ಯಕ್ತಿ/ಸಂಘ ಸಂಸ್ಥೆಗಳಿಗೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಸ್ವಾಧೀನ, ಮಾಲೀಕತ್ವ, ಋಣಭಾರ, ಅಡಮಾನ ಕ್ಲೇಮ್, ತಕರಾರು, ವಗೈರೆಗಳು ಇದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿ/ಸಂಘ ಸಂಸ್ಥೆಗಳ ಪ್ರತಿನಿಧಿಗಳು ಈ ಪ್ರಕಟಣೆ ಪ್ರಕಟವಾದ ದಿನದಿಂದ 7 ದಿನಗಳ ಒಳಗೆ ಈ ಕೆಳಗೆ ನಮೂದಿಸಿರುವ ಕಚೇರಿಯ ವಿಳಾಸಕ್ಕೆ ದಾಖಲೆಗಳ ಸಮೇತ ತಮ್ಮ ಹಕ್ಕು, ಹಿತಾಸಕ್ತಿ, ಸ್ವಾಧೀನ, ಮಾಲೀಕತ್ವ, ಋಣಭಾರ, ಅಡಮಾನ ಕ್ಲೇಮ್, ತಕರಾರು ಸಾಬೀತುಪಡಿಸಬಹುದಾಗಿರುತ್ತದೆ. ನಿಗದಿತ ಅವಧಿಯೊಳಗೆ ದಾಖಲೆಯ ಸಮೇತ ತಕರಾರು ವಗೈರೆಗಳು ಬರದೇ ಇದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲಿನಲ್ಲಿ ನಮೂದಿಸಿರುವ ಸ್ವತ್ತನ್ನು ಖರೀದಿಸುವ ನಿಟ್ಟಿನಲ್ಲಿ ಕ್ರಮ ವಹಿಸಲು ಸಿದ್ಧರಿದ್ದು ಮುಂದೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಬರಬಹುದಾದಂತಹ ತಂಟೆ ತಕರಾರುಗಳಿಗೆ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲವೆಂದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸದ್ಭಾವಿತ ಖರೀದಿದಾರರೆಂದು ಪರಿಗಣಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ 4ನೇ ಹಂತ, 2ನೇ ಘಟ್ಟ, ನಿವೇಶನ ಸಂಖ್ಯೆ 4535ಕ್ಕೆ ಚಕ್ಕುಬಂದಿ:

ಪೂರ್ವಕ್ಕೆ : ನಿವೇಶನ ಸಂಖ್ಯೆ 4534 ; ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 4536 ; ಉತ್ತರಕ್ಕೆ: ನಿವೇಶನ ಸಂಖ್ಯೆ 4482 ; ದಕ್ಷಿಣಕ್ಕೆ: ರಸ್ತೆ.

ಈ ಮಧ್ಯೆ ಇರುವ ಪೂರ್ವ–ಪಶ್ಚಿಮ 12:00 ಮೀಟರ್, ದಕ್ಷಿಣೋತ್ತರ: 18:00 ಮೀಟರ್ ಒಟ್ಟು 216:00 ಚದರ ಮೀಟರ್ ವಿಸ್ತೀರ್ಣವುಳ್ಳ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಂಜೂರಾದ ಖಾಲಿ ನಿವೇಶನ.

ಸಹಿ/– ಎಸ್.ಎಮ್. ಹರ್ಷಕಿರಣ್, ವಕೀಲರು, ನಂ. 2776, 1ನೇ ಮಹಡಿ, ಚೌಡೇಶ್ವರಿ ಕಾಂಪ್ಲೆಕ್ಸ್, ರೈಲ್ವೆ ಗೇಟ್ ರಸ್ತೆ, ಕೆ. ಜಿ. ಕೊಪ್ಪಲು, ಮೈಸೂರು–570009. Mob: 7337884885. Email: nyaayavedevaru@gmail.com

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಪ್ರಥಮ ವರ್ಷದ ಪುಣ್ಯಸ್ಮರಣೆ



ದುಃಖತಪ್ತರು: ಮೀನಾ, ಪದ್ಮಾ ಮಣಿ–ಉದಯ ಜಿತೇಂದ್ರ, ಮಂಜುನಾಥ್, ಮೊಮ್ಮಕ್ಕಳು ಮತ್ತು ಬಂಧುಮಿತ್ರರು ಹಾಗೂ ಕುಟುಂಬವರ್ಗದವರು

ಶ್ರೀಮತಿ ಕಮಲಮ್ಮ

8ನೇ ವರ್ಷದ ಪುಣ್ಯಸ್ಮರಣೆ



H.N. ಸ್ವಾಮಿ, ಹೋಟೆಲ್

ಇಂದಿಗೆ ನೀವು ನಮ್ಮನ್ನಗಲಿ 8 ವರ್ಷ ಕಳೆದರೂ ಸದಾ ನಿಮ್ಮ ಆಶೀರ್ವಾದದೊಂದಿಗೆ ಮುನ್ನಡೆಯುತ್ತಿರುವ ನಿಮ್ಮ ಕುಟುಂಬ.

ಪತ್ನಿ, ಮಕ್ಕಳು, ಸ್ವಾಮಿ ಹೋಟೆಲ್, ಹುಲ್ಲಹಳ್ಳಿ

CHANGE OF NAME

I, **Sundara Gowda,** S/o Chaugha Gowda, No. 23 KHB Colony, Shankar Nagar, Mandya-571401, have changed my minor Daughter's name from **Sakshi** to **Sakshi S. Gowda.**

Sd/- Sundara Gowda

ಶ್ರದ್ಧಾಂಜಲಿ



ದೇವರು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ, ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಅಚ್ಚ ಹಸಿರಾಗಿದೆ

ದುಃಖತಪ್ತರು: ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

ಶ್ರೀ ನಾಗೇಶ್ ಎಸ್., ಬಿ.ಕಾಂ

(ಲೇ|| ಸಿದ್ದಾಚಾರ್ ಮತ್ತು ಶಾರದಾರವರ ಮಗ) ಹೆಬ್ಬಾಳ್, ಮೈಸೂರು

ಜನನ: 27-07-1974 ಮರಣ: 29-11-2023

ವೈಕುಂಠ ಸಮಾರಾಧನೆ



ಎಂ.ಎನ್. ವೀಣಾ

ಆತ್ಮೀಯರೇ ನಮಸ್ಕಾರ,

ನನ್ನ ಧರ್ಮಪತ್ನಿ ಎಂ.ಎನ್. ವೀಣಾ ಕಳೆದ ನವೆಂಬರ್ 28ರಂದು ದೈವಾಧೀನರಾದರು. ತತ್ಸಂಬಂಧ ಡಿಸೆಂಬರ್ 8ರಂದು ಶುಕ್ರವಾರ ಮೈಸೂರಿನ ದಟ್ಟಗಳ್ಳಿಯ ಕನಕದಾಸ ನಗರ 12ನೇ ಕ್ರಾಸ್‌ನಲ್ಲಿರುವ ನಮ್ಮ ಸ್ವಗೃಹದಲ್ಲಿ ವೈಕುಂಠ ಸಮಾರಾಧನೆಯನ್ನು ಏರ್ಪಡಿಸಲಾಗಿದೆ. ತಾವೆಲ್ಲರೂ ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಕೋರಬೇಕಾಗಿ ಈ ಮೂಲಕ ಪ್ರಾರ್ಥಿಸುತ್ತೇನೆ.

ಇಂತಿ ತಮ್ಮ ವಿಶ್ವಾಸಿ :
– ರಾಜಕುಮಾರ್ ಭಾವಸಾರ್, ಮೈಸೂರು